ವರಕವಿ ಡಾ. ದ.ರಾ. ಬೇಂದ್ರೆ ವಿರಚಿತ

# ಅಂಬಿಕಾತನಯದತ್ತ ಬೇಂದ್ರೆ ಕಂಡ
# ಭಾವರಾಗ ಮಂಜರಿ

(ಶಾಸ್ತ್ರೀಯ ಸಂಗೀತಕ್ಕೆ ಕನ್ನಡ ಚೀಜುಗಳು)



ಸಂಪಾದಕರು :
ಡಾ. ವಾಮನ ಬೇಂದ್ರೆ

ಪ್ರಕಾಶಕರು : ಬೇಂದ್ರೆ ಸಂಶೋಧನಾ ಸಂಸ್ಥೆ, ಬೇಂದ್ರೆ ಸಂಗೀತ ಅಕಾಡೆಮಿ




# ಅಂಬಿಕಾತನಯದತ್ತ

# ಬೇಂದ್ರೆ ಛಂದ ಭಾವ ರಾಗ ಮಂಜರಿ

([illegible])





# ಅಂಬಿಕಾತನಯದತ್ತ

# ಬೇಂದ್ರೆ ಕಂಡ ಭಾವ ರಾಗ ಮಂಜರಿ

(ಹಿಂದೂಸ್ತಾನಿ/ಕರ್ನಾಟಕೀ ಶಾಸ್ತ್ರೀಯ ಸಂಗೀತ ಸ್ವರ ಸಂಯೋಜನೆ ಒಳಗೊಂಡು)



ವರಕವಿ ಡಾ॥ ದ. ರಾ. ಬೇಂದ್ರೆ ಸಾಹಿತ್ಯ-ಸಂಗೀತ ಸಂಗಮ ಕೃತಿ

# ಅಂಬಿಕಾತನಯದತ್ತ

# ಬೇಂದ್ರೆ ಕಂಡ ಭಾವ ರಾಗ ಮಂಜರಿ

(ಹಿಂದೂಸ್ತಾನಿ/ಕರ್ನಾಟಕೀ ಶಾಸ್ತ್ರೀಯ ಸಂಗೀತ ಸ್ವರ ಸಂಯೋಜನೆ ಒಳಗೊಂಡು)

ಸಂಪಾದಕರು :

ಡಾ॥ ವಾಮನ ಬೇಂದ್ರೆ

ಸಂಗೀತ ಸಂಯೋಜಕರು :

ಶ್ರೀಮತಿ ವೀಣಾ ಶಿರಾಲಿ

ಕಲೆ :

ಶ್ರೀ ಸುರೇಶ ಕುಲಕರ್ಣಿ

ಪ್ರಕಾಶಕರು :

ಡಾ॥ ಕೆ. ಎಸ್. ಶರ್ಮಾ, ನಿರ್ದೇಶಕರು,

ವರಕವಿ ಡಾ॥ ದ. ರಾ. ಬೇಂದ್ರೆ ಸಂಶೋಧನ ಸಂಸ್ಥೆ

ಹಾಗೂ ಬೇಂದ್ರೆ ಸಂಗೀತ ಅಕಾಡೆಮಿ, ಹುಬ್ಬಳ್ಳಿ

★ **AMBIKATANAYADATTA BENDRE KANDA BHAVA RAGA MANJARI**
(A Collection of Poems by DR. D. R. BENDRE
comprising of Musical Notations for Hindustani Classical)

★ Edited by : Dr. Vaman Bendre.

★ Art by : Sri. Suresh Kulkarni.

★ Music Compositions by : Smt.Veena Shirali

★ D. T. P. : Sri Iranna B. Noolvi - D.T.P. Section - Dr. K. S. Sharma I. T. C., Hubli

★ Published by : Dr. K. S. Sharma,
Director, Poet Laureate Dr.D.R.Bendre Research Institute and Bendre Sangeeth Academy,
"Vishwashrama Chetana", Gokul Road, Hubli- 580 030. (Phone 0836-2330466)

★ First Edition : 1000 copies

★ Published on : 13-2-2006
(On the occasion of the 110th Birth Anniversary of Dr. D. R. Bendre &
6th Anniversary of Bendre Research Institute : 13-2-2006-Gurupratipada)

★ Price : Rs.120-00



★ ಅಂಬಿಕಾತನಯದತ್ತ ಬೇಂದ್ರೆ ಕಂಡ ಭಾವ ರಾಗ ಮಂಜರಿ
ವರಕವಿ ಡಾ॥ದ.ರಾ.ಬೇಂದ್ರೆ ರಚನೆ : ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಸ್ವರ ಸಂಯೋಜನೆ ಒಳಗೊಂಡ ಕವನಗಳ ಸಂಕಲನ

★ ಸಂಪಾದಕರು : ಡಾ॥ ವಾಮನ ಬೇಂದ್ರೆ.

★ ಕಲೆ : ಶ್ರೀ ಸುರೇಶ ಕುಲಕರ್ಣಿ.

★ ಸಂಗೀತ ಸಂಯೋಜನೆ : ಶ್ರೀಮತಿ ವೀಣಾ ಶಿರಾಲಿ

★ ಪುಟ ವಿನ್ಯಾಸ : ಶ್ರೀ ಈರಣ್ಣ ಬ. ನೂಲ್ವಿ-ಡಿ.ಟಿ.ಪಿ. ವಿಭಾಗ, ಡಾ. ಕೆ. ಎಸ್. ಶರ್ಮಾ ಸಮೂಹ ಸಂಸ್ಥೆಗಳು, ಹುಬ್ಬಳ್ಳಿ

★ ಮುದ್ರಕರು : ಶರ್ಮಾ ಮುದ್ರಕರು ಹಾಗೂ ಪ್ರಕಾಶಕರು, ೪, ಪತ್ರಕರ್ತರ ಕಾಲೋನಿ, ಹುಬ್ಬಳ್ಳಿ-೩೨

★ ಪ್ರಕಾಶಕರು :
ಡಾ॥ ಕೆ. ಎಸ್. ಶರ್ಮಾ,
ನಿರ್ದೇಶಕರು, ವರಕವಿ ಡಾ॥ ದ. ರಾ. ಬೇಂದ್ರೆ ಸಂಶೋಧನ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾಡೆಮಿ,
'ವಿಶ್ವ ಶ್ರಮಚೇತನ', ಗೋಕುಲ ರಸ್ತೆ, ಬಸವೇಶ್ವರ ನಗರ, ಹುಬ್ಬಳ್ಳಿ-೫೮೦ ೦೩೦

★ ಪುಸ್ತಕಗಳಿಗಾಗಿ ಬರೆಯಿರಿ :
ರವೀಂದ್ರ ಪುಸ್ತಕಾಲಯ,
ಚಾಮರಾಜಪೇಟೆ, ಸಾಗರ - **577 401**, ಶಿವಮೊಗ್ಗ ಜಿಲ್ಲೆ ದೂರವಾಣಿ : **08183-228616** (ಕ).

★ ಮೊದಲ ಮುದ್ರಣ : ೧೦೦೦ ಪ್ರತಿಗಳು

★ ಮೊದಲ ಪ್ರಕಟಣೆ : (ಡಾ॥ ದ. ರಾ. ಬೇಂದ್ರೆಯವರ ೧೧೦ನೇ ವಾರ್ಷಿಕ ಜನ್ಮದಿನ ಹಾಗೂ
ಬೇಂದ್ರೆ ಸಂಶೋಧನ ಸಂಸ್ಥೆಯ ೬ನೇ ವಾರ್ಷಿಕೋತ್ಸವದ ಪ್ರಯುಕ್ತ : ೧೩-೨-೨೦೦೬ - ಗುರುಪ್ರತಿಪದಾ)



★ ಬೆಲೆ : ರೂ.೧೨೦-೦೦

# ಅರ್ಪಣೆ

ಜಗತ್ತಿನ ಕೂಲಿಕಾರರನ್ನು
ಒಕ್ಕಟ್ಟು ಮಾಡುವ ಕನಸು ಕಾಣುವ
''ವಿಶ್ವಶ್ರಮ ಚೇತನ''ಕ್ಕೆ
ಹೋರಾಟದ ಧ್ವನಿಯಾಗಲಿ
ಎಂಬ ಆಶಯ ಹೊತ್ತು
ಈ ಆಯ್ದ ಕವನಗಳ ಸಂಗ್ರಹ
ಅರ್ಪಿಸುತ್ತೇವೆ.

- ಸಂಪಾದಕರು

# ಪರಿವಿಡಿ

## ಭಾಗ -೨ ಶಾಸ್ತ್ರೀಯ ಸಂಗೀತ ಸಂಯೋಜನೆ

## ಅಂಬಿಕಾತನಯದತ್ತ-ಬೇಂದ್ರೆ ಕಂಡ ಭಾವ ರಾಗ ಮಂಜರಿ - ಭೂಮಿಕೆ

ಶ್ರೀಮತಿ ವೀಣಾ ಶಿರಾಲಿಯವರು ಬೇಂದ್ರೆ ಸಂಗೀತ ಅಕಾಡೆಮಿಯ ಪ್ರಾರಂಭದ ಸದಸ್ಯರು. ಪ್ರತಿವರ್ಷ ಬೇಂದ್ರೆ ಸಂಗೀತ ಸೇವೆಯಲ್ಲಿ ಭಾಗಪಡೆಯುತ್ತಿದ್ದರು. ಈ ವರ್ಷ ಅವರು, ಅವರ ಸಂಗೀತ ವಿದ್ಯಾಗುರುಗಳಾದ ಶ್ರೀಮತಿ ಆರ್. ವಸಂತಾದೇವಿ ಜಂತಲಿಯವರೊಂದಿಗೆ ಚರ್ಚಿಸಿ, ಬೇಂದ್ರೆ ಸಾಹಿತ್ಯಕ್ಕೆ ಹಿಂದುಸ್ತಾನಿ ಹಾಗೂ ಕರ್ನಾಟಕಿ ಶಾಸ್ತ್ರೀಯ ಸಂಗೀತ ಸ್ವರಸಂಯೋಜನೆ ಮಾಡುವಲ್ಲಿ ಮಾರ್ಗದರ್ಶನ ಅಪೇಕ್ಷಿಸಿದರು. ಶ್ರೀಮತಿ ಜಂತಲಿಯವರ ಉತ್ತೇಜಕ ಪ್ರೇರಣೆಯ ಮೂಲಕ, ''ಬೇಂದ್ರೆ ಕಂಡ-ಭಾವ ರಾಗ ಮಂಜರಿ'' ಎಂಬ ಮಹತ್ತ್ವದ ಕೃತಿ ಈಗ ಪ್ರಕಟವಾಗುತ್ತಿರುವುದು ಅತ್ಯಾನಂದದ ವಿಷಯ. ಈ ಕೃತಿಯಲ್ಲಿ - ಅಂಬಿಕಾತನಯದತ್ತರ ಸಮಗ್ರಕಾವ್ಯ-ಜೀವನಮಹಾಕಾವ್ಯವಾಗಿರುವ - ಔದುಂಬರಗಾಥೆಯ ಆರೂ ಸಂಪುಟಗಳನ್ನು ಅನ್ವಯಿಸಿ, ಐವತ್ತೆರಡು ಕವನಗಳ ಆಯ್ಕೆಮಾಡಲಾಗಿದೆ. ಮೂವತ್ತನಾಕು ಕವನಗಳ ಸ್ಥಾಯಿ-ಅಂತರಾಗಳಿಗೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಪದ್ಧತಿ ಹಾಗೂ ಹದಿನೆಂಟು ಕವನಗಳ ಸ್ಥಾಯಿ - ಅಂತರಾಗಳಿಗೆ ಕರ್ನಾಟಕಿ ಶಾಸ್ತ್ರೀಯ ಸಂಗೀತ ಪದ್ಧತಿಯನ್ನು ಅಳವಡಿಸಿ ಸ್ವರಸಂಯೋಜನೆ ಮಾಡಿದ್ದುದು ಅತ್ಯಂತ ಮಹತ್ತ್ವದ ನಿಲುವು. ವರ್ಷಕ್ಕೆ ೫೨ ವಾರ. ವಾರಕ್ಕೆ ಒಂದು ಗೀತ ಕಲಿಸಿದರೆ, ಒಂದು ವರ್ಷದ ಪಠ್ಯಪುಸ್ತಕ ಇದು.

ಬೇಂದ್ರೆಯವರ ''ಗರಿ'' ಕವನ ಸಂಗ್ರದೊಳಗಿನ ಪ್ರಖ್ಯಾತ ಕವನ ''ಹೂ''. ''ಪುಃ'' ಎಂದು ಬಿಟ್ಟುಸಿರೆ ತಾನೆ ಹೆಸರಾಯ್ತು'' ಎಂಬ ಸಾಲು ಬ್ರಹ್ಮಬಿಟ್ಟ ಉಸಿರಿನ ಮಹಿಮೆ ಸಾರುತ್ತದೆ. ''ಪುಃ'' ಎಂದದ್ದೇ - ಹೂ ಎಂಬ ಹಗುರಾದ ಹೆಸರಿನ ಜನನಕ್ಕೆ ಕಾರಣ. ಆದುದರಿಂದ ಬೇಂದ್ರೆ ಕಾವ್ಯದ ನಿಲುವು - ಈ ಸೃಷ್ಟಿ ಭಗವದ್ದೃಷ್ಟಿ! ''ನಾದಲೀಲೆ''

ಕವನಸಂಗ್ರಹದ "ಪಾರಿಜಾತ" ಕವನದ ಪ್ರಾರಂಭ - ಸಂಜೆಗೆಂಪು ಮೊದಲು ಹಿಂದೆ। ಬೆಳುದಿಂಗಳು ಅದರ ಮುಂದೆ। ವರ್ಣಕ್ರಮ ಕಾಣಲಮಮ। ಇದನು ಬ್ರಹ್ಮಬರೆದನೊ।". ಬೆಳದಿಂಗಳು - ಸುಖದ ಸಂಕೇತ. ಸಂಜೆಗೆಂಪು - ಕತ್ತಲದ ಪೂರ್ವಸ್ಥಿತಿ, ದುಃಖದ ಸಂಕೇತವಾಗಿದ್ದರೂ ಈ ಕೆಂಪು ಪ್ರಾತಃಕಾಲಕ್ಕೂ ಎದುರಾಗುತ್ತದೆ. ಸುಖದುಃಖ ಸಮನ್ವ ಮಾಡುವಾಗ, ದುಃಖದ ಬಣ್ಣ ಕಪ್ಪು ಎಂದು ಬ್ರಹ್ಮ ಹೇಳಿಲ್ಲ. ದುಃಖದಲ್ಲಿಯೂ ಅನುರಾಗದ ಕೆಂಪಿರುತ್ತದೆ. ದುಃಖದಿಂದ ಕುಗ್ಗಿಯೇ ಹೋಗುವ ಅವಶ್ಯಕತೆ ಇಲ್ಲ ಎಂಬ ಸಂದೇಶ ಬೇಂದ್ರೆಯವರದು. ಈ ಸಂದೇಶ ಗ್ರಹಿಸಿದವರು, ಕಷ್ಟಗಳನ್ನು ಎದುರಿಸುವ ಭಾವ ತಾಳಬೇಕು ಎಂಬುದು ಬೇಂದ್ರೆ ಅಪೇಕ್ಷೆ. ಸ್ವರಸಂಯೋಜಕರು ಈ ಕೃತಿಯಲ್ಲಿ "ಹೂ" ಮತ್ತು "ಪಾರಿಜಾತ" ಕವನಗಳಿಗೆ ಸ್ವರಸಂಯೋಜನೆಮಾಡಿದ್ದು ಯುಕ್ತ ಆಯ್ಕೆ. ನಾದದ ಆಂದೋಲನ ಮಹತ್ವದ ಮಂಥನ ಕ್ರಿಯೆ. ಇದರಿಂದ ಭಾವ ಎಂಬ ನವನೀತ - ಬೆಣ್ಣೆ ಪ್ರಾಪ್ತವಾಗಬೇಕು. "ಬೆಣ್ಣೆಹ್ಯಾಂಗ ಬಂತೋಽಽ ಮೇಲಕ ಹಾಕುತಿರು ಗೆಣೆಯಾ!" ಎಂದು ಬೇಂದ್ರೆ, ಸಂಗೀತಗಾರರನ್ನು ಎಚ್ಚರಿಸುತ್ತಾರೆ. ಭಾವಗಳನ್ನಾಧರಿಸಿ ರಾಗಸಂಯೋಜನೆಯನ್ನು ಸಂಗೀತ ಪರಂಪರೆ ನಿರ್ಮಿಸಿಕೊಟ್ಟಿದೆ. ಕಾವ್ಯದಲ್ಲಿಯ ಭಾವಗಳಿಗೆ ರಾಗಾಲಾಪ ತುಂಬುವುದು ಸಂಗೀತದ ಕಾರ್ಯ. ಕವಿಯ ಕಾವ್ಯಭಾಷೆಗೆ, ಸಂಗೀತದ ರಾಗಭಾಷೆಯ ಮಿಲನವಾದಾಗ ಕಾವ್ಯ ಪುಷ್ಪಗಳಿಗೆ - ತುಳಸಿಯ = ಮಂಜರಿಯ ಸುವಾಸನೆ ವ್ಯಾಪಿಸುತ್ತದೆ. ಇಂಥ ಈ ತುಳಸಿಯನ್ನು ಆಘ್ರಾಣಿಸಿದಾಗ, ಭಕ್ತಿಭಾವದ ಉದಯವಾಗುತ್ತದೆ. ಇಂಥ ಕಾರ್ಯಕ್ಕೆ ಬೇಂದ್ರೆ ಸಂಗೀತ ಅಕಾಡೆಮಿ ಪ್ರವೃತ್ತವಾದದ್ದು ಮಹತ್ವಪೂರ್ಣವಾಗಿದೆ. ಆದುದರಿಂದ ಈ ಕೃತಿಗೆ "ಬೇಂದ್ರೆ ಕಂಡ ಭಾವ ರಾಗ ಮಂಜರಿ" ಎಂಬ ನಾಮಕರಣ ಮಾಡಲಾಗಿದೆ.

ಶಾಸ್ತ್ರೀಯ ಸಂಗೀತಗಾರರು ಸಾಹಿತ್ಯಕ್ಕೆ ಮಹತ್ವಕೊಡಲಿಲ್ಲ. ಅವರಿಗೆ "ಸಮ" ಲಕ್ಷಕ್ಕೆ ತಂದುಕೊಡಲು ಒಂದು ಅಕ್ಷರ ಸಾಕು. ಸುಗಮಸಂಗೀತಕಾರರು ಸಾಹಿತ್ಯಕ್ಕೆ ಪ್ರಾಧಾನ್ಯಕೊಟ್ಟು ಹಾಡತೊಡಗಿದರು. ಆದರೆ ಅಪೇಕ್ಷಿತ ಭಾವಜಾಗೃತಿ ಆಗಲಿಲ್ಲ. ಇದಕ್ಕಾಗಿ ಬೇಂದ್ರೆ ಶಾಸ್ತ್ರೀಯಸಂಗೀತದ ನಾದಾನುಸಂಧಾನ, ಹಾಗೂ ನಾದದಿಂದ ಭಾವನವನೀತ ಹೊರಡಿಸುವ ವಿಧಾನಕ್ಕೆ ಪ್ರಾಧಾನ್ಯಕೊಟ್ಟರು. ನಾದದಿಂದ ನವನೀತ ಹೊರಡಬೇಕೆಂಬುದು ಸಂಪೂರ್ಣವಾಗಿ ಬೇಂದ್ರೆಯವರದೇ ಸ್ವತಂತ್ರ ವಿಚಾರ. ಇದನ್ನು ಯಾವ ಸಂಗೀತಗಾರರು ಹೇಳಿಲ್ಲ ಹಾಗೂ ಸಾಹಿತಿಗಳ ಗುರಿಯೂ ಆಗಿರಲಿಲ್ಲ.

ಬೇಂದ್ರೆಯವರ "ತಾ ಲೆಕ್ಕಣಿಕೆ ತಾ ದೌತಿ" ಮರಣೋತ್ತರ ಕವನಸಂಗ್ರಹದಲ್ಲಿ "ಧ್ವನಿಸೂತ್ರ" ಎಂಬ ಮಹತ್ವದ ಕವನವಿದೆ. ಇದನ್ನೂ ಈ ಕೃತಿಯಲ್ಲಿ ಸ್ವರಸಂಯೋಜನೆಯೊಂದಿಗೆ ಕೊಡಲಾಗಿದೆ. "ಸಹಿತತ್ವದಲ್ಲಿ ಸ್ವಹಿತ" ಎಂಬುದು ಬೇಂದ್ರೆಯವರ ಮಹತ್ವದ ಕಾವ್ಯಸಿದ್ಧಾಂತ. ಸಹಿತತ್ವ ಎಂದರೆ ಪರಸ್ಪರರ ಸಾಮರಸ್ಯ. ಇದರಲ್ಲಿ ಸ್ವಹಿತ ಇರುವಂತೆ ಪರಹಿತವೂ ಅಪೇಕ್ಷಿತ. ಕೂಡಿ ಬಾಳಬೇಕು ಎಂಬುದನ್ನು

ಅಪೇಕ್ಷಿಸದವರು ಯಾರು? ಕೂಡಿ ಬಾಳುವುದು ಆನಂದದ ಹಾದಿ. ಇದು ಸಾಹಿತಿಗಳಿಗೂ ಸಾಧ್ಯವಾಗಿಲ್ಲ ಮತ್ತು ಸಂಗೀತಕಾರರಿಗೂ ಸಾಧ್ಯವಾಗಿಲ್ಲ. ಸಾಹಿತಿ ಸಾಹಿತಿಗಳಲ್ಲಿ ವೈರ, ಸಂಗೀತ ಸಂಗೀತಕಾರರಲ್ಲಿ ವೈರ. ಉಳಿದೆಲ್ಲ ಕಲೆಗಳ ಕಲಾಕಾರರ ಸ್ಥಿತಿಯೂ ಇದೆ. ಇದೇ ಬೇಂದ್ರೆಯವರ ಪ್ರಮುಖ ವ್ಯಥೆ.

ಸಂಗೀತದಲ್ಲಿ ಹಾಡುವವನಿಗೆ ವಾದ್ಯವೃಂದ ಸಾಥ ಮಾಡುತ್ತದೆ. ನೃತ್ಯದ ಕಾಲಕ್ಕೆ ಗಾಯಕ ಹಾಗೂ ವಾದ್ಯವೃಂದದವರೂ ಸಾಥಮಾಡುತ್ತಾರೆ. ವೈರ ಭಾವ ಜಾಗೃತವಾದರೆ ಸಾಥ ಮಾಡುವುದು ಅಸಾಧ್ಯ. ಸಾಥ ಮಾಡುವುದೇ ಸಹಿತತ್ತ್ವ ಇದನ್ನು ಪ್ರತಿಯೊಬ್ಬರೂ ಸಂಗೀತ ಹಾಗೂ ನೃತ್ಯಕಲೆಯಿಂದ ಗ್ರಹಿಸಿಕೊಳ್ಳಬೇಕಾದ ಭಾವ. ಈ ಭಾವದಿಂದ ಜೀವನ ಸಾಗಿಸಿದಾಗ ಮಾತ್ರ ಭೂಲೋಕದ ಜೀವನ ಸುಖದಸಾಗರವಾದೀತು. ಇದು ಬೇಂದ್ರೆ ಕಂಡ ಮಹಾಕನಸು!

ಬೇಂದ್ರೆಯವರು ಸಂಗೀತದ ಪರಿಭಾಷೆಯನ್ನು ತಮ್ಮ ಕವನಗಳಲ್ಲಿ ಮತ್ತೆ ಮತ್ತೆ ಬಳಸುತ್ತಾರೆ. ನಾದಲೀಲೆ, ನಾದಮಯೂರ, ದೇವವೀಣೆ, ನಾದಬೇಕು, ನೀನಾದಿನೀ, ಶ್ರುತಿ, ನಾಕುತಂತಿ ಮೊದಲಾದ ಪದಪ್ರಯೋಗಗಳಿಂದ ಸಾಹಿತಿಯ ಲಕ್ಷ್ಯವನ್ನು ಸಂಗೀತದತ್ತ ಸೆಳೆಯುತ್ತಾರೆ. ಇದೇ ಕಾಲಕ್ಕೆ ಸಂಗೀತಗಾರರಿಗೆ ನಾದದಿಂದ ಭಾವನವನೀತ ಹುಟ್ಟಿಸಿ ಶ್ರೋತೃಗಳಿಗೆ ಅರ್ಪಿಸಿರಿ ಎಂದೂ ಎಚ್ಚರಿಸುತ್ತಾರೆ. ಕೃಷ್ಣ ನವನೀತಚೋರ! ತನ್ನ ಕೊಳಲಿನ ನಾದದಿಂದ - ಗೋವು, ಗೋಪಿ, ಗೋಪಾಲಕರ ಭಾವಜಾಗೃತಿ ಮಾಡುವಲ್ಲಿ ಸಫಲನಾದವನು. ಈ ಹಾದಿ ಸಂಗೀತಕಾರರದಾಗಬೇಕೇ ಹೊರತು, ಅವರು ನಾದಸಂಚಾರದಲ್ಲಿ ಮುಳುಗಿ ಭಾವನವನೀತಚೋರರಾಗಬಾರದು. ಇದೂ ಬೇಂದ್ರೆ ಸಂಗೀತ ಅಕಾಡೆಮಿಯ ಗುರಿ. ಇದನ್ನು ಅನುಲಕ್ಷಿಸಿ ಸ್ವರಸಂಯೋಜಕರು - ಧ್ವನಿಸೂತ್ರ, ದೇವವೀಣೆ, ಕೊಳಲನೂದಿದನೇನs, ಕಲ್ಪವೃಕ್ಷವೃಂದಾವನಗಳಲ್ಲಿ ಮೊದಲಾದ ಮಹತ್ತ್ವದ ಕವನಗಳಿಂದ ಸ್ಥಾಯಿ ಹಾಗೂ ಅಂತರಾಗಳ ಆಯ್ಕೆಮಾಡಿದ್ದಾರೆ.

''ಭಾವವಿಲ್ಲದೇ ರಸವು ಹರಿವುದೇ। ಅಮೃತ ಜೀವದಾಟ'' ಎಂದಿದ್ದಾರೆ ಬೇಂದ್ರೆ. ಸಂಗೀತದ ಮೂಲಸ್ವರ - ಅನಾಹತನಾದ - ಓಂ. ಸಾಹಿತ್ಯದ ಮೂಲಸ್ವರ ಶಂಖನಾದಕ್ಕಿಂತ ಕಿಂಚಿತ್ ಊನ. ಈ ಊನ=ಕೊರತೆಯನ್ನು ಸಂಹರಿಸಲು ಸಾಹಿತ್ಯ ಹಾಗೂ ಸಂಗೀತದ ಮಿಲನ ಅತ್ಯಂತ ಅವಶ್ಯ. ಇದನ್ನು ಇಬ್ಬರೂ ಗ್ರಹಿಸಿದ್ದಾದರೆ ವೈರಭಾವ ಅಳಿದು, ಸ್ನೇಹಭಾವ ಬೆಳೆಯಲು ಓಂಕಾರ ಹಾದಿಮಾಡಿಕೊಡುತ್ತದೆ. ಇದು ಬೇಂದ್ರೆ ಕಾವ್ಯದ ವಿಶಿಷ್ಟ ದರ್ಶನ.

''ಹರಓಂ, ಹರಿಓಂ, ಹರಿಹರ ಓಂ ಬ್ರಹ್ಮಾ
ಅವಳಿಜವಳಿ ಸಂಬಂಧವು ಇದೆ ನಮ್ಮಾ ನಿಮ್ಮಾ
ಹುಟ್ಟಿನ ಗುಟ್ಟನು ಹೇಳಲು, ಕೇಳಲು ಇರು ಸುಮ್ಮಾ''

''ಹುಟ್ಟಿನ ಗುಟ್ಟು'' ಎಂಬ ಬೇಂದ್ರೆ ಕವನದ ಸಾಲುಗಳೂ ಸ್ವರಸಂಯೋಜನೆ ಪಡೆದಿವೆ. ಹರ ಮತ್ತು ಹರಿ ಇವರನ್ನು ಹುಟ್ಟಿಸಿದವರು ಯಾರು? ಈ ಇಬ್ಬರಿಂದ ಜನತೆಗೆ ''ಓಂ''=ಸುಖ, ಸಮಾಧಾನ, ಶಾಂತಿ ಪ್ರಾಪ್ತವಾಗಿದೆಯೇ? ''ಹರಿ'', ''ಹರ''ರಲ್ಲಿಯೇ ಅವಳಿ-ಜವಳಿ ಎಂಬ ಸಮಾನತೆಯ ಭಾವದ ನಿಷ್ಪತ್ತಿ ಆಗಿಲ್ಲ. ಇದನ್ನು ಸಾಧ್ಯಮಾಡುವುದು ಸಾಹಿತಿ ಹಾಗೂ ಸಂಗೀತಗಾರರ ಕರ್ತವ್ಯ. ಇದನ್ನು ಪಾಲಿಸದಿದ್ದರೆ, ದೇವರೇನೇನೂ ಮಾಡನು. ಅವನು ಮಹಾಮೌನಿ. ಅಸುರರ ಹಾವಳಿಯನ್ನು ಬಗೆಹರಿಸುವಲ್ಲಿಯೇ ದೇವರೆಲ್ಲ ತೊಡಗಿದ್ದಾರೆ! ದೇವರ ಕೃಪೆಗಾಗಿ ಪ್ರಾರ್ಥನೆ ಮಾಡುವ ಕೀರ್ತನಕಾರರ ವ್ಯಥೆಗೆ ಕಿವಿಗೊಡುವವರಾರು? ಆದುದರಿಂದ ಕೀರ್ತನಕಾರರೂ ''ಮಾವಿದ್ವಿಷಾವಹೈ'' ದ್ವೇಷದ ವಿಷವನ್ನು ನಾವೇ ಪರಿಹರಿಸಿಕೊಳ್ಳಬೇಕು ಎಂಬ ಸಂದೇಶ ಸಾರಬೇಕಾಗಿದೆ.

ನಾರದ, ಸರಸ್ವತಿ ಮತ್ತು ಕೀರ್ತನಕಾರರು ತಂತುವಾದ್ಯ ಬಳಸುತ್ತಾರೆ. ತಂಬೂರಿ, ಕಿನ್ನರಿ, ಏಕತಾರಿ ಮೊದಲಾದ ತಂತುವಾದ್ಯ ಬಳಸಿ ಭಕ್ತರು ಭಕ್ತಿಭಾವದ ಗೀತಹಾಡುತ್ತ ಬಂದಿದ್ದಾರೆ. ಇವರಿಗೆ ಶಾಂತಿ ಲಭಿಸಿದೆಯೇ ಎಂಬುದು ಬೇಂದ್ರೆ ಪ್ರಶ್ನೆ. ತಂತುವಾದ್ಯ ಶ್ರುತಿಗೊಳಿಸುವುದು ಮಹಾಕಷ್ಟ ಎಂಬುದು ಸಂಗೀತಗಾರರೆಲ್ಲ ಬಲ್ಲರು. ವಾದ್ಯ ಶ್ರುತಿಗೊಳಿಸುವಲ್ಲಿ ಸಿದ್ಧಹಸ್ತರಾದ ಸಂಗೀತಗಾರರು, ಜನರ ಜೀವನಶ್ರುತಿಗೊಳಿಸುವ ಭಾವಜಾಗೃತಿಯ ಕಾರ್ಯ ಕೈಕೊಳ್ಳಬೇಕು ಎಂಬುದು ಬೇಂದ್ರೆಯವರ ಕಾವ್ಯದ ಅಪೇಕ್ಷೆ.

''ತಂಬೂರಿ ತುಂಬೆಲ್ಲ ಕೀಸರ ಬಾಸರ। ಬೇಸರ ಬಂದೈತಿ'' ಹಾಗೂ ''ತಳ ಊರಿದ ಚಿಂತಿ, ತಳಕಿತ್ತಿ ಓಡಬೇಕಾದರೆ'' ಸಾಹಿತ್ಯ ಹಾಗೂ ಸಂಗೀತದ ಸಂಗಮವಾಗಲೇಬೇಕು. ಇದು ಆದಾಗ - ''ಬಾಳಿದೋ ತವರು ಮನೆ। ಶಾಂತಿಯ ಆಶ್ರಮವು'' ಆದೀತು. ಈ ಮಹಾಕಾರ್ಯದ ಜವಾಬುದಾರಿಯನ್ನು ಬೇಂದ್ರೆಯವರು, ಸಾಹಿತಿ ಹಾಗೂ ಸಂಗೀತಗಾರರ ಮೇಲೆ ಹೊರೆಸಿದ್ದಾರೆ. ಇದರ ಪ್ರಚಾರಕ್ಕಾಗಿ ಬೇಂದ್ರೆ ಸಂಗೀತ ಅಕಾಡೆಮಿ, ಕಳೆದ ಆರು ವರ್ಷಗಳಿಂದ ಶ್ರಮಿಸುತ್ತ ಬಂದಿದೆ. ಈ ನಮ್ಮ ಹಾರೈಕೆಗೆ ಪ್ರಪ್ರಥಮವಾಗಿ ಸ್ಪಂದಿಸಿದವರು ಪಂಡಿತ ಶ್ರೀ ಕೃಷ್ಣಾಜಿ ಕುರ್ತಕೋಟಿ. ಈ ವರ್ಷ ಶ್ರೀಮತಿ ಆರ್. ವಸಂತಾದೇವಿ ಜಂತಲಿ ಹಾಗೂ ಶ್ರೀಮತಿ ವೀಣಾ ಶಿರಾಲಿಯವರು ಸತತ ಪರಿಶ್ರಮಪಟ್ಟು ೫೨ ಸ್ಥಾಯಿ ಹಾಗೂ ಅಂತರಾಗಳನ್ನು ಬೇಂದ್ರೆ ಕಾವ್ಯದಿಂದ ಆಯ್ಕೆ ಮಾಡಿ ಅವುಗಳಿಗೆ ಹಿಂದುಸ್ತಾನಿ ಹಾಗೂ ಕರ್ನಾಟಕಿ ಶಾಸ್ತ್ರೀಯ ಸಂಗೀತ ಪದ್ಧತಿಯ ಸ್ವರಸಂಯೋಜನೆ ಮಾಡಿ, ನಮ್ಮನ್ನು ಆಶ್ಚರ್ಯಭಾವದಲ್ಲಿ ನಿಲ್ಲಿಸಿದ್ದಾರೆ. ''ನೀನಾದನಿ'' ಹಾಗೂ ''ಯಮನಕಲ್ಯಾಣ''ದ ಆಯ್ಕೆಯೂ ಮಹತ್ವದ್ದು. ಈ ಮಹಾನ್ ಕಾರ್ಯಕ್ಕಾಗಿ ಈ ಈರ್ವರನ್ನು ಡಾ॥ ಕೆ. ಎಸ್. ಶರ್ಮಾರೊಂದಿಗೆ ನಾನೂ ತುಂಬು ಹೃದಯದ ಅಭಿನಂದನೆ ಹಾಗೂ ಆದರದ ವಂದನೆಗಳನ್ನು ಸಲ್ಲಿಸುತ್ತಿರುವೆ.

ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ - ತಾನಪುರಾ- ತಂಬೂರಿಗಳಿಗೆ ಪ್ರಾಧಾನ್ಯವಿದ್ದಂತೆ ಕರ್ನಾಟಕಿ ಶಾಸ್ತ್ರೀಯ ಸಂಗೀತದಲ್ಲಿ ವೀಣೆಗೆ ಪ್ರಾಧಾನ್ಯ. ಐತರೇಯ ಬ್ರಾಹ್ಮಣ ಹಾಗೂ ಆನಂದ ರಾಮಾಯಣದಲ್ಲಿ ಪ್ರತಿಯೊಬ್ಬರ ದೇಹ ಒಂದು ಸ್ವಯಂಭೂ ವೀಣೆ ಎಂದು ಕಲ್ಪಿಸಲಾಗಿದೆ. ಇದನ್ನೇ ಆಧರಿಸಿ ಬೇಂದ್ರೆಯವರು - ''ದೇಹವೊಂದು ದೇವವೀಣೆ। ನರನರವೂ ತಂತಿ ತಾನೆ। ಹಗಲಿರುಳು ನುಡಿಯುತ್ತಿಹ ಉಸಿರಾಟವೆ ಗೀತ'' ಎಂಬ ಸ್ಥಾಯಿಯನ್ನು ಸೃಷ್ಟಿಸಿದ್ದಾರೆ. ಇದನ್ನು ಅನುಲಕ್ಷಿಸಿ, ಸಂಗೀತಗಾರರು ಬೇಂದ್ರೆ ಕಾವ್ಯ ಹಾಡಿದಾಗ - ಜೀವದ ಸಂಗೀತ - ಭಾವದ ಸಂಗೀತ-ದ್ವೇಷರಾಹಿತ್ಯದ ಸಮಾಜ ರೂಪುತಾಳೀತು. ಆದುದರಿಂದ ಭಾವಯೋಗಿ ಸಂಗೀತಕಾರರು ತಮ್ಮ ತಮ್ಮ ದೇಹದ ಷಟ್‌ಚಕ್ರಗಳಾದ - ಮೂಲಾಧಾರ, ಸ್ವಾಧಿಷ್ಠಾನ, ಮಣಿಪುರ, ಅನಾಹತ, ವಿಶುದ್ಧ ಹಾಗೂ ಆಜ್ಞಾ ಸ್ಥಾನಗಳಲ್ಲಿ ನಾದಸಂಚಾರದ ಆನಂದ ಅನುಭವಿಸುತ್ತ ಶ್ರೋತೃಗಳ ಷಟ್‌ಚಕ್ರಗಳನ್ನು ಜಾಗೃತಪಡಿಸಿದಾಗ, ನವಮಾನವೀಯತೆಯ ನವೋನವ ಭಾವದ ಉತ್ಥಾನವಾದೀತು. ಆಗ ಪ್ರತಿಯೊಬ್ಬರ ಸಹಸ್ರದಲ ಕಮಲದಲ್ಲಿ ಐಕ್ಯಭಾವ ಸ್ಥಿರವಾದೀತು. ಇದರಿಂದಲೇ ಸಕಲರ ಕಲ್ಯಾಣ, ಸಕಲರಿಗೆ ಆನಂದ ಪ್ರಾಪ್ತವಾದೀತು. ಈ ಭಾವ ಬೇಂದ್ರೆಯವರ ಪ್ರಖ್ಯಾತ ಭಾವಗೀತ - ಇಳಿದು ಬಾ ತಾಯಿಯ ತಿರುಳಾಗಿದೆ.

''ಕಮಲವನ ಸಂಚಾರಿಣಿ'' ಎಂಬ ಕವನದ ಆಯ್ಕೆಯಿಂದ ಈ ಕೃತಿ ಪ್ರಾರಂಭವಾಗುವುದೂ ಔಚಿತ್ಯಪೂರ್ಣವಾಗಿದೆ. ಕಮಲವನ-ಲಕ್ಷ್ಮಿಯ ವಾಸಸ್ಥಾನ. ಈ ಲಕ್ಷ್ಮಿಯ ಆರಾಧಕರಾದ ಶ್ರೀಮಂತರ ಹೃದಯ, ವಿರಸದಿಂದ ತುಂಬಿದೆ. ಅವರೆಲ್ಲರೂ ನೀರಸ ಭಕ್ತಿಯ ಭಾವದಿಂದ ಲಕ್ಷ್ಮಿಯನ್ನು ತಮ್ಮ ಬಂಧನದಲ್ಲಿಟ್ಟುಕೊಂಡು, ಇತರರ ಬಗ್ಗೆ ಪ್ರೇಮವಿಲ್ಲದವರಾಗಿದ್ದಾರೆ. ಈ ಇತಿಹಾಸ ಬದಲಾಗಿ, ಪರಸ್ಪರರಲ್ಲಿ ಪ್ರೇಮದ ಸಾಗರ ಉಕ್ಕೇರುವಂತಾಗಲಿ ಎಂದೇ ಬೇಂದ್ರೆ ಅಪೇಕ್ಷಿಸಿದ್ದಾರೆ.

ಈ ಕೃತಿಯ ಕೊನೆಯ ಕವನ - ಸುಪ್ರಭಾತೇ.

''ಅವರ್ಣನೀಯಂ ಮೌನೇ ಗ್ರಾಹ್ಯಮ್<br>
ಭಾವೇಗಮ್ಯಂ ಹೃದಯೇಧ್ವನಿತಮ್<br>
ಹತಂ ಹತಂ ಯದಿ ವಾಚ್ಯಮವಾಚ್ಯಮ್<br>
ಸುರತಟನೀವ ಚ ಶಿರಸಿ ವಿಧಾರ್ಯಮ್<br>
ಅನಾಹತಂ ಓಂ ಸತ್‌ಚಿತ್ ಸುಖದಮ್<br>
ಶಾಂತಮತೀತಂ ಉತ್ತರೋತ್ತರಮ್<br>
ಉನ್ಮೀಲಿತಮಿವ ಅಂತರ್ನೇತ್ರಮ್<br>
ಅವತಾರಿತಮಿವ ವಿಶ್ವೋಧಾರ್ಯಮ್''

ಎಂಬ ಬೇಂದ್ರೆಯವರ ಸಂಸ್ಕೃತ ಭೂಯಿಷ್ಠ ರಚನೆಯಲ್ಲಿ - ಸಂಗೀತೋಪಾಸಕರ ಅನಾಹತ ಓಂಕಾರ ನಾದವು, ಕವನದಲ್ಲಿಯ ವಿವಿಧ ಭಾವಗಳನ್ನು ಶ್ರೋತೃಗಳಲ್ಲಿ ಜಾಗೃತಪಡಿಸಲಿ, ಅಂತರಂಗದ ಜ್ಞಾನನೇತ್ರ ವಿಕಸಿತವಾಗಲಿ, ವಿಶ್ವದಲ್ಲಿಯ ಜನರೆಲ್ಲರೂ ಇದರ ಭಾಗಿಗಳಾಗಲಿ ಎಂಬ ಆಶಯ ಇಲ್ಲಿದೆ. ಈ ಕಾರ್ಯವಾದೀತು ಎಂಬ ಮಹದಾಸೆಯಿಂದ ''ಬೇಂದ್ರೆ ಕಂಡ ಭಾವರಾಗ ಮಂಜರಿ'' ಕೃತಿಯನ್ನು ರಸಿಕ ಸಹೃದಯಿಗಳಿಗೆ ಅರ್ಪಿಸುತ್ತಿದ್ದೇವೆ. ಬೇಂದ್ರೆ ಸಂಗೀತ ಅಕಾಡೆಮಿ ಕೈಕೊಂಡಿರುವ ಸಮಗ್ರ ಕಲ್ಯಾಣ ಭಾವಜಾಗೃತಿಯ ಕಾರ್ಯದಲ್ಲಿ, ಸಂಗೀತ ವಿದ್ವಾಂಸರ, ಸಮರ್ಥ ಗಾಯಕರ ಸಹಕಾರವನ್ನಪೇಕ್ಷಿಸಿ ವಿರಮಿಸುವೆವು. ಎಲ್ಲರಿಗೂ ಒಳಿತಾಗಲಿ.

*- ಡಾ// ವಾಮನ ಬೇಂದ್ರೆ*

ಸಹ ನಿರ್ದೇಶಕರು

ವರಕವಿ ಡಾ|| ದ. ರಾ. ಬೇಂದ್ರೆ

ಸಂಶೋಧನ ಸಂಸ್ಥೆ ಹಾಗೂ ಸಂಗೀತ ಅಕಾಡೆಮಿ

*''ಬೇಂದ್ರೆ ಕುಟೀರ,'' ಹುಬ್ಬಳ್ಳಿ*

೧೩-೨-೨೦೦೬

ವರಕವಿ ಡಾ. ದ. ರಾ. ಬೇಂದ್ರೆ ೧೧೦ನೇ ವಾರ್ಷಿಕ ಜನ್ಮ ದಿನ

# ಅನಾವರಣ

''ಅಂಬಿಕಾತನಯದತ್ತ ಬೇಂದ್ರೆ ಕಂಡ ಭಾವರಾಗ ಮಂಜರಿ''ಯನ್ನು ಸಾಹಿತ್ಯ-ಸಂಗೀತ-ಸಂಗಮದ ಒಂಭತ್ತನೇ ಕೃತಿಯಾಗಿ ಅರ್ಪಿಸಲು ಬೇಂದ್ರೆ ಸಂಗೀತ ಅಕಾಡೆಮಿಗೆ ಅತೀವ ಸಂತಸವಾಗಿದೆ. ವರಕವಿ ಡಾ॥ದ. ರಾ.ಬೇಂದ್ರೆಯವರ ೧೧೦ನೇ ಜನ್ಮದಿನಾಚರಣೆಯ ನೆನಪಿನ ಪ್ರಕಟಣೆ ಇದು.

''ರಾಗವೆಳದರೆ ಭಾವದಾವೇಶವಾದರೂ
ಮಾತೆಂಬುದೆಂದಿಗೂ ಅರ್ಥರೂಪದ ಬೆದರು,
ನಾದವೂ ವಾದವೂ ಬರಲು ಇದಿರಾ ಇದಿರು
ಒಂದು ಒಂದನು ನುಂಗೆ, ಕೊಳಲು ಹುಸಿ ಹುಸಿ''

(-ಮುಕ್ತಕಂಠ)

ಸಾಮರಸ್ಯ ಸಿದ್ಧಾಂತದ ಪ್ರತಿಪಾದಕರಾದ ವಿಶ್ವಕವಿ ಬೇಂದ್ರೆಯವರು:

''ರಸವೆ ಜನನ
ವಿರಸ ಮರಣ
ಸಮರಸವೇ ಜೀವನ''

ಎಂದು ಸಾರಿದವರು. ಅಂತೆಯೇ ರಾಗವನ್ನು ಎಳೆಯುವುದರಿಂದ ಭಾವದ ಆವೇಶವಾದರೂ, ಆ ಭಾವವು ಶುದ್ಧಿಯನ್ನು ಹೊಂದಿ, ಪರಿವರ್ತನೆಯ ಕಾರ್ಯಮಾಡದಿದ್ದಲ್ಲಿ ಅದು ವ್ಯರ್ಥವಾಗುವುದೆಂದು ಭಾವಿಸಿದ್ದರು. ಮಾತು ಅರ್ಥವಿಲ್ಲದಾಗ ಅದು ವ್ಯರ್ಥಾಲಾಪವಾಗುವಂತೆಯೂ, ಮಾತು ಮಾತು ಮಥಿಸುವ ಮೂಲಕ ಅರ್ಥದ ನವನೀತದಲ್ಲಿ ಸಾರ್ಥಕ್ಯ ಹೊಂದದಂತೆ ನಾದವು ವಾದವಾಗಿ, ಇದುರು ಇದುರಾಗಿ ಒಂದನ್ನೊಂದು ನುಂಗುವಂತಾದರೆ, ಆಗ ಕೇವಲ ಬಿದಿರಾಗಿ ಉಳಿಯುತ್ತದೆ. ಬಿದಿರು ನಾದದೊಂದಿಗೆ ಸಾಮರಸ್ಯ ಹೊಂದಿದಾಗಲೇ ಅದು ಮನಮುಟ್ಟುವ, ಮನಮೆಚ್ಚುವ ಮಾಧುರ್ಯವನ್ನು ಹೊರಹೊಮ್ಮಿಸುತ್ತದೆ. ಮಾತು ಅರ್ಥಪೂರ್ಣವಾದಾಗ:

''ಮಾತು ಕಟ್ಟುವದೆ ನಾಟ್ಯರಂಗವನು
ಭಾವ ಪಾತ್ರವಾಗಿ
ಹೃದಯವೇದ್ಯ ನೈವೇದ್ಯ ಪುಷ್ಟಿ
ಸಂತುಷ್ಟಿ ಗಾತ್ರವಾಗಿ''

(-ಉತ್ತರಾಯಣ)

ಎಂದು ''ದೃಷ್ಟಿ - ಸೃಷ್ಟಿ'' ಕವನದಲ್ಲಿ ಬೇಂದ್ರೆ ನುಡಿದಿದ್ದಾರೆ.

''ಮುಗಿಲು-ಮಲ್ಲಿಗೆ''ಕವನ ಸಂಕಲನದಲ್ಲಿಯ ''ಸ್ವರೂಪ ದೀಪ'' ಕವನದಲ್ಲಿ:

"ಜೀವಕ್ಕೆ ಜೀವ, ಸಮಿಪವೊ ಭಾವಾ
ಸ್ವರೂಪವೇ ದೀಪ"

ಎನ್ನುತ್ತಾರೆ. ಇಲ್ಲಿಯ ಸಂದೇಶವು ಭಾವಸಾಮೀಪ್ಯದಿಂದ ಜೀವ ಜೀವ ಕೂಡಿ ಸ್ವರೂಪವೇ ದೀಪವಾಗಿ ಬೆಳಗುವ ಬಗೆಯನ್ನು ಬಣ್ಣಿಸಿದ್ದಾರೆ. ದುಃಖವೂ ಪಾಕವಾಗುವಂತೆ ಮನಸ್ಸಿನ ಸಿದ್ಧತೆ ಬೆಳೆದಾಗ:

"ಹುಣ್ಣಿವೆಯ ಹುಣ್ಣು
ಆದೀತು ಹಣ್ಣು"

ಎಂಬಂತೆ ಪರಿಪಕ್ವತೆಯಲ್ಲಿ ದುಃಖ ಪರ್ಯವಸಾನವಾಗುತ್ತದೆ.

ಭಾವಕ್ಕೆ ರಾಗದ ಪ್ರತಿಷ್ಠಾಪನೆಯನ್ನು ಮಾಡಿ ಅದು ಮಂಜರಿಯಾಗುವಂತೆ ಮಾಡುವ ಸಾರ್ಥಕ ಪ್ರಕ್ರಿಯೆ ಆಗಬೇಕಾಗಿದೆ. ತಂತಿಯಲ್ಲಿ ಅಡಗಿದ ನಾದವು ಅದನ್ನು ಮೀಟಿದಾಗ ಪ್ರಕಟವಾಗುತ್ತದೆ:

"ನಿಃಶಬ್ದ ತಂತಿ, ಮೀಟು ಸದ್ದಿನ ಸಂತಿ
ಇದ್ದದೇ ಭಾವ
ಆತಾವು ಅಭಾವ
ಮೂಡಿದರೆ ಮೊಳಕೆ
ಬೇರು ಕೆಳಕೆ
ಬೀಜ ಒಳಕೆ
ಇದು ಚದುರ
ಪದರು ಪದರು
ಊದುವರೆ ಕೊಳಲು;
ಇಲ್ಲ; ಬಿದುರು!"
(-ಚತುರೋಕ್ತಿಯಲ್ಲಿ-ಕವನ : 'ನಿಃಶಬ್ದ')

ಊದದೆ ಇದ್ದರೆ ಕೊಳಲು ಬಿದುರಾಗಿಯೇ ಇರುವಂತೆ ಬೀಜವು ಒಳಗೆ ಮೊಳಕೆ ಒಡೆಯದಿದ್ದರೆ, ಅದರಿಂದ ಬೇರು ಕೆಳಕ್ಕೆ ಬೆಳೆದು, ಮೇಲೆ ಫಲವಾಗುವುದು ಹೇಗೆ? ಇದನ್ನು ಅಂಬಿಕಾತನಯದತ್ತರು ಅತ್ಯಂತ ಮಾರ್ಮಿಕವಾಗಿ ಅಭಿವ್ಯಕ್ತಗೊಳಿಸಿದ್ದಾರೆ.

"ನಾಕುತಂತಿ" ಕವನದಲ್ಲಿಯ "ನಾದ ಮಯೂರ"ದಲ್ಲಿ "ಭಾವ"ದ ಪಾತ್ರವನ್ನು ಅಂಬಿಕಾತನಯದತ್ತರು ಚಿತ್ರಿಸುವ ಬಗೆಯನ್ನು ನೋಡೋಣ:

"ಕವಿಯು ಗವಿಹೊಕ್ಕು ಮೌನದ ಆಳದಲಿ ಮುನಿಯು
ಮುಚುಕುಂದ ನಿದ್ರೆಯಲಿ ಭದ್ರವಾದರು ಏನು?
ಗ್ರಹಗೋಲ ಸಂಗೀತ ತಾನ ತಾನದ ನನೆಯು

ಭಾವದ ಪರಿಸ್ಪಂದ ಆತ್ಮ ಆತ್ಮವೆ ತಾನು
ವಾಚ್ಯ ವರ್ಣಗಳಲ್ಲಿ ನವಿರು ನವಿಲಿನ ಕೇಕೆ
ಶ್ರೀ ಅನಿರ್ವಾಚ್ಯಕ್ಕೆ ಬೇರೆ ಭಾಷ್ಯವು ಬೇಕೆ!''

ಅದೃಶ್ಯ ಚಿಂತನವು ದೃಶ್ಯದ ಜನನಕ್ಕೆ ಹೇಗೆ ಕಾರಣ ಎಂಬುದನ್ನು ಅತ್ಯಂತ ಮಾರ್ಮಿಕವಾಗಿ ''ಅಣು ಸಂಗೀತ'' ಕವನದಲ್ಲಿ ಅಂಬಿಕಾತನಯದತ್ತರು ಬಿಂಬಿಸಿದ್ದಾರೆ:

''ಮೌನವಿರದು ಮೌನ ಬರದು
ಎಲ್ಲೊ ಒಳಗೆ ಗುಣುಗುಣು
ಸಂಗೀತದ ಅಣು ಅಣು''.

ಕವನ ಸೃಷ್ಟಿ ಹಾಗೂ ಸ್ವರಸಂಯೋಜನೆಯ ಪ್ರಕ್ರಿಯೆಗಳಲ್ಲಿಯ ಸಾಮ್ಯವನ್ನು ಬಹಳ ಅರ್ಥಗರ್ಭಿತವಾಗಿ ಇಲ್ಲಿ ಮೂಡಿಸಲಾಗಿದೆ. ಕವನ ರಚಿಸುವ ಮೊದಲಿನ ಛಂದಸ್ಸಿನ ಆಂದೋಲನ ಹಾಗೂ ಸ್ವರಸಂಯೋಜನೆಯಲ್ಲಿ ಗುಣುಗುಣಿಸುವ ವಿಧಾನ ಎಷ್ಟೊಂದು ಸಾಮ್ಯಹೊಂದಿದೆ? ಮೌನದಿಂದಲೇ ಗೀತವು ಸಂಗೀತವಾಗಿ ರೂಪುತಾಳುತ್ತದೆ.

''ಚತುರೋಕ್ತಿ''ಯ ಇನ್ನೊಂದು ಕವನ ''ಕಾಳ್ಯೊ ಮಾಳ್ಯೊ''. ಇಲ್ಲಿ ''ಭಾವ'' ದಿಂದ ''ಅನುಭಾವ''ದ ಪ್ರಕ್ರಿಯೆ ನಡೆಯುವುದನ್ನು ಬಿಂಬಿಸಲಾಗಿದೆ.

''ಭಾವದ ಜಾಲ ವಿಶಾಲಿಸಿ ಮಣಿದರೆ-
ಯನುಭಾವವೆ ಹೆಣೆದಿರೆ,
ಅನುಭೂತಿಯ ತುಂಬೆಲ್ಲ ವಿಭೂತೀ
ಭೂತವೆ ಕುಕ್ಕುಣಿದರೆಽಽ
''ಭೂಮಾ ಮಾಭೂ'' ಎಂದಡಗಿತು ಓಂ
ಪಡುವುದು ಇಮ್ಮಡಿದರೆ ......''

''ಭಾವ'' ದಿಂದ ''ಓಂ''ಕಾರದ ವರೆಗಿನ ಸೋಪಾನ ಇಲ್ಲಿ ಅಭಿವ್ಯಕ್ತವಾಗಿದೆ.

ನವಮಾನವ ಆವಿರ್ಭಾವಕ್ಕೆ ಭಾವ, ಭಾಷೆ, ಬುದ್ಧಿ ಹೇಗಿರಬೇಕೆಂಬ ಸೂತ್ರವನ್ನು ವಿಶ್ವಕವಿ ಅಂಬಿಕಾತನಯದತ್ತರು ''ಭಾವವೇನೇ ಇರಲಿ'' ಕವನದ ಮೂಲಕ ನೀಡಿದ್ದಾರೆ:

''ಭಾವವೇನೇ ಇರಲಿ, ನಮ್ಮ ಭಾಷೆ ಅಪರಂಪಾರ,
..............................................
ಬುದ್ಧಿಯಾಚೆಯ ಬಿತ್ತು ಬಿತ್ತದೇ ಉಳಿದಿತ್ತು''.
(- ಮುಗಿಲ ಮಲ್ಲಿಗೆ)

ಬುದ್ಧಿ ದಾಟದ ಹೃದಯ-ವಿವೇಕಕ್ಕಾಗಿ ಬಿತ್ತುವುದು ಉಳಿದಿದೆ. ಭಾವ ಭಾಷೆಯ ಮೂಲಕ ಬುದ್ಧಿಯಾಚೆ ಬಿತ್ತುವ ಕಾರ್ಯ ಆಗಬೇಕಾಗಿದೆ. ''ಬೇಂದ್ರೆ ಕಂಡ ಭಾವರಾಗ ಮಂಜರಿ''ಯು ಅಂಬಿಕಾತನಯದತ್ತರ ''ಮಾವಿದ್ವಿಷಾವಹೈ'' ಸಿದ್ಧಾಂತವನ್ನು ಪ್ರತಿಪಾದಿಸುವ ದಿಶೆಯಲ್ಲಿ

ಸಾರ್ಥಕ್ಯವನ್ನು ಹೊಂದಬೇಕಾಗಿದೆ. ಈ ಸಾಧನೆ ಸಾಹಿತ್ಯ-ಸಂಗೀತ ಸಂಗಮದ ಸಾಧನದಿಂದ ಸಾಧ್ಯವಾಗಿಸಬೇಕಾಗಿದೆ.

ಬೇಂದ್ರೆ ಸಂಗೀತ ಅಕ್ಯಾಡೆಮಿಯ ಸಹನಿರ್ದೇಶಕರು, ವರಕವಿ ದ.ರಾ. ಬೇಂದ್ರೆಯವರ ಸುಪುತ್ರರೂ ಆದ ಡಾ॥ವಾಮನ ಬೇಂದ್ರೆಯವರ ಸಂಪಾದಕತ್ವದಲ್ಲಿ, ಗಾನವಿದುಷಿ ಶ್ರೀಮತಿ ವಸಂತಾದೇವಿ ರಾ. ಜಂತಲಿಯವರ ಮಾರ್ಗದರ್ಶನದಲ್ಲಿ ಶ್ರೀಮತಿ ವೀಣಾ ಶಿರಾಲಿಯವರು "ಭಾವರಾಗ ಮಂಜರಿ" ಯಲ್ಲಿ ಆಯ್ಕೆಮಾಡಿಕೊಂಡಿರುವ ೫೨ ಕವನಗಳಿಗೆ ಹಿಂದುಸ್ತಾನಿ ಹಾಗೂ ಕರ್ನಾಟಕಿ ಶಾಸ್ತ್ರೀಯ ಸಂಗೀತ ಸಂಯೋಜನೆಯನ್ನು ಮಾಡಿದ್ದಾರೆ. ಇವರೆಲ್ಲರೂ ಅಭಿನಂದನಾರ್ಹರು. "ಬೇಂದ್ರೆ ಸಂಗೀತ" ಕ್ಕೆ ಇದೊಂದು ಮಹತ್ವದ ಕೊಡುಗೆ. ಬೇಂದ್ರೆ ಕಾವ್ಯ ಸಂದೇಶವು ಸಂಗೀತದ ಮೂಲಕ ಜನಮನ ಮುಟ್ಟಬೇಕು, ಅದು ಮನೆಮನೆಯಲ್ಲಿ ಮೊಳಗಬೇಕು. ಈ ಬಗೆಯ ಸಾಹಿತ್ಯ-ಸಂಗೀತ ಸಂಗಮವು ಮಾನವನನ್ನು ಜಾಗತೀಕರಣ-ಉದಾರೀಕರಣ- ಖಾಸಗೀಕರಣಗಳ ನವ-ಸಾಮ್ರಾಜ್ಯಶಾಹಿ ಜಾಲದಿಂದ ಮುಕ್ತಗೊಳಿಸಿ, ನವಮಾನವೀಯತೆಯ ಆಧಾರದ ನವಸಮಾಜದ ನಿರ್ಮಾಣಕ್ಕೆ ಪ್ರೇರಕವಾಗಬೇಕು, ಪೂರಕವಾಗಬೇಕು ಎಂಬುದು ಬೇಂದ್ರೆ ಸಂಶೋಧನ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾಡೆಮಿ ಹೊಂದಿದ ಗುರಿಗಳಾಗಿವೆ. ಇವರ ಸಾರ್ಥಕ್ಯಕ್ಕೆ ನಾವು ಸಿದ್ಧಪಡಿಸುತ್ತಿರುವ ಈ ಉಪಕರಣಗಳು ಒಂದೆಡೆ ಪ್ರಜ್ಞೋದಯಕ್ಕೆ ಹಾಗೂ ಇನ್ನೊಂದೆಡೆ ಮಾನವ ಪರಿವರ್ತನೆ ಹಾಗೂ ಸಾಮಾಜಿಕ ಪುನರ್ರಚನೆಯ ಪ್ರಕ್ರಿಯೆಗೆ ಬಳಕೆಯಾಗಬೇಕಾಗಿದೆ.

ವಿಶ್ವಕವಿ ಅಂಬಿಕಾತನಯದತ್ತರು ಕಂಡ ಕನಸು:

"ದುಡಿಯುವ ಬಡವರು
ನಾಡಿನ ಒಡೆಯರು,
ದುಡಿಯದ ಒಡೆಯರು
ಕಾಣದ ಹಾದಿಯ ಹಿಡಿವರು"

ಈ ಕನಸನ್ನು ನನಸಾಗಿಸಲು ಎಲ್ಲರೂ ಪರಿಶ್ರಮಿಸಬೇಕಾಗಿದೆ. ಸಾಹಿತ್ಯ ಹಾಗೂ ಸಂಗೀತ ಇದಕ್ಕಾಗಿ ಸನ್ನದ್ಧವಾಗಬೇಕಾಗಿದೆ. ಆಗ ಭಾವಋಷಿ ಅಂಬಿಕಾತನಯರ ವಾಣಿ - "ಜಗದೇಳಿಗೆ ಆಗುವದಿದೆ ಕರ್ನಾಟಕದಿಂದೆ" - ನನಸಾಗುತ್ತದೆ. ವಿಶ್ವಕವಿ ದ.ರಾ. ಬೇಂದ್ರೆಯವರ ೧೧೦ನೆಯ ಜನ್ಮದಿನ (ಮಾಘವದ್ಯ ಪ್ರತಿಪದ - ಗುರುಪ್ರತಿಪದ - ೧೩-೨-೨೦೦೬)ದ ಸವಿನೆನಪಿಗೆ "ಭಾವರಾಗ ಮಂಜರಿ"ಯನ್ನು ಬೇಂದ್ರೆ ಸಂಗೀತ ಅಕಾಡೆಮಿ ನಾಡ ಜನರಿಗೆ ಅರ್ಪಿಸುತ್ತಿದೆ. ಬೇಂದ್ರೆ ಅಭಿಮಾನಿಗಳು, ರಸಿಕ ಮಹಾಜನರು ಇದನ್ನು ತುಂಬುಹೃದಯದಿಂದ ಸ್ವಾಗತಿಸುವರೆಂಬ ವಿಶ್ವಾಸ ನಮ್ಮದಾಗಿದೆ. ತಮಗೆಲ್ಲ ನಮ್ಮ ಸಾವಿರದ ನಮನ.

*- ಡಾ// ಕೆ. ಎಸ್. ಶರ್ಮಾ*
ನಿರ್ದೇಶಕರು
ವರಕವಿ ಡಾ॥ ದ. ರಾ. ಬೇಂದ್ರೆ
ಸಂಶೋಧನ ಸಂಸ್ಥೆ ಹಾಗೂ ಸಂಗೀತ ಅಕಾಡೆಮಿ

ಹುಬ್ಬಳ್ಳಿ
೧೩-೨-೨೦೦೬
ವರಕವಿ ಡಾ. ದ ರಾ. ಬೇಂದ್ರೆ ೧೧೦ನೆ ಜನ್ಮ ವಾರ್ಷಿಕ ದಿನ

# ನನ್ನ ಅನುಭವ

ನಾನು ಆಕಾಶವಾಣಿಯಲ್ಲಿ ಹಾಡಿದ ಪ್ರಥಮ ಗೀತೆಯೆಂದರೆ – ಶ್ರೀ ಬೇಂದ್ರೆಯವರ ಕವನ – "ಉದಿತ ದಿನ ಮುದಿತ ವನ." ಅಲ್ಲಿಂದ ನನ್ನ ಹದಿನೈದನೇ ವಯಸ್ಸಿನಿಂದ ನನ್ನ ಸಂಗೀತ ಪ್ರವಾಸ ಪ್ರಾರಂಭವಾದದ್ದು. ಆ ಹಾಡು ಬಹಳ ಜನಪ್ರಿಯವಾಯಿತು. ಇಷ್ಟು ವರ್ಷಗಳ ನಂತರ ಮತ್ತೆ ನನಗೆ ಅವರ ಕವನಗಳಿಗೆ ಸಂಗೀತ ಸಂಯೋಜನೆ ಮಾಡುವ ಮತ್ತು ಹಾಡುವ ಸುಸಂಧಿ ದೊರೆಯಿತು. ನನಗೆ ಬಹಳ ಆನಂದವಾಯಿತು. ಅವರ ಕವನಗಳು ಒಂದಕ್ಕಿಂತ ಒಂದು ಬಹಳ ಭಾವನಾಮಯವಾಗಿವೆ. ಕವನಗಳನ್ನು ಸಂಗೀತದಲ್ಲಿ ಸಂಯೋಜನೆ ಮಾಡಬೇಕಾದಾಗ, ಭಾವ ಮುಖ್ಯವಾದದ್ದು, ಅನಂತರ ರಾಗ. ಭಾವ – ಕವನ ಮತ್ತು ರಾಗಗಳ ಜೋಡಣೆಯಿಂದ, ಸಂಗೀತ ಸಂಯೋಜನೆ ಸುಂದರವಾಗುತ್ತದೆ. ಭಕ್ತಿ, ಶೃಂಗಾರ, ಕರುಣಾ, ಆನಂದ ರಸಗಳು ಕೂಡಿದ ಕವನಗಳನ್ನು, ಬೇರೆ ಬೇರೆ ರಾಗಗಳಲ್ಲಿ ಭಾವಕ್ಕೆ ತಕ್ಕಂತೆ ಸಂಗೀತದಲ್ಲಿ ಅಳವಡಿಸುವಾಗ, ಬಹಳ ಸ್ಫೂರ್ತಿದಾಯಕವಾದವು. ಶಬ್ದಗಳನ್ನು ತಾಲ ಸ್ವರಗಳಲ್ಲಿ, ರಾಗಗಳಲ್ಲಿ ಅಂದವಾಗಿ ಸಂಯೋಜಿಸಲು ಬಹಳ ಅನುಕೂಲವಾಯಿತು. ಸಂಗೀತ ಸಂಯೋಜನೆ ಮಾಡುವಾಗ, ನನಗೆ ಬಹಳ ಆನಂದ ಮತ್ತು ಮನಃಶಾಂತಿಯ ಅನುಭವವಾಗಿದೆ. ನನ್ನ ಗುರುಗಳಾದ ಶ್ರೀಮತಿ ವಸಂತಾದೇವಿ ಜಂತಲಿಯವರ ಮಾರ್ಗದರ್ಶನವು ದೊರೆತಿದೆ. ಡಾ॥ ವಾಮನ ಬೇಂದ್ರೆಯವರ ಮಾರ್ಗದರ್ಶನವೂ ದೊರೆತಿದೆ. ಶ್ರೀ ದ. ರಾ. ಬೇಂದ್ರೆಯವರ ಸಮಗ್ರ ಕಾವ್ಯವು ಒಂದು ಮಹಾಸಾಗರವಾಗಿದೆ. ಅದರಲ್ಲಿ ಮುಳುಗಿ ಎದ್ದುಬಂದವರಿಗೇನೇ, ಅದರ ಅನುಭವ ಸಿಗುವುದು ಹಾಗೂ ಆನಂದ ದೊರೆಯುವುದು.

ಸಂಗೀತವೂ ಮಹಾಸಾಗಾರ! ಶಾಸ್ತ್ರೀಯ ಸಂಗೀತವನ್ನು ಹಿಂದುಸ್ತಾನೀ ಮತ್ತು ಕರ್ನಾಟಕೀ ಎಂಬ ಎರಡು ಪದ್ಧತಿಯಾಗಿ ವಿಭಾಗಮಾಡಿ ಹಾಡುತ್ತಾರೆ. ಸ್ವರಗಳು . ಆದರೆ ಅದನ್ನು ಬೇರೆ ಬೇರೆ ಶೈಲಿಯಲ್ಲಿ ಹಾಡುತ್ತಾರೆ. ಇಲ್ಲಿ ಕರ್ನಾಟಕೀ ಪದ್ಧತಿಯ ರಾಗಗಳನ್ನು ಹಿಂದುಸ್ತಾನೀ ಶೈಲಿಯಲ್ಲಿ ಮಂಡಿಸುವ ಹಾಗೂ ಹಾಡುವ ಪ್ರಯತ್ನ ಮಾಡಲಾಗಿದೆ. ಆ ರಾಗಗಳು ಬಹಳ ರಂಜಕ ಮತ್ತು ಮನಸ್ಸಿಗೆ ಆನಂದ ನೀಡುವಂಥವುಗಳು. ಈಗ ಹಿಂದುಸ್ತಾನೀ ಸಂಗೀತದಲ್ಲಿ ದುರ್ಗಾ ಹಾಡುತ್ತೇವೆ. ಅದೇ ದುರ್ಗಾ ರಾಗದಲ್ಲಿ ತೀವ್ರ ರಿಷಭದ ಬದಲಾಗಿ, ಕೋಮಲ ರಿಷಭ ಸೇರಿಸಿದರೆ ಕರ್ನಾಟಕೀ ರಾಗದಲ್ಲಿ ಪಿಟಿಪಿ ರಾಗವಾಗುತ್ತದೆ. ನಾವು ಅದೇ ರಾಗಕ್ಕೆ ಕೋಮಲ ರಿಷಭ ದುರ್ಗಾ ಅನ್ನುತ್ತೇವೆ. ಈ ರಾಗವು, ಭಕ್ತಿಪ್ರಧಾನವಾಗಿದೆ. ಈ ರಾಗದಲ್ಲಿ ದೇವಿಯ ಸ್ತುತಿಯನ್ನು – ಶಾಂಭವಿ ಕವನದಿಂದ ಶಂಭೂ ಸ್ವಯಂಭೂ ಎಂಬ ನುಡಿಯನ್ನು ಸ್ವರಗಳಲ್ಲಿ ಸಂಯೋಜಿಸಿದ್ದೇನೆ. ರಾಗ ಭೂಪೇಶ್ವರಿ – ಇದು ಕರ್ನಾಟಕೀಯಲ್ಲಿ ವಾಸಂತಿ ರಾಗವಾಗುತ್ತದೆ. ರಾಗ ಲತಾಂತಪ್ರಿಯ – ಇದು ಹಿಂದುಸ್ತಾನಿಯಲ್ಲಿ ಗುಣಕಲಿ, ಗುಣಶ್ರೀ ಅನ್ನುತ್ತಾರೆ. ಹೀಗೆ ಕರ್ನಾಟಕೀ ಹಾಗೂ ಹಿಂದುಸ್ತಾನೀ ರಾಗಗಳು ಒಂದಕ್ಕೊಂದು ಸಂಬಂಧಿಸಿರುವುವು. ಶೈಲಿ ಮಾತ್ರ ಬೇರೆ.

ಶ್ರೀ ರಾಗದಲ್ಲಿ ಶಂಕರಾ ಶುಭಂಕರಾ ಕವನವನ್ನು ಸಂಯೋಜಿಸಲಾಗಿದೆ. ರಕ್ಷಮಾಂ ಸದಕ್ಷರಾ, ಶಂಕರಾ ಶುಭಂಕರಾ ಈ ಕವನವನ್ನು ಸ್ವರ ಲಯ ತಾಲಕ್ಕೆ ಅನುಗುಣವಾಗಿ, ಸಮ್ಮಿಗೆ ಬರಲು ಅದರ ಸ್ಥಳಗಳನ್ನು ಅರ್ಥಕ್ಕೆ ತೊಂದರೆಯಾಗದಂತೆ ಬದಲಿಸಿ, "ಶಂಕರಾ ಶುಭಂಕರಾ ರಕ್ಷಮಾಂ ಸದಕ್ಷರಾ" ಎಂಬ ಸ್ವರಗಳಲ್ಲಿ ಸಂಯೋಜಿಸಲಾಗಿದೆ. ತಾಲಕ್ಕೆ ಸ್ವರಗಳಿಗೆ ತಕ್ಕಂತೆ ಶಬ್ದಗಳು ಸಮ್ಮಿಗೆ ಉಠಾವ ಬರಲು ರಾಗದ ಸೌಂದರ್ಯ ವರ್ಧಿಸಲು ಶಬ್ದಗಳ ಜೋಡಣೆಯು ಅವಶ್ಯಕವಾಗಿದೆ. ಕವನವನ್ನು ಅಭ್ಯಸಿಸಿದ ನಂತರ, ಯಾವ ರಾಗದಲ್ಲಿ ಯಾವ ಕವನವು ಮನಸ್ಸಿಗೆ ಆನಂದ ನೀಡುವದೋ, ಕರ್ಣಗಳಿಗೆ ತೃಪ್ತಿ ನೀಡುವದೋ, ಸಂಗೀತ ರಸಿಕರ ಮನ-ಸೆಳೆಯುವದೋ ಎಂಬ ದೃಷ್ಟಿಕೋನ ಇಟ್ಟುಕೊಂಡೇ ಸಂಗೀತ ರಾಗ ಸಂಯೋಜನೆ ಮಾಡಲಾಗಿದೆ.

ಸುಗಮ ಸಂಗೀತವು ಬಹಳ ಆನಂದನೀಡುತ್ತದೆ. ಅದೇ ಪ್ರಕಾರ ಶಾಸ್ತ್ರೀಯ ಸಂಗೀತದಲ್ಲೂ ಕಾವ್ಯವು ನಾಲ್ಕೇ ಸಾಲಿನಲ್ಲಿ ಪೂರ್ಣ ಅರ್ಥ ನೀಡುತ್ತದೆ. ಶಾಸ್ತ್ರೀಯ ಸಂಗೀತದಲ್ಲಿ ಖ್ಯಾಲ ಮತ್ತು ಧೃತ್ ಎಂಬ ಎರಡು ಪ್ರಕಾರಗಳು. ಖ್ಯಾಲ ಅಂದರೆ ಕವನವನ್ನು ಸ್ವರ-ಲಯ-ತಾಲಗಳ ಮೂಲಕ, ಸಂಥಗತಿಯಲ್ಲಿ ವಿಸ್ತಾರವಾಗಿ ಆಲಾಪಮಾಡಿ, ಶಬ್ದಗಳ ಜೊತೆಗೆ ಸಮ್ಮಿಗೆ ಬರುವುದು. ಕಾವ್ಯದ ಮುಖ್ಯ ಶಬ್ದಗಳನ್ನು ತಾಲದ ಸಮ್ಮಿಗೆ ಬರುವಂತೆ ಜೋಡಿಸಿ, ರಾಗವನ್ನು ಪ್ರಸ್ತುತಪಡಿಸುವುದು. ತಾಲದಲ್ಲಿ ೧೬, ೧೨, ೧೦, ೭, ೧೪, ಹೀಗೆ ಬೇರೆ ಬೇರೆ ಮಾತ್ರಾಗಳಲ್ಲಿ ಬೇರೆ ಬೇರೆ ತಾಲಗಳಿವೆ. ಅದರ ಮಾಹಿತಿಯನ್ನು ಪುಸ್ತಕದಲ್ಲಿ ಕೊಡಲಾಗಿದೆ. ನಾಲ್ಕು ಸಾಲಿನಲ್ಲಿ, ಇಡೀ ರಾಗದ ಅಂಗವು ಬರುತ್ತದೆ. ಸಾಹಿತ್ಯದ ಅರ್ಥವೂ, ಅಂದವೂ ಪೂರ್ಣವಾಗಿ ರಸಿಕರ ಮತ್ತು ಸಂಗೀತ ಕೇಳುವವರ ಮನಸ್ಸನ್ನು ಆನಂದದಲ್ಲಿ ತೇಲಿಸುತ್ತದೆ.

ಧೃತ್‌ದಲ್ಲಿಯೂ ನಾಲ್ಕು ಸಾಲುಗಳ ಸಾಹಿತ್ಯವಿರುತ್ತದೆ. ಇದರಲ್ಲಿ ಅಸ್ತಾಯಿ, ಅಂತರಾ ಹೀಗೆ ಎರಡು ಭಾಗಗಳಿವೆ. ಖ್ಯಾಲದಲ್ಲಿಯೂ ಅಸ್ತಾಯಿ - ಅಂತರಾ ಎಂದು ಎರಡು ಭಾಗಗಳಿವೆ. ಸಾಹಿತ್ಯವನ್ನು ರಾಗ, ತಾಲ, ಲಯ, ಸ್ವರಗಳ ಮೂಲಕ ಜಲದಗತಿಯಲ್ಲಿ ಪ್ರಸ್ತುತಪಡಿಸುತ್ತಾರೆ. ಇದರ ಸೌಂದರ್ಯವೇ ಬೇರೆ, ಖ್ಯಾಲ ಸಂಗೀತದ ಸೌಂದರ್ಯವೇ ಬೇರೆ. ರಾಗ ಪ್ರಸ್ತುತಪಡಿಸಬೇಕಾದರೆ ಮೊದಲು ಖ್ಯಾಲ ಹಾಡುತ್ತಾರೆ, ಅನಂತರ ಧೃತ್ ಹಾಡುತ್ತಾರೆ. ಈ ಎರಡೂ ಪದ್ಧತಿಯ ಸಂಗೀತವು ಅದರದರ ಸೌಂದರ್ಯ, ತಾಲ, ಲಯ, ಸ್ವರಗಳೊಂದಿಗೆ ಸಾಹಿತ್ಯ ಶಬ್ದಗಳ ನರ್ತನ ಒಟ್ಟುಗೂಡಿದರೆ, ಸಂಗೀತದ ನದಿಯೇ ಹರಿಯುತ್ತದೆ! ಬೇಂದ್ರೆಸಂಗೀತ ಸ್ವರಸಂಯೋಜನೆ ಮಾಡಬೇಕಾದರೆ, ಯಾವುದೇ ತರಹದ ತೊಂದರೆ ಆಗಲಿಲ್ಲ. ಸಲೀಸಾಗಿ ಸ್ವರಗಳ ಜೋಡಣೆ ಮಾಡುವಾಗ, ಹೃದಯದಲ್ಲಿ ಒಂದು ತರಹದ ಆನಂದ ಪುಟಿಯುತ್ತಿತ್ತು.

– ಶ್ರೀಮತಿ ವೀಣಾ ಶಿರಾಲಿ

## ಶ್ರೀಮತಿ ಆರ್. ವಸಂತಾದೇವಿ ಜಂತಲಿ
### - ಸಂಕ್ಷಿಪ್ತ ಪರಿಚಯ.

ಇವರು ಹುಟ್ಟಿದ್ದು ಮಾರ್ಚ್ ೨೨, ೧೯೨೮ರ ಯುಗಾದಿಯಂದು ಸುಪ್ರಸಿದ್ಧ ವೈದ್ಯಗುರು, ಸ್ವಾತಂತ್ರ್ಯ ಹೋರಾಟಗಾರ, ಬಹುಭಾಷಾ, ಬಹುಮುಖ ಪ್ರತಿಭೆಯ ಹಾಗೂ ಸುಪ್ರಸಿದ್ಧ ಇಂಗ್ಲೀಷ್ - ಇಂಗ್ಲಿಷ್-ಕನ್ನಡ ಶಬ್ದಕೋಶದ ಕರ್ತೃ ದಿ॥ದತ್ತಾತ್ರೇಯ ಕೃಷ್ಣ ಭಾರದ್ವಾಜ್ (ಡಿ.ಕೆ. ಭಾರದ್ವಾಜ್) ಹಾಗೂ ದಿ॥ಶ್ರೀಮತಿ ಕಮಲಾಬಾಯಿ ಭಾರದ್ವಾಜ ಇವರ ಎರಡನೆಯ ಮಗಳಾಗಿ. ಮಕ್ಕಳಲ್ಲಿನ ಸಹಜ ಪ್ರತಿಭೆಯ ಪೋಷಕರಾಗಿದ್ದ ತಂದೆ ಹಾಗೂ ತಾಯಿಯವರ ಪ್ರೋತ್ಸಾಹ ಹಾಗೂ ಬೆಂಬಲದಿಂದ ಚಿಕ್ಕಂದಿನಿಂದಲೇ ಸಂಗೀತದಲ್ಲಿಯ ಅಭಿರುಚಿ ಬೆಳೆಯುತ್ತಾ ಬಂದಿತು. ಅದಕ್ಕೆ ಸಹವರ್ತಿಯಾಗಿ ಅಣ್ಣ ಶ್ರೀ ಡಿ.ಬಿ. ಹರೀಂದ್ರರ ಜೊತೆಯಲ್ಲಿಯೇ ಹಾಗೂ ದಿ॥ಪಂಡಿತ ತಾರಾನಾಥ ಅವರ ಮಗ ಶ್ರೀ ರಾಜೀವ ತಾರಾನಾಥರ ಜೊತೆಯಲ್ಲಿ ಆಗಿನ ಸಂಗೀತ ವಿದ್ವಾನ್ ಹಾವೇರಿಯ ದಿ॥ಶ್ರೀ ಶಂಕರ ಸದಾಶಿವ ಜೋಶಿಯವರಲ್ಲಿ ೧೯೪೨ರಲ್ಲಿ ಹಿಂದುಸ್ತಾನಿ ಸಂಗೀತ ವಿದ್ಯಾಭ್ಯಾಸಕ್ಕೆ ಆರಂಭ. ಅಲ್ಲದೇ ಆಗಿನ ನ್ಯಾಶನಲ್ ಹೈಸ್ಕೂಲಿನ ಶಿಕ್ಷಕರಾದ ದಿ॥ಬಿ.ಎಸ್. ರಾಮರಾವ್ ಹಾಗೂ ನಂತರ ವೈಣಿಕ ವಿದಾನ್ ದಿ॥ಎಲ್. ರಾಜಾರಾವ್ ಇವರಿಂದ ಕರ್ನಾಟಕ ಸಂಗೀತದಲ್ಲಿ ವೈಣಿಕ ವಿದ್ಯಾಭ್ಯಾಸ.

ಹೀಗೆಯೇ ಮುಂದುವರಿದಂತೆ ಸಂಗೀತದಿಂದ ದೊರೆಯುವ ಆಧ್ಯಾತ್ಮ ಹಾಗೂ ಆನಂದದ ನಿರಂತರ ಪ್ರಾಪ್ತಿಗಾಗಿ, ಸಂಗೀತಗಾರರ ಸೇವಾ ಅಪೇಕ್ಷೆಗೆ ಪೂರಕವಾಗಿ ದೈವಬೆಂಬಲದ ನಿಷ್ಕರ್ಷೆಯಂತೆ ಹಿಂದೂಸ್ತಾನಿ ಸಂಗೀತ ಗುರುಗಳ, ಗುರುಗಳಾದಂಥ ಡಿ॥ಗಾಯನಾಚಾರ್ಯ ಶ್ರೀ ಶಂಕರ ದೀಕ್ಷಿತ ಜಂತಲಿ ಮತ್ತು ದಿ॥ಶ್ರೀಮತಿ ಪಾರ್ವತಿಬಾಯಿ ಶಂ. ದೀಕ್ಷಿತ ಜಂತಲಿಯವರ ಸೊಸೆಯಾಗಿ, ಅವರ ಹಿರಿಯ ಪುತ್ರ ದಿ॥ಶ್ರೀ ರಾಮಚಂದ್ರ ದೀಕ್ಷಿತ ಜಂತಲಿ ಇವರ ಸಹಧರ್ಮಿಣಿಯಾಗಿ, ಸಂಗೀತ ಕ್ಷೇತ್ರದ ಕೈಂಕರ್ಯ ಕೈಗೊಂಡರು. ಗೃಹಕೃತ್ಯದ ಜೊತೆ ಜೊತೆಯಲ್ಲಿಯೇ ಸಂಗೀತದ ಸಾಧನೆಗೈಯುತ್ತಾ ಸಂಗೀತ ಕಲಾಪರೀಕ್ಷಾ ಕೇಂದ್ರ ಹಾಗೂ ಶ್ರೀ ಶಂಕರ ಸಂಗೀತ ವಿದ್ಯಾಲಯ ನಡೆಸುತ್ತಾ ಸಂಗೀತ ಅಲಂಕಾರ ಪದವಿಯನ್ನು ಸಹ ಗಳಿಸಿದರು. ಅದೇ

ಪರಂಪರೆಯಲ್ಲಿ ಪತಿಯ ಬೆಂಬಲದಿಂದ ಹಾಗೂ ಪೂರಕವಾಗಿ ಅನೇಕ ಶಿಷ್ಯಂದಿರನ್ನು ಬಹು ಅಪರೂಪ ರಾಗಪದಗಳೊಂದಿಗೆ ತಯಾರು ಮಾಡಿದರು. ಧಾರವಾಡ ''ಆಕಾಶವಾಣಿ'' ಕೇಂದ್ರದಿಂದ ಹಾಡುವುದರೊಂದಿಗೆ ಸಂಗೀತದ ಕುರುತಾದ ಅನೇಕ ''ಚರ್ಚಾಗೋಷ್ಠಿ''ಯನ್ನು ನಡೆಸಿಕೊಟ್ಟಿದ್ದಾರೆ. ಕೌಟುಂಬಿಕ ಮಾತಾಪಿತೃ ವಾತ್ಸಲ್ಯದೊಂದಿಗೆ, ಈ ದಂಪತಿಗಳಿಂದ ಸಂಗೀತಶಿಕ್ಷಣ ಪ್ರಾಪ್ತಿಮಾಡಿಕೊಂಡ ಶಿಷ್ಯಂದಿರಲ್ಲಿ ಶ್ರೀಮತಿ ಅನುರಾಧಾ ಧಾರೇಶ್ವರ, ಇಂದುಮತಿ ತಾಮ್ಹಣಕರ, ಸುಮನ ನಾಗರಕಟ್ಟಿ ಇಂದುಮತಿ ಧಾರೇಶ್ವರ, ವೀಣಾ ಶಿರಾಲಿ, ಕುಸುಮ ಕುಲಕರ್ಣಿ, ಸರೋಜಿನಿ ಚಂದಾವರಕರ, ಯಮುನಾ ಟೇಂಬೆ, ರಾಧಿಕಾ ಭಟ್ಟ ಶ್ಯಾಮಲಾ ಕುಲಕರ್ಣಿ, ಶ್ರೀ ರಾಘವೇಂದ್ರ ಗುಡಿ, ಶ್ರೀ ಶೇಷಗಿರಿ ಗುಡಿ ಹಾಗೂ ಇನ್ನೂ ಅನೇಕರಿದ್ದಾರೆ. ಈ ೭೮ ರ ಇಳಿವಯಸ್ಸಿನಲ್ಲೂ, ಪೂಜ್ಯ ಶ್ರೀ ವರಕವಿ ದ.ರಾ. ಬೇಂದ್ರೆಯವರ ರಚನೆಗಳಿಗೆ ತಮ್ಮ ಉತ್ಸಾಹಪೂರಿತ ರಾಗ-ಸಂಯೋಜನೆಗಳನ್ನು ಮಾಡಿ, ಆ ಕವಿವರ್ಯರಿಗೆ ಸಲ್ಲುವ ಅಳಿಲು ಸೇವೆಯೆಂದು ಪರಿಭಾವಿಸಿ, ಶಿಷ್ಯಂದಿರಾದ ಶ್ರೀಮತಿ ವೀಣಾ ಶಿರಾಲಿ ಹಾಗೂ ಶ್ರೀಮತಿ ಶ್ಯಾಮಲಾ ಕುಲಕರ್ಣಿ ಇವರ ಸಹಕಾರದೊಂದಿಗೆ ಕೂಡಿಸಿದ ಕೃತಿ ರಚನೆ ಈಗ ನಿಮ್ಮ ಕೈಯಲ್ಲಿವೆ.

- ಸಂ.

# ಭಾಗ - ೧

# ಅಂಬಿಕಾತನಯದತ್ತ ಬೇಂದ್ರೆ ಕಂಡ
# ಭಾವ ರಾಗ ಮಂಜರಿ

(ಹಿಂದುಸ್ತಾನಿ/ಕರ್ನಾಟಕೀ ಶಾಸ್ತ್ರೀಯ ಸಂಗೀತ ಸ್ವರ ಸಂಯೋಜನ ಒಳಗೊಂಡು)



ಶ್ರೇಷ್ಠಮಟ್ಟದ ಸಾಹಿತಿಗಳು ಹಾಗೂ ಸಂಗೀತಕಾರರು ಭಾರತೀಯ ಅಧ್ಯಾತ್ಮಿಕ ಮಾರ್ಗದ ರಹಸ್ಯ ಅನ್ವೇಷಣೆಯಲ್ಲಿ ತೊಡಗಿರುವುದು ಗಮನಾರ್ಹ. ದೇಹ, ಪ್ರಾಣ, ಮನ ಮತ್ತು ಸಾಕ್ಷಿ ಎಂಬ ನಾಕು ತತ್ತ್ವಗಳ ಅರ್ಥಮಾಡಿಕೊಳ್ಳುವಾಗ ಅವರು ಅನುಭವಿಸುವ ಆನಂದವೇ-ಅವರಿಂದ ಸೃಷ್ಟಿಸಲ್ಪಟ್ಟ ಸಾಹಿತ್ಯ ಹಾಗೂ ಸಂಗೀತ.

ಶ್ರೀಮತಿ ಆರ್. ವಸಂತಾದೇವಿ ಜಂತಲಿಯವರು ಹಿಂದುಸ್ತಾನಿ ಸಂಗೀತದಲ್ಲಿ ಪ್ರಭುತ್ವಪಡೆದು, ಕರ್ನಾಟಕೀ ಸಂಗೀತದ ವೈಣಿಕ ವಿದ್ಯಾಪ್ರವೀಣರಾದವರು. ಬೇಂದ್ರೆ ಕವನಗಳಿಗೆ ಸ್ವರಸಂಯೋಜನೆ ನಿರ್ಣಯಿಸಿದ್ದು ಹೆಮ್ಮೆಪಡುವ ವಿಷಯವಾಗಿದೆ.

ಸಂಗೀತ ಸಮಾರೋಹದ ಮುಕ್ತಾಯ - ಭೈರವಿ ಗಾಯನದಿಂದ ಆಗುತ್ತದೆ ಎಂಬುದು ಎಲ್ಲರಿಗೂ ಗೊತ್ತು. ಭೈರವಿ ಶ್ರೋತೃಗಳ ಮೇಲೆ ಮಾಡುವ ಪರಿಣಾಮಕ್ಕೆ ಬೇಂದ್ರೆ ಒತ್ತುಕೊಡುತ್ತಾರೆ. ಶ್ರೋತೃವಿನ ಅಂತಃಕರಣದಲ್ಲಿ ಸತತವಾಗಿ ಆ ಭೈರವಿ ನಿನಾದಗೊಂಡಾಗ, ಅದು ಆನಂದಭೈರವಿಯಾಗುತ್ತದೆ. ಅದರ ಲಕ್ಷಣ -

"ನಮೇತಿ ಮನನಾತ್, ಧ್ಯಾನಾತ್
ಸುಮನಾತ್ ಪ್ರಕಟಾಸ್ವಯಂ
ಅಯಂ ಆತ್ಮಾ ಸ್ವಯಂಬ್ರಹ್ಮಾ
ಓಂಕಾರ ನಿನದೀಕೃತಾ".

ಸಂಗೀತಗಾರ ಹಾಡಿದ ಭೈರವಿ "ಅಯಂ ಆತ್ಮಾ" ಎಂಬ ಅರಿವನ್ನು ಜಾಗೃತಗೊಳಿಸಬೇಕು. ಈ ದೃಷ್ಟಿಯಿಂದ ಬೇಂದ್ರೆ ಕಾವ್ಯ - ಆನಂದ ಭೈರವಿ.

—ಸಂ.

# ೧ ಕಮಲವನ ಸಂಚಾರಿಣಿ

೧

ಕಮಲವನ ಸಂಚಾರಿಣಿಯೆ ಮಹಾಲಕ್ಷ್ಮಿ ಬೇಕೇ ಆಸನ?
ಅರುಣಚರಣೇ ಮಾಡು ನನ್ನೀ ಹೃದಯವನೆ ಸಿಂಹಾಸನ.

೨

ವಿಶ್ವಸುಂದರಿ ನಿಖಿಲಜಗದಾನಂದಕರಿ ಹೇ ಯೋಗಿನೀ!
ವಿರಸ ಹೃದಯತ್ಯಾಗಿ ನೀರಸ ಭಕ್ತಿ ಬಂಧನ ಭೋಗಿನೀ!

೩


ಪಾಪದೂರೇ ಮಾಡು ನನ್ನನು ನಿನ್ನನುಗ್ರಹದಾಗರಾ
ಮಧುರ ಕೌಶಲ ಮಾಯೆಯಲಿ ಮಾಡೆನ್ನ ಪ್ರೇಮದ ಸಾಗರಾ.

- ಚೈತ್ಯಾಲಯ-೩೪/ಪ್ರ : ೧೯೫೭
('ಮಹಾಲಕ್ಷ್ಮಿ' ಎಂಬ ಶೀರ್ಷಿಕೆ ಇತ್ತು)

---

ಭಾವ : ಶ್ರೀ ಮಾತಾರವಿಂದರ ಮಾರ್ಗದಲ್ಲಿ ಮಹೇಶ್ವರಿ, ಮಹಾಕಾಳಿ, ಮಹಾಲಕ್ಷ್ಮಿ ಹಾಗೂ ಮಹಾ ಸರಸ್ವತಿ ಎಂಬ ನಾಲ್ಕು ಶಕ್ತಿಗಳಿಗೆ ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಆ ಹಾದಿಯಲ್ಲಿ ಮಹಾಲಕ್ಷ್ಮಿಗೆ ಸಲ್ಲಿಸಿದ ಪ್ರಾರ್ಥನೆ ಇದು.

ಶಬ್ದಾರ್ಥ : ನೀರಸಭಕ್ತಿ=ಯಾವುದೇ ಬಯಕೆ ಇಟ್ಟುಕೊಳ್ಳದ ಸಮರ್ಪಿತ ಭಕ್ತಿ.



# ೨ ಬೆಳ್ಳಿ ಹೂ

೧

*ಕೆಂಪು ಕೊಳದ ತಾವರೆಯ ಬೆಳ್ಳಿಹೂ ಎದೆಯ ಕನಸು ಚಾಚಿ*
*ಅಚೇತನದ ಸತ್ ಪ್ರಾಣದಾಟ ಮನದೇಣಿ ಏರಿ ಆಚೆ*
*ಸುವಿಚಾರ ಮತ್ತೆ ಸದ್ಭಾವಸಾರ ಸರ್ವಸ್ವ ಹೃದ್ಯಲೋಕೆ*
*ಮಾನವನ ಮಧ್ಯೆ ಆ ದೇವವಿದ್ಯೆ ಅಡಗಿದ್ದ ಕುರುಹು ಆಕೆ*

೨

ತಾನೆ ತನ್ನ ಸೋಪಾನದೇವ ನಾ ಹಂತ ಹಂತ ಜೀವ
ಆಕೆ ನೆಲದ ಮಡಿ ಮಡಿಲು ವಿಶ್ವ ಕುಡಿ ಬಿಡಲು ಹೂವ, ಹೂವ
ಕಾಲಿಯಾಕೆ! ಕಾಲ ಸ್ವರೂಪ ಆ ಸ್ವಪ್ನ ಭೂಪ ಸ್ವಾಮಿ
ಆಕಾಶವಾಕೆ ದಿಕ್‌ಪ್ರಾಯದಾಕೆ ದಿನದಿನದ ಶುದ್ಧ ಭೂಮಿ

೩

ಆಕೆ ಹಕ್ಕಿ ದಿಕ್ಕಾಲ ರೆಕ್ಕೆ ಆಕಾಶದಾಚೆ ಸೂಚಿ
ಚಿತ್‌ತಪಃ ಪ್ರಾಂತ ಅಲೆಅಲೆ ಅನಂತ ಉಸಿರಾಟ ಜನ್ಮ ರಾಜಿ
ಸನಾತನವೆ ಬಯಲಾಗಿ ಹರವಿ ಹಿಗ್ಗಿತ್ತು ಕ್ಷೇತ್ರವಾಗಿ
ಚಿರಂತನವೆ ಕ್ಷಣದಾಚೆ ಈಚೆ ತೆರೆದಿತ್ತು ನೇತ್ರವಾಗಿ

೪

ಪರಾತ್ಪರವೆ ಗುರುವಾಗಿ ಇಬ್ಬರೂ ಒಬ್ಬ ದೇವನಂತೆ
ಕವಿಯ ನೆತ್ತಿಯಲಿ ಆಡುತಿಹರು ಸತ್‌ಯಕ್ಷಿಭಾವದಂತೆ

- ಶತಮಾನ-೫೩/ಪ್ರ : ೨೦೦೪

---

ಭಾವ : ಶ್ರೀ ಮಾತಾ ಶ್ರೀ ಅರವಿಂದರ ದೈವಿಕ ಶಕ್ತಿಯನ್ನು ಕುರಿತು ರಚಿಸಿದ ಸುನೀತ.

ಶಬ್ದಾರ್ಥ : ಮನದ ಏಣಿ=ಮನದ ಸೋಪಾನ. ಮನ ಹಾಗೂ ವಿಜ್ಞಾನ ಲೋಕಗಳ ನಡುವೆ ಉನ್ಮನ, ಜ್ಯೋತಿರ್ಮನ, ಸ್ವಯಂ ಸಾಕ್ಷಿಮನ ಹಾಗೂ ಉತ್ತರೋತ್ತರ ಮನ ಎಂಬ ನಿಲುವುಗಳಿರುವುದನ್ನು ಗುರುಗಳು ಕಂಡರು. ರಾಜಿ=ಸಮೂಹ, ಸಾಲು.

## ೩. ಶಾರದೆಯೇ!

ಜಯದೇವಿ ಜಯದೇವಿ ಜಯ ಶ್ರೀ ಶಾರದೆಯೇ
ನಾಲಗೆ ರಂಗವ ಮಾಡಿದೆ, ಮನೆ ಮಾಡಿದೆ ಎದೆಯೇ ॥ ಜಯದೇವಿ ॥ ॥ ಪಲ್ಲವಿ ॥

೧

*ಮೌನದ ಬಸಿರೊಳಗೆದ್ದಿಹ ನಾದದ ಬಲೆಯಲ್ಲಿ*
*ಬ್ರಹ್ಮಾಂಡಂಗಳು ಜೋ ಜೋ ಆಡುವ ನೆಲೆಯಲ್ಲಿ*
*ವೇದದ ಮಂತ್ರವ ವಾದವ ಮಾಡುವ ತಲೆಯಲ್ಲಿ*
*ನೀರೋ ನೀರೆಯೊ ಎನುವೊಲು ಇಹೆ ರಸ ಶಿಲೆಯಲ್ಲಿ ॥ ಜಯದೇವಿ ॥*

೨

ಬ್ರಹ್ಮನು ಆದನು ಮುದುಕನು, ಆದರು ಅಮರ ತನು
ರಸವತಿಯನು ಒಳಗೂಡಿರೆ ಸಂಜೀವನಯುತನು
ಮಾತಿನ ಮಳೆಯೊಡ ಬರುವನು ಭಾವದ ಮಾರುತನು
ನಿನ್ನ ಉಪಾಸನೆ ಮಾಡುವ ಸಾರಸ್ವತ ಸುತನು ॥ ಜಯದೇವಿ ॥

೩

*ವೀಣಾಪಾಣಿಯೆ ವಾಣಿಯೆ, ಓ ಬ್ರಹ್ಮನ ರಾಣೀ*
*ಮರೆವನು ಹೊಡೆದೋಡಿಸಿ, ಕೊಡು ಹೊಸ ಅರಿವನು ಜಾಣೀ*
*ನೀಹಾರಕ ವಸನೇ, ಶತ, ಶತ ತಾರಕ ವೇಣೀ*
*ನವಕಲ್ಪದ, ನವಕಲ್ಪನೆ, ನವನಾಕಶ್ರೇಣಿ ॥ ಜಯದೇವಿ ॥*

- ಉತ್ತರಾಯಣ : ೩೧/ಪ್ರ : ೧೯೬೦

---

ಭಾವ : ಸರಸ್ವತಿಯ ಸ್ತುತಿ. ಆರತಿ ಪದ್ಯದ ಧಾಟಿ.

ಶಬ್ದಾರ್ಥ : ನೀಹಾರಕ=ನಕ್ಷತ್ರಪುಂಜದಂತೆ ಶುಭ್ರ. ವಸನ=ಬಟ್ಟೆ ತಾರಕ=ನಿವಾರಕ. ನವನಾಕ=ಹೊಸಸ್ವರ್ಗ.

ವಿಶೇಷ : ಈ ಧಾಟಿಯಲ್ಲಿಯೇ ಗಣಪತಿಸ್ತುತಿಯನ್ನೂ ಬೇಂದ್ರೆಯವರು ಮಾಡಿದ್ದಾರೆ.

## ೪ ಶಂಕರಾ-ಶುಭಂಕರಾ

೧

*ರಕ್ಷಮಾಂ ಸದಕ್ಷರಾ, ಶಂಕರಾ, ಶುಭಂಕರಾ*
*ಅತ್ರಿನೇತ್ರ ಅರಳಿಬರಲಿ, ಅತ್ತಿ ಹಣ್ಣುದುಂಬರಾ*
*ಆಲನೀನು ವ್ಯಾಲ ಶಾಯಿ, ಕಾಲ ನಿನ್ನ ಬಾಲವು*
*ಕೋಟಿ ಕೋಟಿ ಬ್ರಹ್ಮಾಂಡವೆ ಚಿನ್ನಾಟಕೆ ಸಾಲವು.*

೨

*ಶಿವನೆ ಎನ್ನು, ಭವನೆ ಎನ್ನು, ಅಭವಗೇಕೆ ಸಂಶಯ?*
*ಶಂಭುವೋ, ಸ್ವಯಂಭುವೋ ತಿಣುಕಿತರವಿರಾಶಯ*
*ಈಶನೇಕನೀಶನಂತೆ? ಭಿಕ್ಷೆ ಯಾವ ಪಕ್ಷವೋ?*
*ಅನ್ನಪೂರ್ಣೆ ಸದಾಪೂರ್ಣೆ ತಾನೆ ಯಕ್ಷಿ. ಯಕ್ಷವೋ!*

೩

ಯಾವುದನ್ನು ಎಲ್ಲರೂ, ಇಲ್ಲ ಎಂಬರೋ
ಎಲ್ಲಕಡೆ ತುಂಬಿಯೂ ಇಹುದು ಎಂದು ನಂಬರೋ
ಅದೇ ಚಿದಂಬರಕ್ಕೆ ಮಣೀ, ಎದೆ ಇದೆ ಅದರಾಲಯ
ಉಭಯ ಒಂದು ಅದ್ವಿತೀಯ. ಪ್ರಳಯದಲ್ಲು ಯಾ ಭಯ?

೪

ಅದರ ಉದರದೊಂದು ಹೂವುಗಣ್ಣು ಕಾಂಬ ಗೊಂಬೆಯೋ
ರವಿಯು ಅದರ ಗವಿಯು ಕಾಣೊ, ಚಂದಿರನೂ ತುಂಬಿಯೋ
ಝೇಂಕರಿಸುವ ನಾದವಲ್ಲಿ ಓಂ ಗೊಡುತಿದೆ ನಂಬಿಗೆ
ಕಡಲಪಾರ ಕೊಳಲಿ, ಕೊಡವು ತುಂಬಿಸಲ್ಲಿ ನಂಬಿಗೆ

೫

ಬೀಜವಿಲ್ಲ, ಬೇರು ಇಲ್ಲ, ಬಿಡುವು ಇಲ್ಲ ಯಾ ಮರಾ?
ತಿರುಳು ಇಲ್ಲ, ನೆರಳು ಇಲ್ಲ, ತೆರದರೇನು ಕ್ಯಾಮರಾ?
ಭಾವವಿಲ್ಲ, ಭಕ್ತಿ ಇಲ್ಲ, ಕಾಕು, ತರ್ಕ ಯಾ ಸ್ವರಾ?
ನಿನಗೆ ನೀನೆ ಚಿದರು. ಆದೆ ಬಾರೋ ನನ್ನ ಸೋದರಾ.

೬

'ಹಣ್ಣುಗಾಯಿ ನೀರುಗಾಯಿ' ಯುಗ ಯುಗ ಕಾದನ್ನೋ
ಬೀಜಾಕೃತಿ, ಪ್ರಕೃತಿ ಹಂಚಿಕರಗಳ್ ಶರಣಾದನ್ನೋ
ಶಕ್ತಿಯಲ್ಲಿ, ಶಿವನಗರ್ಭ ಬ್ರಹ್ಮಮಾಯೆ ತಾಯಿಯೋ
ಪ್ರಕೃತಿಯಲ್ಲಿ ಪುರುಷ ಪುಷ್ಪ, ರಾಧೆಕೃಷ್ಣ ಕಾಯಿಯೋ

೭

*ಎಲ್ಲಿ ಶಿವದ ಸಂಕಲ್ಪವು ಯಾ ವಿಕಲ್ಪ ಕಲ್ಪನೇ?*
*ಪೂರ್ಣ ಕಾಮ, ಪೂರ್ಣಧಾಮ, ಸರ್ವಾಶ್ರಯ ಅಲ್ಪನೇ?*
*ಅವ್ಯಯಕ್ಕೆ ವೆಚ್ಚವಿಲ್ಲ. ಅದೇ ಅದರ ಹೆಚ್ಚಳ*
*ಅಡ್ಡಬಾಯಿ ಹಾಕಬೇಡ, ಇಲ್ಲ ಅದಕೆ ಮುಚ್ಚಳ.*

೮


ಮೈತುಂಬ ಕೆಚ್ಚಲದ ಶ್ರುತಿಯ ಹಿಂಡು ಹಾಲಿಗೆ
ಯಮನ ಓಂಡು ಶಮನ ಹಿಂಡು ಅಮೃತ ನಿನ್ನ ಪಾಲಿಗೆ
ನಾದ ಬಿಂದು ಕಲೆಗೆ ಎಂದು ಒಡ್ಡಬೇಡ ನಾಲಿಗೆ
ಪಾಸಷ್ಟಿ, ಸಾಸಷ್ಟಿ ಈ ಪ್ರಮಾಣ ಮಾಳಿಗೆ.

- ತಾ ಲೆಕ್ಕಣಿಕೆ ತಾ ದೌತಿ : ೨೭/ಪ್ರ : ೧೯೮೩

---

ಭಾವ : ಏಕಾದಶರುದ್ರರೂಪ=೧೧ ದಾಟಿದ ಬಳಿಕ ಹನ್ನೆರಡನೆಯ ರೂಪ-ಎಲ್ಲರಿಗೂ ಶುಭವನ್ನೇ ಮಾಡುವ ಶಂಕರ ಸ್ವರೂಪ. ಇದರ ಸ್ತೋತ್ರ ಇಲ್ಲಿದೆ.

ಶಬ್ದಾರ್ಥ : ಕೊಳಲಿ=ಕೊಡಲಿ, ಕ್ಯಾಮರಾ=Camera=ಛಾಯಾಚಿತ್ರ ಗ್ರಹಿಸಬಲ್ಲ ಉಪಕರಣ. ''ಹಣ್ಣುಗಾಯಿ ನೀರುಗಾಯಿ''=ಶತಪ್ರಯತ್ನದ ಶ್ರಮ. ಪಾಸಷ್ಟಿ=೬೫=೬+೫=೧೧; ಸಾಸಷ್ಟಿ=೬೬=೬+೬=೧೨.



# ೫ ಪರಾಗ

೧
*ಬಾ ಭೃಂಗವೆ ಬಾ, ವಿರಾಗಿಯಂದದಿ*
*ಭ್ರಮಿಸುವಿ ನೀನೇಕೇ?*
*ಕಂಪಿನ ಕರೆಯಿದು ಸರಾಗವಾಗಿರೆ*
*ಬೇರೆಯ ಕರೆ ಬೇಕೇ?*

೨
ಬರಲಿಹ ಕಾಯಿಯ ಪಾಡಿನ ರುಚಿಯೂ
ಇದರೊಳು ಮಡಗಿಹುದು.
ನಾಳಿನ ಹಣ್ಣಿನ ರಸವಿಲ್ಲಿಯ ಮಕ-
ರಂದದೊಳಡಗಿಹುದು.

೩
*ಕವನ ಕೋಶದೀ ಕಮಲ ಗರ್ಭದಲಿ*
*ಪರಾಗವೊರಗಿಹುದು.*
*ನಿನ್ನ ಮುಖಸ್ಪರ್ಶವೂ ಸಾಕು; ಹೊಸ*
*ಸೃಷ್ಟಿಯೆ ಬರಬಹುದು. // ಬಾ, ಭೃಂಗವೆ, ಬಾ---*

- ಸಖೀಗೀತ : ೧೭/ರಚನೆ : ಸಾಧನಕೇರಿ, ಧಾರವಾಡ/ಪ್ರ : ೧೯೩೭

---

ಭಾವ : ಕಾವ್ಯ ಪರಾಗವು ರಸಿಕ ಭ್ರಮರರಿಗಾಗಿಯೇ ಕಾಯ್ದುಕೊಂಡಿದೆ. ಲಕ್ಷ್ಮೀಶನ ಜೈಮಿನಿಭಾರತದ ಪ್ರೇರಣೆ.



# ೬ ನಮ್ಮ ಗೋವಿಂದ

ಗೋಲೋಕದಿಂದಾ। ಇಳಿದು
ಗೋಕುಲಕ ಬಂದಾ
ನಮ್ಮ ಗೋವಿಂದಾ ! ॥ ಪಲ್ಲವಿ ॥

೧

ಗೋಪಗೋಪಿಯರಿಗಾಯಿತು ಆನಂದಾ
ಸುತ್ತೂ ನೋಡುತ್ತಿವೆ ಗೋವೃಂದಾ
ಅರಳಿದ ಕಣ್ಣುಗಳಿಂದಾ-ನಮ್ಮ ಗೋವಿಂದಾ.

೨

ಕಂಸಾಸುರನ ಬಂಧಾ, ಮೀರಿ ಹೊರಬಂದಾ
ಸೆರೆಮನೆಯಿಂದಾ, ದೇವಕಿ ವಸುದೇವನ
ಕಂದಾ-ನಮ್ಮಗೋವಿಂದಾ.

೩

ಶರಣರಿಗೆ ಭರವಸೆಯಾದಾ। ಯಾದವಾ
ಗೋಬ್ರಾಹ್ಮಣರಿಗೆ ಆಶ್ರಯಾ। ಆದನವಾ
ಮೊಳಗಿಸಿದನೋ ಓಂಕಾರ-
ನಾದವಾ-ನಮ್ಮ ಗೋವಿಂದಾ.

೪

*ದೇವ ದುಂದುಭೀ ನಾದಾ। ತಾನಾದಾ*
*ಶಂಖನಾದಾ, ರಣಭೇರಿ ನಾದಾ*
*ಓ ಈ ಕೃಷ್ಣಚಂದ್ರಾ*
*ಸಟ್ಪುರುಳಿನಲ್ಲಿ ಉದಯನಾದಾ*
*ಬಂದಾ ಬಂದಾ*
*ಗೋಲೋಕದಿಂದಾ-ನಮ್ಮ ಗೋವಿಂದಾ.*

- ಶತಮಾನ-೧೪/ಪ್ರ : ೨೦೦೪

---

ಭಾವ : ಧಾರವಾಡ ಆಕಾಶವಾಣಿಯಿಂದ ಬಿತ್ತರಗೊಂಡ "ಗೋಕುಲಕ ಬಂದಾ ನಮ್ಮ ಗೋವಿಂದ" ಎಂಬ ಬಾನುಲಿ ರೂಪಕದೊಳಗಿನ ಒಂದು ಹಾಡು. ಕೃಷ್ಣ ಕಥೆಯ ವೈಶಿಷ್ಟ್ಯಗಳ ವರ್ಣನೆ ಇಲ್ಲಿದೆ.

## ೭ ನಾಲ್ವರು ತಾಯಂದಿರು

*ಬಾರೆ ಬಾ ಮಹೇಶ್ವರೀ*
*ಬಾ, ಬಾ, ಬಾ, ಬಾ.*
*ಬಾರೆ ಬಾ ಮಹೇಶ್ವರೀ*
*ಮಹಾಕಾಳಿ, ಮಹಾಲಕ್ಷ್ಮಿ*
*ಬಾ ಮಹಾಸರಸ್ವತೀ*
*ಇಹುದು ನಿಮಗೆ ಶಾಶ್ವತಿ // ಪಲ್ಲವಿ //*

೧
ಹಗಲು ಇರುಳು ನಿಮ್ಮ ಕೂಟ
ಅರಿವೆ ನಿಮಗೆ ದಿನದ ಊಟ
ಬೆಳಕೊಗೆವುದು ಒಂದು ಆಟ
ಚಿದಾನಂದ ಲಹರಿ ಬಾ
ಸದಾಶಿವನ ಗೌರಿ ಬಾ
ನಿಮ್ಮ ಮಗುವು, ಹುಸಿಯ ನಗುವು
ಒಗಿಸಿ,ಮಿಗಿಸಿ ಬರುತಿರೆ
ನೀವೆ ಕರೆಯದಿರುತಿರೆ
ಛಂದವೇನು ನೀವೆ ಹೇಳಿ?
ಕೂಸು ನಾನು ಹೇಳಿಕೇಳಿ.
ನೀವೇ ನನಗಹುದು ಹಸಿಯು
ಬೆಳೆದೀತೇ ಒಣಕೆ ಸಸಿಯು?
ನಿಲ್ಲಿರವ್ವಾ ನಿಲ್ಲಿರಿ
ಕೃಪಾದೃಷ್ಟಿ ಚೆಲ್ಲಿರಿ.

೨
ತಾಳುವೆವೇ ನಿಮ್ಮ ರಾಸ ?
ಕುಣಿಕುಣಿಯುವ ಅಟ್ಟಹಾಸ
ಅಹಾ ಏನು ಮಹಾಭಾಸ !
ಬಾ ಎನ್ನುವ ಬಾಯಿಯೇ
ನಮಗೆ ಇಲ್ಲ ತಾಯಿಯೇ.
ನಿಮ್ಮ ಭಯಾ ನಮಗಭಯಾ
ಮಹಾಕಾಳಿ ಬಂದಿರೇ
ವಿಶ್ವಪ್ರಾಣಮಂದಿರೇ !
ಕೋಟಿ ಸಲುವು ಹುಟ್ಟಿ ಸತ್ತು
ಧಿಮಿತಿಕಿದಿಟ ಎಂದತ್ತು
ಆದರೇನು ನೀವೇ ಬಲ
ನೀವೇ ಹೊಲ ನೀವೇ ಚಲ
ಕಲಿಸಿರವ್ವ ಕಲಿಸಿರಿ
ಹಸುಹರಣವ ಬಲಿಸಿರಿ.
೩
ವಿಷಮದಲ್ಲೆ ಇಹುದು ಸಮ
ವಿಶ್ರಾಂತಿಯೆ ನಿಮ್ಮ ಶ್ರಮ
ಸಂಭ್ರಮದೊಳು ತೊರೆದು ಭ್ರಮ
ಬಾರೆ ಬಾರೆ ಬಾ ರಮಾ
ಅಂತರಂಗಪ್ರಿಯತಮಾ
ನಿಮ್ಮ ಕಂದ ನಿಮ್ಮ ಅಂದ
ಆಟಪಾಟವಾಡಲಿ
ನವೀನ ಛಂದ ನೋಡಲಿ.
ಬನ್ನಿರವ್ವ ಬಯಸಿ ಕರೆವೆ
ನಾನು ನಿಮ್ಮನೆಂತು ಮರೆವೆ ?
ತನುಮನವೂ ನಿಮ್ಮ ಮನೇ
ನಾನು ಕೂಡ ನಿಮ್ಮವನೇ
ಅಲ್ಲವೇನೆ? ಬನ್ನಿರೇ
ಜಯ ಜಯ ಜಯವೆನ್ನಿರೇ

೪

ನೀನೆ ಪರಾ ನೀನಪರಾ
ನೀ ಭೈರವಿ ನೀ ತಾರಾ
ನೀನು ತ್ರಿಪುರಸುಂದರಾ
ಬಾರೇ ಬಾ ಭಾರತಿ
ಎತ್ತು ಆತ್ಮದಾರತೀ
ನಿಮ್ಮ ಕರ್ಮ ನಮ್ಮ ಧರ್ಮ
ಕೈಮೈಯೊಳು ಬೆಳೆಯಲಿ
ಕರಣಗಳಲಿ ಉಳಿಯಲಿ

*ನಾಲಗೆಯಲಿ, ನಾಳದಲ್ಲಿ*
*ಜೀವಭಾವದಾಳದಲ್ಲಿ*
*ನೀವೇ ಜಗವಾಳುವಲ್ಲಿ*
*ನಿಮ್ಮುಸಿರೇ ಬಾಳುವಲ್ಲಿ*
*ಅಂಬಿಕಾತನಯನಾ*
*ನಿಲಿಸಿರವ್ವ ದಿನ ದಿನಾ.*

- ಹೃದಯ ಸಮುದ್ರ : ೨೧/ಪ್ರ : ೧೯೫೬

---

ಭಾವ : ಜೀವನದ ನೆಲೆ ಕಟ್ಟುತ್ತಿರುವ ನಾಲ್ಕು ಮಾತೃಶಕ್ತಿಗಳನ್ನು ಸ್ವಾಗತಿಸುವ ಗೀತ.

ಶಬ್ದಾರ್ಥ : ರಾಸ=ಕೃಷ್ಣ ಮತ್ತು ಗೋಪಿಕಾಸ್ತ್ರೀಯರ ಶೃಂಗಾರ ನರ್ತನ. ಹರಣ=ಪ್ರಾಣ. ಕರಣ=ಇಂದ್ರಿಯ. ನಾಳ-ನಾಲ-ಪೊಳ್ಳು ಪ್ರದೇಶ, ನಲಿಕೆ. ಒಗಿಸಿ=ಹೊರಸೂಸಿ. ಮಿಗಿಸಿ=ಹೆಚ್ಚಾಗಿ. ಹಸುಹರಣ=ಪಶುತ್ವದ ಹರಣ. ಪರಾ ಅಪಾರ=ಉತ್ತರ, ಉತ್ತಮ ಎಂಬ ನೆಲೆಯ ಶಕ್ತಿಗಳು.

ವಿಶೇಷ : ಐದು ಐದೆಯರ ತನಯರಾದ ಬೇಂದ್ರೆಯವರು ಶ್ರೀಮಾತಾರವಿಂದ ಮಾರ್ಗದ ನಾಲ್ವರು ತಾಯಂದಿರನ್ನು ಕುರಿತು ರಚಿಸಿದ ಪ್ರಾರ್ಥನೆ. ಮಹೇಶ್ವರಿ=ಕಲ್ಯಾಣಕಾರಕ. ಮಹಾಕಾಳಿ=ಶಕ್ತಿದಾಯಕ. ಮಹಾಲಕ್ಷ್ಮಿ=ಸಂಪತ್ತು ದಾಯಕ ಮತ್ತು ಮಹಾಸರಸ್ವತಿ=ಸಕಲವಿದ್ಯಾವರ್ಧಿನಿ. ಇವರೆಲ್ಲರ ಕೃಪಾದೃಷ್ಟಿ ಮಾನವರ ಮೇಲೆ ಬಿದ್ದು ಅವರಲ್ಲಿಯ ಪಶುತ್ವದ ಹರಣವಾಗಬೇಕು. ತನು, ಮನ ಒಂದಾಗಬೇಕು. ಸರ್ವರ ಕಲ್ಯಾಣಕಾರಕ ನಡೆ,ನುಡಿ; ಜೀವ, ಭಾವ ಆಳದಲ್ಲಿ ಸ್ಥಿರವಾಗಬೇಕು. ಆಗ ಜಾಗತಿಕ ಸಾಮರಸ್ಯ ಸಾಧ್ಯ ಎಂದಿದ್ದಾರೆ ಅಂಬಿಕಾತನಯದತ್ತ.

# ೮ ನೀ ನಾಕನೇ ತಂತಿ

*ನೀ ನಾಕನೇ ತಂತಿ ಓ! ವಕ್ರತುಂಡಾ ವಕ್ರದಂತಿ ॥ ಪಲ್ಲವಿ ॥*
*ಭದ್ರಂ ಶುಭಂ ಮಂಗಳಂ। ನೀನಂತೀ। ಅಂತೀ। ಅಂತೀ ॥ ಅನು ಪಲ್ಲವಿ ॥*
*೧*
*ಮೊದಲ ತಂತಿ :-*
*ಹೊನ್ನ ಅನ್ನ ಅನ್ನತಾ*
*ತಿಂದದ್ದನ್ನೇ ತಿನ್ನತಾ*
*ಇನ್ನ ತಾ। ಮುನ್ನ ತಾ*
*ಪ್ರಸನ್ನಾ, ಸುಖದಾತಾ ॥ ನೀ ನಾಕನೇ ತಂತಿ..........*
೨
ಎರಡನೇ ತಂತಿ :-
ಹೆಣ್ಣು ಹೆಣ್ಣು ಕಣ್ಣೂ ಕಣ್ಣೂ
ಅಧರವಾದರೂ ಹಣ್ಣು ಹಣ್ಣು
ಗಂಧಾ ತೀರಲು ಮಣ್ಣು ಮಣ್ಣು
ಮಾಯುವದೆಂದೊ ಈ ಹುಣ್ಣು? ॥ ನೀ ನಾಕನೇತಂತಿ..........
೩
ಮೂರನೇ ತಂತಿ :-
ಗಂಡಿನಾ ತೀರದಾ ದರ್ಪಾ
ಏರೇರಿ ಹಾರಿ ಸಾರಿ ಬರ್ಪಾ
ತೀರ್ಪುಗಾಣದೇ ಐತರ್ಪಾ
ಅವಸರ್ಪಾ-ಉತ್ಸರ್ಪಾ ॥ ನೀ ನಾಕನೇ ತಂತಿ..........

- ತಾ ಲೆಕ್ಕಣಿಕಿ ತಾ ದೌತಿ-೫/ಪ್ರ : ೧೯೮೩

---

ಭಾವ : ಗಣಪತಿಯ ನಾಲ್ಕನೆಯ ಆಯಾಮ ಕುರಿತು ಚಿಂತನೆ. ಹೊನ್ನು ಹೆಣ್ಣು ಮತ್ತು ಗಂಡಿನ ದರ್ಪ-ಇವು ಮೂರು ಆಯಾಮಗಳು, ಮಿತಿಗಳು. ಇವುಗಳಿಂದ ಮನುಷ್ಯನನ್ನು ದಾಟಿಸಬಲ್ಲವನು-ನಾಲ್ಕನೆಯ ಆಯಾಮದವನಾದ ಗಣಪತಿ. ಇವನೇ ನಾಕನೇ ತಂತಿ.

ಶಬ್ದಾರ್ಥ : ವಕ್ರ=ಕೊಂಕು, ಬಾಗಿದ. ತುಂಡ=ಬಾಯಿ, ಸೊಂಡಿಲ. ಅಧರ-ತುಟಿ. ದರ್ಪ=ಹೆಮ್ಮೆ, ಗರ್ವ. ಅವಸರ್ಪ=ಇಳಿಗಾಲ. ಉತ್ಸರ್ಪ=ಉನ್ನತಿಯ ಕಾಲ.

# ೯ ದೃಷ್ಟಿ-ಸೃಷ್ಟಿ

೧
ಯಾವ ದಿಗಂತದಿ ಏನು ಮಾಡಿತೋ
ನೋಡಿತೊಂದು ದೃಷ್ಟಿ.
ಕಾಂಬ ಕಣ್ಣುಗಳ ಗೊಂಬೆಗಳಲಿ ಅದು
ತೋರಿತಾಗ ಸೃಷ್ಟಿ.

೨
ಮಾತು ಕಟ್ಟುತಿದೆ ನಾಟ್ಯರಂಗವನು
ಭಾವ ಪಾತ್ರವಾಗಿ
ಹೃದಯ ವೇದ್ಯ ನೈವೇದ್ಯ ಪುಷ್ಟಿ
ಸಂತುಷ್ಟಿಗಾತ್ರವಾಗಿ.

೩
ಕೊಂಬೆ ಕೊಂಬೆಯಲಿ ರೆಂಬೆ ರೆಂಬೆಯಲಿ
ಬೇರೆ ಬೇರೆ ಹೂವು
ಮೂಲ ಒಂದು ಹಲ ಸರ್ವನಾಮ
ಆ ತಾವು ನಾವು ನೀವು.


೪
ಅಂಕಿತಕ್ಕೆ ಅಂಕಿತತೆ ಇರಲಿ
ಸದ್ಭಾವ ಮುದ್ರೆ ಬೇಕು.

- ಉತ್ತರಾಯಣ : ೨೯/೫, . ೧೯೬೦

---

ಭಾವ : ಸೃಷ್ಟಿ ಮಾಡಲು ದೃಷ್ಟಿಯೇ ಆಧಾರ. ದೃಷ್ಟಿಯಿಂದ ಮಾಡುವವರು - ತಾವು ಎಂಬ ಚಿತ್ರಾವಳಿಗಳು. ಅವರ ತಾವು-ತಾವು ಸ್ಥಳ, ನೆಲೆಗೊಳ್ಳುವುದು ಭಾಗ್ಯ ವಿಶೇಷ. ಇದು ಸಾಧನೆಯ ಗೀತ.

ಶಬ್ದಾರ್ಥ : ಅಂಕಿತ=ಗುರುತು, ಮುದ್ರಿಕೆ, ರುಜು, ಸಹಿ, ಅರ್ಪಣೆ, ಗುರು.



# ೧೦ ಕಣ್ಣ ಕಾಣಿಕೆ

೧

ಅಂತರಂಗದಾ ಮೃದಂಗ ಅಂತು ತೋಂ ತನಾನಾ
ಚಿತ್ತ ತಾಳ ಬಾರಿಸುತ್ತಲಿತ್ತು ಝಂಝಣಾಣಾ
ನೆನವು ತಂತಿ ಮೀಟುತಿತ್ತು ತಂತನನನ ತಾನಾ // ಅಂತರಂಗದಾ ...

೨

ಹಲವು ಜನುಮದಿಂದ ಬಂದ ಯಾವುದೋನೋ ಧ್ಯಾನಾ
ಏಕನಾದದಂದದೊಂದು ತಾನದಾ ವಿತಾನಾ
ತನಗೆ ತಾನು ಸೋಲುತಿಹುದು ಸೋಲುತಿಹುದು ಗಾನಾ // ಅಂತರಂಗದಾ .....

೩

ಕಲ್ಪದಾದಿಯಲ್ಲೆ ನನ್ನ ನಿನ್ನ ವಿರಹವಾಗಿ
ಎಲ್ಲೊ ಏನೋ ನಿನ್ನ ಹುಡುಕಿ ಕಾಂಬ ಕಣ್ಣೆ ಹೋಗಿ
ಮರವೆಗೊಂಡು ಬಿದ್ದೆ ನಾನು ನೆಲದ ಮಣ್ಣು ತಾಗಿ ॥ ಅಂತರಂಗದಾ .....

೪

ಅಂತರಿಕ್ಷದಲ್ಲಿ ಮಸಗಿ ಕಳೆದ ಕಣ್ಣ ಸಂತೆ
ಮೈಯ್ಯ ಕಣ್ಣು ಕುಣಿಯೊಳಾಯ್ತು ಚಿತೆಯ ಹಾಗೆ ಚಿಂತೆ
ನೆಲದ ಎದೆಗೆ ಇರುಳು ಬರುವ ಮರುಳ ಉಲ್ಕೆಯಂತೆ ॥ ಅಂತರಂಗದಾ .....

೫

ಕರುಳ ಕಲಕುಮುಲುಕಿನಲ್ಲಿ ಕುದಿದು ಕುದಿದ ಹಾಲೆ
ಹೃದಯದಾಜ್ಯವನ್ನು ಸೆಕ್ಕಿ ಬಂದ ಕಿಚ್ಚು ಮೇಲೆ
ಹಸಿದ ಕಂಗಳಲ್ಲಿ ಹೊತ್ತಿತೆಂದೊ ಆಗ ಜ್ವಾಲೆ ॥ ಅಂತರಂಗದಾ .....

೬

ಅದರ ನೋವೊ ಅದರ ಕಾವೊ ಬಲ್ಲದದುವೆ ಪಾಪ!
ಏಸು ತೋಡಿಕೊಂಡರೇನು ತೀರಲಹುದೆ ತಾಪ ?
ತನ್ನ ಸ್ನೇಹ ತಾನೆ ಉರಿಸಿ ಬೆಳಗಿಸುವದೊ ದೀಪ ॥ ಅಂತರಂಗದಾ .....

೭

ಹಣೆಯ ಕಣ್ಣು ಹುರಿದ ಮೋಹನಂಗವಾದ ಭಾವ
ತಾನೆ ರಸವೆ ಆಯ್ತು ಶೋಕ ಮೂಲ ರತಿಯ ತೀವ
ಕಣ್ಣಿನಾರತಿಯನು ಎತ್ತಿ ಎತ್ತಿ ಬಂತು ಜೀವ ॥ ಅಂತರಂಗದಾ .....

೮

ಎದೆಯ ತೊರಿಸಿ ಕಣ್ಣ ತೆರಿಸಿ ಹೋದ ಮಾಟ ನೋಟ
ಮರಳಿ ಬಂದು ಕಣ್ಣ ಕೊಟ್ಟು ಹೃದಯ ಜೀವ ಕೂಟ
ಸೃಷ್ಟಿಯನ್ನೆ ನಡೆಸುತಿಹುದು ಆಗಿ ಆಟ ಪಾಟ ॥ ಅಂತರಂಗದಾ .....

೯


ಕತ್ತಲಲ್ಲೆ ಬೆಳಕು ಮಿಂಚಿ ಪಡೆದಿತೇಳು ಬಣ್ಣ
ಮೂಕ ಮೌನ ತೂಕ ಮೀರಿ ದನಿಯು ಹುಟ್ಟಸಣ್ಣ
ಕಣ್ಣ ಮಣ್ಣ ಕೂಡಲಲ್ಲಿ ಹಾಡು ಕಟ್ಟತಣ್ಣ ॥ ಅಂತರಂಗದಾ .....

- ಗಂಗಾವತರಣ : ೪೭/ಪ್ರ : ೧೯೫೧

---

ಭಾವ : ಕವಿಯ ಕಣ್ಣು ಈ ನೆಲದ ಜೀವನವನ್ನು ನೋಡುತ್ತದೆ. ಆಗ ಕವಿಯ ಅಂತರಂಗದಲ್ಲಿ ಮಿಡಿದ ಮೃದಂಗದ ಭಾವ ಗೀತವಾಗುತ್ತದೆ.

ಶಬ್ದಾರ್ಥ : ವಿತಾನ=ಹರಡುವಿಕೆ, ವಿಸ್ತಾರ. ವುಸಗಿ=ವಿಸ್ತರಿಸಿ, ವಿಜೃಂಭಿಸಿ. ಕುಣಿ=ತೆಗ್ಗು, ಹೊಂಡ. ಉಲ್ಕೆ=ನಕ್ಷತ್ರಖಂಡ. ಕಲಕುಮಲಕು=ತಳಮಳ, ಕ್ಷೋಭೆ. ಆಜ್ಯ=ತುಪ್ಪ ತೇವ=ಹಸಿ, ಒದ್ದೆ.




## ೧೧ ಗಂಗಾವತರಣ


೧

ಇಳಿದು ಬಾ ತಾಯಿ
ಇಳಿದು ಬಾ
ಹರನ ಜಡೆಯಿಂದ
ಹರಿಯ ಅಡಿಯಿಂದ
ಋಷಿಯ ತೊಡೆಯಿಂದ
ನುಸುಳಿ ಬಾ
ದೇವ ದೇವರನು ತಣಿಸಿ ಬಾ
ದಿಗ್‌ದಿಗಂತದಲಿ ಹಣಿಸಿ ಬಾ
ಚರಾಚರಗಳಿಗೆ ಉಣಿಸಿ ಬಾ
ಇಳಿದು ಬಾ ತಾಯಿ
ಇಳಿದು ಬಾ.

೨

ನಿನಗೆ ಪೊಡಮಡುವೆ
ನಿನ್ನನುಡುತೊಡುವೆ
ಏಕೆ ಎಡೆತಡೆವೆ
ಸುರಿದು ಬಾ
ಸ್ವರ್ಗ ತೊರೆದು ಬಾ
ಬಯಲ ಜರೆದು ಬಾ
ನೆಲದಿ ಹರಿದು ಬಾ
ಬಾರೆ ಬಾ ತಾಯಿ ಇಳಿದು ಬಾ
ಇಳಿದು ಬಾ ತಾಯಿ
ಇಳಿದು ಬಾ.






೩

ನನ್ನ ತಲೆಯೊಳಗೆ
ನನ್ನ ಬೆಂಬಳಗೆ
ನನ್ನ ಒಳಕಿವಿಗೆ
ನುಗ್ಗಿ ಬಾ
ಕಣ್ಣ ಕಣ ತೊಳಿಸಿ
ಉಸಿರ ಎಳೆ ಎಳಸಿ
ನುಡಿಯ ಸಸಿ ಮೊಳಸಿ
ಹಿಗ್ಗಿ ಬಾ
ಎದೆಯ ನೆಲೆಯಲ್ಲಿ ನೆಲಸಿ ಬಾ
ಜೀವ ಜಲದಲ್ಲಿ ಚಲಿಸಿ ಬಾ
ಮೂಲ ಹೊಲದಲ್ಲಿ ನೆಲಸಿ ಬಾ
ಇಳಿದು ಬಾ ತಾಯಿ
ಇಳಿದು ಬಾ.

೪

ಕಂಚು ಮಿಂಚಾಗಿ ತೆರಳಿ ಬಾ
ನೀರು ನೀರಾಗಿ ಉರುಳಿ ಬಾ
ಮತ್ತೆ ಹೊಡೆಮರಳಿ ಹೊರಳಿ ಬಾ
ದಯೆಯಿರದ ದೀನ
ಹರೆಯಳಿದ ಹೀನ
ನೀರಿರದ ಮೀನ
ಕರೆಕರೆವ ಬಾ
ಇಳಿದು ಬಾ ತಾಯಿ
ಇಳಿದು ಬಾ.



೫


ಕರು ಕಂಡ ಕರುಳೆ
ಮನ ಉಂಡ ಮರುಳೆ
ಉದ್ದಂಡ ಅರುಳೆ
ಸುಳಿಸುಳಿದು ಬಾ
ಶಿವಶುಭ್ರ ಕರುಣೆ
ಅತಿಕಿಂಚಿದರುಣೆ
ವಾತ್ಸಲ್ಯವರಣೆ
ಇಳಿ ಇಳಿದು ಬಾ
ಇಳಿದು ಬಾ ತಾಯಿ
ಇಳಿದು ಬಾ.

೬

ಕೊಳೆಯ ತೊಳೆವವರು ಇಲ್ಲ ಬಾ
ಬೇರೆ ಶಕ್ತಿಗಳು ಹೊಲ್ಲ ಬಾ
ಹೀಗೆ ಮಾಡದಿರು, ಅಲ್ಲ ಬಾ
ನಾಡಿ ನಾಡಿಯನು ತುತ್ತ ಬಾ
ನಮ್ಮ ನಾಡನ್ನೆ ಸುತ್ತ ಬಾ
ಸತ್ತ ಜನರನ್ನು ಎತ್ತ ಬಾ

೭

ಸುರಸ್ವಪ್ನವಿದ್ದ ಪ್ರತಿಬಿಂಬ ಬಿದ್ದ
ಉದ್ಬುದ್ಧ ಶುದ್ಧ ನೀರೇ
ಎಚ್ಚತ್ತು ಎದ್ದ ಆಕಾಶದುದ್ದ
ಧರೆಗಿಳಿಯಲಿದ್ದ ಧೀರೇ
ಸಿರಿವಾರಿಜಾತ ವರಪಾರಿಜಾತ
ತಾರಾ-ಕುಸುಮದಿಂದೆ



೮

ವೃಂದಾರವಂದ್ಯೆ ಮಂದಾರಗಂಧೆ
ನೀನೇ ತಾಯಿ ತಂದೆ.
ರಸಪೂರಜನ್ಯೆ ನೀನಲ್ಲ ಅನ್ಯೆ
ಸಚ್ಚಿದಾನಂದಕನ್ಯೆ
ಬಂದಾರೆ ಬಾರೆ, ಒಂದಾರೆ ಸಾರೆ
ಕಣ್‌ಧಾರೆ ತಡೆವರೇನೇ?
ಅವತಾರವೆಂದೆ ಎಂದಾರೆ ತಾಯಿ, ಈ ಅಧಃಪಾತವಸ್ನೀ
ಹರಕೆ ಸಂದಂತೆ
ಮಮತೆ ಮಿಂದಂತೆ
ತುಂಬಿ ಬಂದಂತೆ
ದುಮ್ ದುಮ್ ಎಂದಂತ
ದುಡುಕಿ ಬಾ
ನಿನ್ನ ಕಂದನ್ನ ಹುಡುಕಿ ಬಾ
ತುಡುಕಿ ಬಾ ತಾಯಿ
ದುಡುಕಿ ಬಾ.

*೯*

*ಹರಣ ಹೊಸದಾಗೆ ಹೊಳೆದು ಬಾ*
*ಬಾಳು ಬೆಳಕಾಗೆ ಬೆಳೆದು ಬಾ*
*ಕೈ ತೊಳೆದು ಬಾ*
*ಮೈ ತಳೆದು ಬಾ*
*ಇಳೆಗಿಳಿದು ಬಾ ತಾಯೀ*
*ಇಳಿದು ಬಾ ತಾಯಿ*
*ಇಳಿದು ಬಾ.*


೧೦
*ಶಂಭು-ಶಿವ-ಹರನ ಚಿತ್ತೆ ಬಾ*
*ದತ್ತ ನರಹರಿಯ ಮುತ್ತೆ ಬಾ*
*ಅಂಬಿಕಾತನಯನತ್ತೆ ಬಾ*
*ಇಳಿದು ಬಾ ತಾಯಿ*
*ಇಳಿದು ಬಾ.*

- ಗಂಗಾವತರಣ : ೩/ಪ್ರ : ೧೯೫೧

ಭಾವ : ಗಂಗಾವತರಣಕ್ಕೆ ನಿಮಿತ್ತ ಮಾತ್ರವಾದದ್ದು ಬಂಗಾಲದೊಳಗಿನ ಬರಗಾಲದ ರೌದ್ರ ಪ್ರಸಂಗ. ಅವ್ಯಾಜ ಕರುಣೆಯ ನಿರಂತರ ಅವತಾರ ಈ ಗಂಗಾಸ್ತೋತ್ರ ಎಂಬ ಸ್ಥಾಯೀಭಾವದಲ್ಲಿ ಈ ಕವನದ ಉಗಮ ಇದೆ.

ವಿಶೇಷ : ೧) ನುಡಿ-೩ ರಲ್ಲಿ ಮೂಲ ಹೊಲ-ಮೂಲಾಧಾರ ಚಕ್ರ; ಜೀವಜಲ-ಸ್ವಾಧಿಷ್ಠಾನ ಚಕ್ರ. ಎದೆಯ ನೆಲೆ-ಅನಾಹತ ಚಕ್ರ, ಕಣ್ಣ ಕಣ-ಆಜ್ಞಾಚಕ್ರ ಮತ್ತು ತಲೆಯೊಳಗೆ-ಸಹಸ್ರ ದಲ ಚಕ್ರ. ಮಣಿಪುರ ಚಕ್ರ-ನಾಭಿ ಮತ್ತು ವಿಶುದ್ಧ ಚಕ್ರ-ಕಂಠ ಗುಪ್ತವಾಗಿವೆ. ಯೋಗ ಶಾಸ್ತ್ರದ ಪರಿಭಾಷೆ ಇಲ್ಲಿದೆ.

೨) ಜಹ್ನು ಋಷಿ ಕುಡಿದ ಗಂಗೆ ಅವನ ತೊಡೆಯಿಂದ ಹರಿದು ಬಂದುದಾಗಿ - ಕೆ. ನಾರಾಯಣ ಸ್ವಾಮಿ ಬರೆದ - ಪುರಾಣ ಗ್ರಂಥದಲ್ಲಿ ಪು.೧೫೪ ರಲ್ಲಿ ವರ್ಣಿಸಲಾಗಿದೆ.



## ೧೨ ರಮ್ಯ-ಅಗಮ್ಯ

*ರಮ್ಯವಿರುವ ಈ ಪ್ರಪಂಚ*
*ಎಂದಿಗೂ ಅಗಮ್ಯವು*
*ಗಮ್ಯವಿರಲಿ ಇರಲಗಮ್ಯ*
*ಯಾವಾಗಲು ರಮ್ಯವು // ಪಲ್ಲವಿ //*
*೧*
*ಇರವ ಹರವ ಬಲ್ಲರಾರು*
*ಎಲ್ಲಿ ಇದರ ಅಂತವು?*
*'ನಾನೆ ಆದಿ ಜಗಕೆ ಹಾದಿ'*
*ಎಂಬುದಿದರ ಪಂಥವು.*
ಜಡವೆ ನಾಶರಹಿತವೆಂದು
ಎನುವನು ವಿಜ್ಞಾನಿಯು.
ಜೀವಕಿಹುದು ಅಮರಪಟ್ಟ
ಹೇಳಲೇಕೆ ಜ್ಞಾನಿಯು.
೨
ಇನಿಸು ಉಳಿದು ಇನಿಸು ಬೆಳೆದು
ಅಳಿವುದಿನಿಸು ರೂಪವು.
ಸೃಷ್ಟಿಲೀಲೆಗಿದು ಸ್ವಭಾವ
ರೂಪಗಳ ಸ್ವರೂಪವು.
ಹುಟ್ಟುಸಾವು ಎರಡು ಮೆಟ್ಟು
ಜೀವನಟನ ಆಟಕೆ.
ಜೀವನವಿದು ನಾಟ್ಯರಂಗ
ಭಾವರಸದ ಮಾಟಕೆ.

- ಮುಕ್ತಕಂಠ : ೧೬/ಪ್ರ : ೧೯೫೬

---

ಭಾವ : ರಮ್ಯತೆಯಲ್ಲಿ ಇರುವ ಅಗಮ್ಯತೆಯೇ ಅದರ ಧ್ವನಿ.

# ೧೩ ಮಳೆಗಾಲ

೧

ಅಡಗಿದೆ ದೃಷ್ಟಿ-
ಆದರು, ಸುರಿಯುತ್ತಿದೆ ವೃಷ್ಟಿ!
ಮೋಡದ ಮೇಲ್ಮೋಡ.
ತಿಳಿಯದು ಏನಿದೆಯೋ ಗೂಢ!

೨

ನಸುಕಿನ ಹಕ್ಕಿಯ ಚಿಲಿಪಿಲಿಯಿಲ್ಲ,
ಗೊಟರ್ಗುಡುತಿದೆ ಕಪ್ಪೆ
ಜೀರುಂಡೆಯ ಕಿಲಕಿಲ ಇರುಳಿಡುಗಿದೆ
ದುರ್ದಿನಕಿದು ತಪ್ಪೇ?

೩

ಹಸಿರಿನ ಉಲ್ಲಾಸಕೆ ಮಿತಿಯಿಲ್ಲ,
ಕೆಸರಿಗಿಲ್ಲ ಕೊರತಿ.
ಪಾತರಗಿತ್ತಿಯು ಸುಳಿದಾಡುತ್ತಿದೆ.
ಮನೆ ಹಿಡಿದಳು ಗರತಿ.

೪

*ಬಾನ್ ತುಂಬಿದೆ, ಕೆರೆ ತುಂಬಿದೆ,*
*ಹೂ ತುಂಬಿದೆ ಬೇಲಿ.*
*ನೀರಲದಲಿ ರಸ ತುಂಬಿದೆ,*
*ಮಿದುವಾಗಿದೆ ಜಾಲಿ.*

- ಜೀವಲಹರಿ : ೬೦/ಪ್ರ : ೧೯೫೭

---

ಭಾವ : ವರ್ಷವರ್ಷಕ್ಕೂ ಹೊಸತನ ತರುವುದು ವರ್ಷಾಕಾಲ. ಕೆಲವರು ತಮ್ಮ ವಸಂತ ಇಳಿಸುತ್ತಾರೆ. ಕೆಲವರು ಚಳಿಗಾಲದ ಲೆಕ್ಕವನ್ನು ಇಡಬಹುದು. ಬೇಂದ್ರೆಯವರಿಗೆ ಶ್ರಾವಣ, ಹೊಸತನವನ್ನು ತರುತ್ತದೆ.

ಶಬ್ದಾರ್ಥ : ಇಡುಗು=ವ್ಯಾಪಿಸು, ಹರಡು.

# ೧೪ ಬಾರೋ ಬಾ

*ಬಾರೋ ಬಾ ಸಂಗಾಟ ಬಾ ।। ಪಲ್ಲವಿ ।।*

*೧*

*ಶೃಂಗೇರಿ ಶಿಖರಾ ಏರಿ, ತುಂಗಿಯ ಒಡಲ ಸೇರಿ*
*ಬಂಗಾರ ಮಲೆನಾಡ ಪೊಂಗಿಸಿ ಬಾ*
*ಬೆಳುವಲ ಬರಗಾಲ ಹಿಂಗಿಸಿ ಬಾ ।। ಬಾರೋ ಬಾ.....*

*೨*

ಕೊಂಕಣ ಸುತ್ತಿಕೊಂಡು, ಮೈಲಾರ ನೋಡಿಕೊಂಡು
ಬಯಲs ಸೀಮಿ ದಾಟು ಶ್ರೀಶೈಲಕ್ಕ ಬಾ
ನಾಡ ಹೊಯ್ಲಕ್ಕ ಬಾ ।। ಬಾರೋ ಬಾ.....

೩

ಲಿಂಗದ ಶಿರದಲ್ಲಿ, ಗಂಗಿಯು ಸುರಿಧಾಂಗ
ಲಿಂಗಾಂಗ ತೊಯ್ಯುತ ಸಂಗಾಟ ಬಾ
ಹೊಲಕ್ಕಂಗಾತ ಬಾ ।। ಬಾರೋ ಬಾ.....

೪

ಹೊತ್ತೀಗೆ ಬಂದಾವ, ಗೊತ್ತಿಗೆ ಮುಟ್ಟಾವ
ಎತ್ತೀಗೆ ಹರೆ, ನೆತ್ತೀಗೆ ಬಾ
ಊರ ಒತ್ತೀಗೆ ಬಾ ।। ಬಾರೋ ಬಾ.....

*೫*

*ಮಳಿರಾಯ ಬಂದೇನು, ಘನರಾಯ ಅಂದೇನು*
*ತುಂತುರ ಮಳೆಯಾಗಿ ಹಂತೇಕ ಬಾ*
*ಹೀಂಗ ನಿಂತ್ಯಾಕ ಬಾ ।। ಬಾರೋ ಬಾ.....*

೬

ಸಿಡಿಮಿಡಿ ಮಾಡಬ್ಯಾಡಾ
ಸಿಡಿಲೆರಗಿ ಬರಬ್ಯಾಡಾ
ತುಡಗೀಲೆ ಹೆಜ್ಜೆ ಹಾಕಿ, ಚಡಪಡಿಸಿ ಬಾ
ಜಾಡು ತಡವೆರಿಸಿ ಬಾ ।। ಬಾರೋ ಬಾ.....


೭

ಊರಿಗೆ ಹೋದ ಗೆಣೆಯಾ ಸಾರಿಗೆಗೂ ಬರಲಿಲ್ಲ
ಅವ ಹಿಂದ, ನೀ ಮುಂದ ಒಳಕೊಂಡ ಬಾ
ಸೆಲ್ಲೆ ಸೆಳಕೊಂಡ ಬಾ
ರಿಮ್, ಝಿಮ್, ರಿಮ್ ಝಿಮ್ ಚಮಕಿಸಿ ಬಾ
ಮೈ ಗಮಕಿಸಿ ಬಾ ॥ ಬಾರೋ ಬಾ ಸಂಗಾಟ ಬಾ.

- ಶತಮಾನ : ೯೨/ಪ್ರ : ೨೦೦೪

---

ಭಾವ : ಮಳೆಗಾಗಿ ಪ್ರಾರ್ಥನೆ. ಧಾರವಾಡ ಆಕಾಶವಾಣಿಯಿಂದ ಹಾಡಲು ಶ್ರೀ ನೀಲಗಾರ ಅವರಿಗೆ ಬರೆದುಕೊಟ್ಟದ್ದು. ಹಸ್ತಪ್ರತಿಯನ್ನು ಶ್ರೀ ಎನ್. ಕೆ. ಕುಲಕರ್ಣಿ ಕೊಟ್ಟದ್ದು.



# ೧೫ ಅಲಕ್ಷ್ಯಸುಂದರ ಪ್ರತಿಬಿಂಬಗಳು

೧

ಅಲಕ್ಷ್ಯಸುಂದರ ಅಪೋರಸನನು
ಕಂಡು ಬೆರಗುಗೊಂಡ:
"ಇದ್ದಿಲಲ್ಲ ಇವ ರತ್ನಪಿಂಡ
ರಸರಸಿತನಾದ ಕೆಂಡ !

ಜೀವದಾಹವದು ಗೆದ್ದನಾರೊ
ತಾನಿದ್ದನಾರೊ ಕಾಣೆ
ಜಿದ್ದು ಯುದ್ಧ ಇವನೇತ್ರ ಬುದ್ಧ
ಈ ಮಾತು ಜೀವದಾಣೆ.

ಹರಿದು ಹೋಗುವುದು ಯಾವ ರಸವು ಆ
ಜ್ಯೋತಿ ಅಮೃತವೆಂದೆ
ಅರಸನಲ್ಲ ಇವ ಸುರಸಮೂರ್ತಿ
ಇದಕಾಣಲೆಂದೆ ಬಂದೆ".

೨

*ದಿವ್ಯನಾಕದಲಿ ದಿವ್ಯಲೋಕದಲಿ ದಿವ್ಯಪಾಕವಿದ್ಯೆ*
*ಶುದ್ಧರಸವೆ ಓ ಸಿದ್ಧರಸವೆ ಇರುವರಿವು ಹಿಗ್ಗಿ ಇದ್ದೆ*
*ದಿವ್ಯಸೂರ್ಯ ಎಚ್ಚರಿಸುತಿರಲು ಸುತ್ತೆಲ್ಲ ದಿವ್ಯ ನಿದ್ದೆ*
*ದಿವ್ಯಸ್ವಪ್ನ ಕಣ್ತೆರವಿ, ಮಾಡೆ ಆಹ ದಿವ್ಯಕಾಣಲಿದ್ದೆ.*

೩

ಹರ ರುದ್ರನಲ್ಲ; ರಸ ಭದ್ರ ಬಂದ
ಆನಂದವನ್ನು ತಂದ
ಗೋವಿಂದನಲ್ಲ ಅರವಿಂದ ಬಂದ
ಸತ್ಯಾತ್ಮನಾಗಿ ನಿಂದ.

ದೇಮವ್ವನಲ್ಲ ಸೋಮವ್ವ ಈಕೆ
ತಾಯಾಗಿ ಇಳಿದಳಣ್ಣ
ದುರ್ಗವ್ವ ಅಲ್ಲ, ಸರ್ವಸ್ವ ಈಕೆ
ಪಡೆದುದನು ಹಡೆವಳಣ್ಣ.

೪

ಹಸಿವೆಯಾಗಿ ಬಂದಿತ್ತು ಬಸಿರಿನಲಿ ಹಸಿದು ವಿಶ್ವದನಲ
ಬಯಕೆಯಾಗಿ ಬೀಸಿತ್ತು ಒಲವು ತಾನಾಗಿ ಪ್ರಾಣನನಿಲ
ಬ್ರಹ್ಮಕರ್ಮ ಪ್ರತಿಸರ್ಗದಲ್ಲಿ ಬರೆ ತಾ ವಿಸರ್ಗವೆನಿಸಿ
ನೆಲದ ಒಲವಿನಲಿ ಚೆಲುವೆ ಹೂತಿತ್ತು ತಾ ನಿಸರ್ಗವೆನಿಸಿ.

೫

ಜೀವನಲ್ಲಿ ತುಂಬಿಹಳು ತಾಯಿ ತಾನಾಗಿ ದೇವನೊಲವು
ಮನೋರಾಜ್ಯವನು ನಂಬಿ ಆಳುವಳು ಅರಳಿ ಅರಿವಿನೊಳವು
ಚುಂಬಿಸುವಳು ತನ್ನತ್ತ ಎಲ್ಲ ಹೊಮ್ಮಿರಲು ಪ್ರಾಣಬಲವು
ಬಿಂಬಿಸುವಳು ಪ್ರತಿಬಿಂಬದಂತೆ ಅಂಗಾಂಗವಾಗಿ ಚೆಲುವು.

೬

ಇದ್ದುದೆಲ್ಲವೂ ತಿರುಳಿನೊಳವು, ಹಿರಿಬಲವು ಚೆಲುವು ಒಲವು
ನಿದ್ದೆ ತಿಳಿದು ಎದ್ದಾಗ, ಬೀಜವೇ ಮರವು ಹಲವು ಫಲವು
ಹಿಗ್ಗಿದಾಗ ಕಾಣುವುದು ಕಾಣದಾನಂದ ಮಗ್ನನಲ್ಲಿ
ಭೂಮವೆಂಬಂತೆ ಭೂಮಿ ಮೆರೆಯೆ ವಿಜ್ಞಾನಲಗ್ನದಲ್ಲಿ.

೭

ಸದ್ಭಾವದೊಂದು ಎದೆಮಿಡಿತದಂತೆ ಓಂಕಾರ ಧ್ವನಿಸುತಿಹುದು
ಚಿತ್ತಚೇತನವು ಅರಿತುದನ್ನೆ ಮರೆತಂತೆ ನೆನೆಸುತಿಹುದು
ವಾಚ್ಯನಟಿಸಿತ್ತು ರಂಗಭೂಮಿಯಲಿ ಅನಿರ್ವಾಚ್ಯವಾಗಿ
ಸಾಕ್ಷಿಪ್ರೇಕ್ಷಕನ ಚಿತ್ತರಂಗದಲಿ ಹೃದಯ ಸೂಚ್ಯವಾಗಿ.

- ಪ್ರತಿಬಿಂಬಗಳು-೧/ರಚನೆ : ೯-೬-೧೯೫೯/ಪ್ರ : ೧೯೮೭

---

ಭಾವ : ಸಾಕ್ಷಿ ಪ್ರೇಕ್ಷಕನ ಹೃದಯದಲ್ಲಿ ಅನುಭವಕ್ಕೆ ಬಂದ ಭೂಮಾನುಭೂತಿ.

ಶಬ್ದಾರ್ಥ : ಆ ಲಕ್ಷ್ಯಸುಂದರ=ಸೌಂದರ್ಯದ ಅನಂತರೂಪ. ಅಪೋರಸ=ನೀರಿನಂತೆ ಅಮೃತವಾದ ದೇವ ರಸ. ಭೂಮ=ಸರ್ವವ್ಯಾಪಿ ಪರಮಾತ್ಮ ಭವ್ಯ.

ವಿಶೇಷ : ನುಡಿ ೧ ಸಾಲು ೫ ರಿಂದ ೮ ಇವುಗಳ ಭಿನ್ನ ಪಾಠಾಂತರ ಹೀಗಿದೆ.

ಜೀವನಾಹವದಿ ಗೆದ್ದನಾರೊ
ತಾ ಬಿದ್ದನಾರೊ ಕಾಣೆ
ಜಿದ್ದು ಯುದ್ಧ ಇವನೇ ಪ್ರಬುದ್ಧ
ಈ ಮಾತು ಜೀವದಾಣೆ. - ಕಾವ್ಯೋದ್ಯೋಗ-ಪುಟ-೨೭-೨೮.

## ೧೬ ಸ್ಮರಣ-ತರಂಗಿಣಿ

ಚಿತ್ತಭಿತ್ತಿಯೊಳು ಸ್ಮರಣ ತರಂಗಿಣಿ
ಸಂತತ ಹರಿಯುವಳು. ॥ ಪಲ್ಲವಿ ॥

೧

ಮೈದೋರುವಳು । ಮೈಗರೆಯುವಳು
ಎತ್ತಣೆನೆತ್ತೋ ಹರಿದೆ ಹರಿಯುವಳು
ಬಯಲಲಿ ಮೆರೆಯುವಳು.

೨

ಎಲ್ಲಿದೆ ಉಗಮ । ಯಾವುದೊ ಸಂಗಮ
ಪದರು ಪದರಿನಲಿ ಏನೋ ಅದುರನು
ತೆರೆ ತೆರೆ ತೆರೆಯುವಳು.

೩

ಕ್ಷಣ ನೋಡುವಳು । ಕ್ಷಣ ಹಾಡುವಳು
ಪಳಕು ಪಳಕುಗಳ ಚಿತ್ರವಿಚಿತ್ರವ
ಕ್ಷಣದಲಿ ಬರೆಯುವಳು.

೪

ಎಲ್ಲೊ ಬೆರೆಯುವಳು । ಯಾಕೊ ಮರೆಯುವಳು
ಅದ್ಭುತಗಳನೂ ಬುದ್ಬುದಗಳೊ ಎನೆ
ಪಟ್ಟನೆ ಒಡೆಯುವಳು.

*೫*

*ಸ್ವರ ಹಿಡಿಯುವಳು । ಸ್ವರ ಮಿಡಿಯುವಳು*
*ಬಿಂಬವನ್ನೆ ಪ್ರತಿಬಿಂಬಿಸಿದಂತೆಯೆ*
*ನನ್ನನೆ ಕೊರೆಯುವಳು*
*ನನ್ನಲಿ ತೊರೆಯುವಳು*
*ನನ್ನೊಳೆ ದೊರೆಯುವಳು.*

*೬*

*ಮರಣವಿಲ್ಲದೀ ಸ್ಮರಣ ತರಂಗಿಣಿ*
*ಸುಪ್ತ ಸರಸ್ವತಿಯಾಗಿಹಳು*
*ಉದ್ಭವಲಿಂಗದ ಹಾಗಿಹಳು*
*ಕಾರಣ-ನದಿಯಿದು*
*ಬಗೆ ತಳಹದಿಯಿದು*


೭
ಚಿತ್ತಭಿತ್ತಿಯೊಳು ಚಿತ್ರವ ಬರೆದೊಲು
ನಿಮ್ನೋನ್ನತಿಯಲಿ ತಿರುಗುತಿದೆ
ನೆನೆ ನೆನೆದಂತೆಯೆ ಕರಗುತಿದೆ
ಈ ನಿಬ್ಬೆರಗಿಗು ಸೆರಗು ಇದೆ.

- ನವಮನ : ೪೦/ಪ್ರ : ೧೯೫೮

---

ಭಾವ : ಸಂಗೀತವು ಸ್ಮರಣೆಯಲ್ಲಿ ಮೂಡಿಸುವ ಅನೇಕ ಚಿತ್ರಗಳ ವರ್ಣನೆ. ಸಂಗೀತ ಕಚೇರಿ ಕೇಳಿ ಮುಗಿಸಿ ಮನೆಗೆ ಹೋದ ಬಳಿಕ ಅದರ ತರಂಗಗಳು ಏನೇನು ಮಾಡುವವೋ ಅದೇ ಆದರ ಮಹತಿ. ಸಂಗೀತವು ಸಗುಣೋಪಾಸನೆಯಿಂದ ನಿರ್ಗುಣೋಪಾಸನೆಗೆ ಪ್ರವೇಶ ಕೊಡಿಸುವ ಪ್ರೇರಕ ಮಾಧ್ಯಮ.

ಶಬ್ದಾರ್ಥ : ಅದುರು-ಅದಿರ್=ಲೋಹಾಂಶ, ಖನಿಜದ್ರವ್ಯ, ಕಂಪನ. ಪಲಕು-ಪಳಕು=ಹಳಕು, ಸ್ಫಟಿಕ. ನಿಮ್ನ=ಆಳವಾದ, ಇಳಿತ, ಅವರೋಹಣ. ನಿಬ್ಬೆರಗು=ಅತ್ಯಾಶ್ಚರ್ಯ.



## ೧೭ ಹೂ

೧

*ಚಂದಿರನ ಮೂಡಿಸಲು*
*ಮನದಲ್ಲಿ ನೆನೆಯುತಿರೆ*
*ಮೊಳೆತ ಚೆಂದದ ನನೆಯ, ಮುಂಗುರಹ ಪಡೆದ ॥*
*ಬ್ರಹ್ಮನೆ ಸಮಾಧಿಯಲಿ*
*ಒಲವಿನಲಿ ನಲಿವಿನಲಿ*
*ಚೆಲುವಿನಾ ಕಾಣಿಕೆಗೆ 'ಹೂ' ಎಂದು, ಎಂದ*

೨

ಆ ಚೆಲುವನಾ ಒಲವ-
ನಾ ನಲಿವನೆಲ್ಲೆಲ್ಲು
ಕಣ್ಣಾರೆ ಮನವಾರಲೆಂದು ಹೊರ ಹಡೆದ ॥
'ಹೂ' ಎಂಬ ಮನದುಸಿರೆ
ನೆಲದ ಬಸಿರಲಿ ಮೊಳೆದು
ಮಣ್ಣಿನಾ ಮಾಸದಲಿ ಮಾಸದಲೆ ಬಳೆದು

೩

ತಂಗಾಳಿಯೊಡ ಬಂದ
ಮುಂಗಾರ ಮಳೆಗೆದ್ದು
ಗಿಡಬಳ್ಳಿಗಳ ಕೊನೆಗೆ ರೂಪವನು ತಳೆದು ॥
ನನೆಯಾಗಿ ಮೊನೆಯಾಗಿ
ಮುಗುಳಾಗಿ ಅರಳಾಗಿ
'ಪುಃ' ಎಂದು ಬಿಟ್ಟುಸಿರೆ ತಾನೆ ಹೆಸರಾಯ್ತು

೪

ಒಂದರೊಲು ಒಂದಿಲ್ಲ
ಒಂದರೊಳು ಕುಂದಿಲ್ಲ
ಒಂದೊಂದು ಅಂದವೂ ತನತನಗೆ ಚೆಂದ ॥
ಚೆಂದಕ್ಕೆ ಒಂದೆಮ್ಮೆ
ಸಾಲದೆಂಬಂತೆ ನೂ-
ರೊಂದು ಮೈದಾಳಿ ಕುಣಿಯುವದು ಸ್ವಚ್ಛಂದ

೫

*ಹೂವೆ ಚಂದಕೆ ಅರಸ*
*ಚೆಂದದೊಳು ಇದು ಸರಸ*
*ಇದುವೆ ಚೆಂದದ ಗುಡಿಯ ಗೋಪುರಕೆ ಕಳಸ ||*
*ಇದುವೆ ಚೆಂದದ ಕುಸುರು*
*ನರುಗಂಪು ಇದರುಸಿರು*
*ಇದಕೆ 'ಹೂ' ಎಂಬ ಹಗುರಾದ ಸವಿ ಹೆಸರು.*

- ಗರಿ : ೩೫/ಪ್ರ : ೧೯೩೨

---

ಭಾವ : ಹೂ ಎಂಬ ಶಬ್ದಾರ್ಥದಲ್ಲಿ ಹುದುಗಿದ ಭಾವವನ್ನು ಕಲ್ಪನಾವಲ್ಲರಿಯಾಗಿ ಇಲ್ಲಿ ಹಬ್ಬಿಸಿದೆ.

ವಿಶೇಷ : ಕವನದ ಛಂದಸ್ಸು-ಕುಸುಮ ಷಟ್ಪದಿ. ೩ನೇ ಸಾಲಿನ ಕೊನೆಯ ಗಣ ೨ ಮಾತ್ರೆಯದಿರಬೇಕು. ಬೇಂದ್ರೆಯವರು ಅದನ್ನು ೨+೧=೩ ಮಾತ್ರೆಯನ್ನಾಗಿ ಮಾರ್ಪಡಿಸುವ ಸ್ವಾತಂತ್ರ್ಯ ತೋರಿಸಿದ್ದಾರೆ. ರಚನೆ ಗೇಯವಾಗಿದೆ.

## ೧೮ ಪಾರಿಜಾತ

೧
ಸಂಜೆಗೆಂಪು ಮೊದಲು ಹಿಂದೆ
ಬೆಳುದಿಂಗಳು ಅದರ ಮುಂದೆ
ವರ್ಣಕ್ರಮು ಕಾಣಲಮುಮು
ಇದನು ಬ್ರಹ್ಮ ಬರೆದನೊ!
೨
ತುಂಬು ಹಳದಿ ಕೆಂಪು ನಸುಕೊ
ಹೂವದು ಮುಂಜಾವ ಮುಸುಕೊ
ಎನಿತು ಸಣ್ಣ ಏನು ಬಣ್ಣ
ನನ್ನ ಕಣ್ಣ ಕರೆಸಿತು.
೩
ಹೊಳೆವ ಹುರುಳ ಹಾಡಿನಂತೆ
ಹೆಣ್ಣಿನ ಕಳೆ ಪಾಡಿನಂತೆ-
ಈ ಸುವಾಸ, ಮಂದಹಾಸ
ದಿನದಾಯಸ ಕಳೆವುದು.
೪
ಮೂಗಿಗಿದರ ಕಂಪು ಬರದು
ಮೈಗೆ ಇದರ ತಂಪು ಅರಿದು
ಸುರರ ಬನದ ಹೂವುತನದ
ತಿಳಲು, ಮನದ ಅರಿವಿದು.
೫
ಸತಿ ರುಕ್ಮಿಣಿ ಪ್ರೇಮುರಮುಣ
ಅವಳ ಪೂಜೆಗಿದೆ ಸುಮುಮುಣ
ಕಾಮುಭಾವ ತೊಳೆದು ದೇವ
ಈ ಹೂವ ತರಿಸಿದ.

೬
ಸತ್ಯಭಾಮೆ ಕುನಿಸಿನವಳು,
ಕೃಷ್ಣ, ರಸಿಕ, ಹುಡುಗೆಯಿವಳು
ಇದನು ಒಂದು ಮೇಲು ಎಂದು
ಭಜಿಸಲೆಂದು ಇರಿಸಿದ.
೭
ಮಣ್ಣು ನೆಲದ ಹೂವೆ ಅಲ್ಲ
ಗರ್ವ ದರ್ಪ ಇದಕೆ ಇಲ್ಲ;
ತೊರೆದಾದಿನ ನಂದನವನ
ಭೂ ಬಂಧನ ಪಡೆಯಿತು.
೮
ಗಿಡವು ಬರಲು ಇಳೆಗೆ ಇಳಿದು
ಭುವಿಗೆ ಸರಿ ವಿಕಾರ ತಳೆದು
ಸುಮವು ಮಾತ್ರ ಮಧುರಗಾತ್ರ
ಪ್ರೀತಿ ಪಾತ್ರವುಳಿದಿತು.
೯
ಎಲೆಯು ಗಿಡವು ತೀರ ರುಕ್ಷ
ಹೆಸರು ಹಿರಿದು ಕಲ್ಪವೃಕ್ಷ
ಹೂವಿನಿಂದ ಹೆಸರು ಬಂದ
ಇದರ ಚಂದ ಹೊಸತಿದು.
೧೦
ಚಿಕ್ಕೆಯೊಡನೆ ಮೂಡು ಮುಳುಗು;
ಆಗದದಕೆ ಹಗಲ ಬೆಳಗು;
ಜ್ಞಾನಿಯ ಗತಿ ಇರುಳೊಳಗತಿ
ನಿಜ ಜಾಗೃತಿ ಇರುವದು.

೧೧
ಬಲು ಮಿದು ಅತಿ ನಯದ ತನುವು
ಮುಟ್ಟಿದೊಡನೆ ಕೆಟ್ಟೆನೆನುವು-
ದಿದು ಸತಿ ಭಯ, ಮಡದಿಯ ನಯ
ಅಂಥ ಹೃದಯವರಳಿತು.
೧೨
ಪಾರಿಜಾತ ಹುಟ್ಟಿಸಿದನ
ಎದೆಯ ಹದವು, ಮನದ ಹದನ
ಏನು ಮಾಟ, ಎಂಥ ಆಟ!
ಇದರ ಕೂಟ ತಿಳಿಯದು.

- ನಾದಲೀಲೆ : ೧೫/ರಚನೆ : ಸಾಧನಕೇರಿ, ಧಾರವಾಡ/ಪ್ರ : ೧೯೩೮

---

ಭಾವ : ನಂದನವನದಲ್ಲಿದ್ದ ಈ ಕಲ್ಪವೃಕ್ಷ ಸತ್ಯಭಾಮೆಯ ಭೂ ಅಂಗಳಕ್ಕೆ ಮೊದಲು ಬಂತಂತೆ. ಆದರೆ ಅದರ ಹೂವಿನ ಮಳೆಯೆಲ್ಲ ರುಕ್ಮಿಣಿಯ ಅಂಗಳದಲ್ಲಿ ಬಿತ್ತಂತೆ. ಪಾರಿಜಾತ ಹೂ ಸಮುದ್ರ ಮಂಥನದಲ್ಲಿ ಬಂದ ಚತುರ್ದಶ ರತ್ನಗಳಲ್ಲೊಂದಂತೆ. ಅಡಗಿರುವ ಇತಿಹಾಸ ಯಾವುದೇ ಇರಲಿ, ಈ ಹೂವು ಪ್ರಜ್ಞೆಗೆ ನವನವೋನ್ಮೇಷವನ್ನು ತರುವುದು. ದಿವ್ಯಜೀವನದ ಅಭೀಪ್ಸೆಯ ಕರುಹು ಈ ಹೂವು ಎಂದು ಒಳಗಂಡವರು - ಪಾಂಡಿಚೇರಿಯ ಶ್ರೀಮಾತೆಯವರು.

ಶಬ್ದಾರ್ಥ : ಕುನಿಸು-ಕುನಸು=ಸೇಡು, ಬದ್ಧದ್ವೇಷ. ರುಕ್ಷ=ಒರಟಾದ, ಬಿರುಸಾದ. ಗೊಂದಳ=ಸಮೂಹ.

ವಿಶೇಷ : ಇಂದಿಗೂ ದ. ರಾ. ಬೇಂದ್ರೆಯುವರ ಸಾಧನಕೇರಿಯ ಮನೆಯ ಅಂಗಳ ಪ್ರವೇಶಿಸುತ್ತಲೇ ಬಲಗಡೆಗೆ ಪಾರಿಜಾತ ವೃಕ್ಷವಿದೆ. ಇದು ಕವನಕ್ಕೆ ಪ್ರೇರಣೆ.



## ೧೯ ಇದು ಯುಗಾದಿ

೧

ಆವರವರಿಗೆ ಅವರ ಹಾದಿ
ನಿನಗೆ ನನಗೆ ಒಂದೆ ಆದಿ-ಒಂದೆ ದಾದಿ
ಯುಗದ ಮಧ್ಯಬಿಂದು ಒಂದು.

೨

ಇದು ಯುಗಾದಿ
ಆಗಿರು ಸಂವಾದಿ
ಏಕೆ ವಾದ ಬೇದಿ?
ಸಾದಿ  ನಮ್ಮ ಹಾದಿ ತಮ್ಮಾ
ಯಾಕೆ ಕೆಡುವೆ ಕಾದಿ?
ನಿನ್ನ ಪಾಡು ನಿನ್ನ ಜಾಡು
ವಿರಸ ನಿನಗನಾದಿ.

೩

ಮೊನ್ನೆ ಮೊನ್ನೆ ಬೂದಿಯಾದಾ
ಹೋಳಿಯಲ್ಲಿ ಕಾಮಾ
ಚೈತ್ರಗೌರಿ ಹೂತಳಣ್ಣಾ
ನೆನೆದು ಶಿವನ ನಾಮಾ
ಮಾಧವನಾ ರಾಸಲೀಲೆ-
ಗಿದೇ ಋತುವು ಹದವು
ಸುಂಟ್ರುಗಾಳಿ, ಅಡ್ಡಮಳೆ
ತೆರೆದಿತಕ್ಕಾ ಕದವು.
ಚಿಗುರು, ಹಸಿತು,  ಬಲಿತು, ಹಳಿತು
ಎಲೆ ಎಲೆ ಎಲೆ ಉದುರಿತು
ಫಲ ಒಡಿದಿತು ಬೀಜ ಬೀಜ
ಅದು ಎಲ್ಲೋ ಚದುರಿತು.

೪
ಆದಿ ಇಲ್ಲ; ಅಂತ್ಯ ಇಲ್ಲ
ಮಧ್ಯೆ ಯಾವ ಹಾದಿ?
ಯುಗ ಯುಗಗಳ ವಿರಹದೊಳಿದೆ
ಪ್ರೀತಿಯಾ ಬುನಾದಿ.
ನನ್ನುಸುರಿಗೆ ನಿನ್ನುಸಿರನು
ಸಂಗಡಿಸು ಸಮಾಧಿ.
೫
*ಶ್ರಾವಣದಲಿ ಶ್ರವಣಸುಖ*
*ಮಾಘದಲ್ಲಿ ಅನಘಮುಖ*
*ಆಶ್ವಿನ ರವಿ ಚೈತ್ರ ಚಂದ್ರ*
*ಪರಸ್ಪರರು ಅಭಿಮುಖ.*
*ಮಧು ಮಾಧವ ರಾಧಾ ರತಿ*
*ವೈಶಾಖಿಯ ಋತು ಸತ್ಕೃತಿ*
*ನೈಸರ್ಗಿಕ ವೈಸರ್ಗಿಕ*
*ಛಂದೋಮಯ ಪ್ರತಿಕೃತಿ.*
೬
ಕವಿಯಾಗಿಯೆ ಹೇಳುತಿರೋ
ಕಿವಿಯಾಗಿಯೆ ಕೇಳುತಿರೋ
ಭವ ಭವ ಭವ ಮೋಚನವಿದೆ
ಸವಿ ಸವಿ ಸವಿದೇಳುತಿರೋ
ಸಾಯಕನೋ ಈ ಪ್ರಪಂಚ
ಗಾಯಕನಿಗೊ ಇದೆ ವಿಪಂಚ
ಮಾಯದ ಕಾಯ್ ಮಾಗುವದೋ
ಅರಸು ಅಂಚ ಹಂಚ ಹಂಚ
ಸರಸಿಯೊಳಗೆ-ಹೊಂಚ.

೭

ಹಾದಿಯೆಂದು ಹಾಯಬೇಡ ಯಾವುದೋ ಯುಗಾದಿ
ಯುಗಲ ಯುಗಲ ವಿರಹದೊಳಿದೆ ಪ್ರೀತಿಯೂ ಬುನಾದಿ
ಸತ್ತಿನ ಗತ್ತಿನ ಗಮಕವು ಭಾವರಸ ಸನಾದಿ
ಛಾಂದಸಿಕತೆ ಮುಕ್ತಮಾರ್ಗ ? ಶ್ರುತಿ-ಕೃತಿ ಸಂವಾದಿ.


- ನಾಕುತಂತಿ : ೩೫/ಪ್ರ : ೧೯೬೪

---

ಭಾವ : ಸಾದಿ=ಸಾಹಿತ್ಯದ ಮಾರ್ಗ ನಮ್ಮ ಹಾದಿ ಎಂದಿದ್ದಾರೆ ಬೇಂದ್ರೆ. ಆದಿ ಸಮೇತವಾದುದು ಸಾದಿ. ಮತ ಸಂಬಂಧವಾದ ಚರ್ಚೆಗಳಲ್ಲಿ ಜಗಳಗಳಲ್ಲಿ ಬೇಂದ್ರೆಯವರಿಗೆ ಆಸಕ್ತಿ ಇರಲಿಲ್ಲ. ಪ್ರತಿಯೊಂದು ಮತಕ್ಕೂ ಆದರದರ ಆದಿ ಉಂಟು. ಅದು ಅವರವರ ಹಾದಿ. ಆದಿ ಇಲ್ಲದ ಅನಾದಿ ಹಾದಿಯ ಮೂಲಸ್ವರೂಪ ಇದ್ದುದನ್ನು ಗಮನಿಸಬೇಕು ಎಂಬ ಸೂಚನೆ ಈ ಕವನದಲ್ಲಿದೆ.

ಶಬ್ದಾರ್ಥ : ವೈಸರ್ಗಿಕ=ಅಭಿವ್ಯಕ್ತಪಡಿಸಿದ. ಯುಗಲ=ಜೊತೆ.

ವಿಶೇಷ : ನುಡಿ-೫ : ಶ್ರಾವಣದಲ್ಲಿ ವೇದಶ್ರವಣದ ಸುಖ, ಮಾಘಮಾಸದಲ್ಲಿ ಪಾಪ ಕಳೆದುಕೊಳ್ಳುವ ಸ್ನಾನದ ಸುಖ ಪಾವಿತ್ರ್ಯದ ಮಾರ್ಗ. ಆಶ್ವಿನದ ರವಿ ಮತ್ತು ಚೈತ್ರದ ಚಂದ್ರ ಆಹ್ಲಾದಕಾರಕ. ಶ್ರಾವಣದಲ್ಲಿ ಸೂರ್ಯ ಕಾಣುವದಿಲ್ಲ. ಮಾಘದಲ್ಲಿ ಸೂರ್ಯ ಕಂಡರೂ ಚಂದ್ರನಂತೆ ತಂಪಿರುತ್ತಾನೆ. ವರ್ಷದ ಪ್ರತಿ ತಿಂಗಳ ವೈಶಿಷ್ಟ್ಯಗಳ ವರ್ಣನೆ ಇಲ್ಲಿದೆ.



# ೨೦ ಧ್ರುವಮಾರ್ಗ

೧
ದೇಹದಲ್ಲಿ ವೈದೇಹಲೀಲೆ ಸುರಸಾರ್ವಭೌಮದೆಡೆಯೆ
ಶ್ರೇಯಪ್ರೇಯಗಳ ದ್ವಂದ್ವ ನಡೆದು ನಿರ್ದ್ವಂದ್ವ ಐಕ್ಯಪಡೆಯೆ.
ಸುರುಚಿಯಲ್ಲಿ ಉತ್ತಮನ ಪಡೆದನುತ್ತಾನಪಾದ ರಾಜ.
ಆ ಸುನೀತಿ ಧ್ರುವನನ್ನು ಹಡೆದು ವನವಾಸಿಯಹುದು ಸಾಜ.
೨
*ಗಗನಗಾಮಿ ನಾರದನ ವೀಣೆಗಾ ಧ್ರುವನ ಸ್ಪರ್ಶವಾಗಿ*
*ಬಂದ ನಾರದನು ಬಾಲಮುನುವಿನೆಡೆ ದಿವ್ಯ ಹರ್ಷವಾಗಿ*
*ಅಹುದಹುದು ಮೀರೆ ವಿಜ್ಞಾನಧೀರೆ, ಅರವಿಂದ ತೆರೆದಿತಣ್ಣ.*
*ಪಾಟಲದ ಪಟಲ ನವಸ್ಫೋಟವಾಗಿ ಹೊಸದಾಗಿ ಏಳು ಬಣ್ಣ.*
೩
ಭೂಮಿ ಬೆಳೆದಂತೆ ಸ್ವರ್ಗ ಇಳಿದಂತೆ ಕ್ಷಣವು ಪರ್ವವಾಗೆ
ಆನಂದ ಕಟ್ಟೆ ಹೊಸಜೇನ ಹುಟ್ಟೆ ಅವತಾರವಾದ ಹಾಗೆ
ನರನ ಹೃದಯ ನಾರಾಯಣಾಗ್ನಿ ಒಲಿದೀಯೆ ಬಂತು ವರವು
ಮೂರು ಸಪ್ತಕವ ಮೀರಿ ಇರುವಂಥ ಆ ಅಪೂರ್ವ ಸ್ವರವು.
೪
ಸಪ್ತ ಋಷಿಗಳೇಳೆತ್ತು ತಿರುಗುತಿವೆ ಹಾಕಿ ಧ್ರುವದ ಗಾಣಾ,
ಮೇರು ದಂಡದಾ ಇಕ್ಷುರಸವು ಹಿಂಡುತ್ತಲಿಹುದೊ ಜಾಣಾ.
ವಿವಿಧವಾಗಿ ಸಂಚರಿಸಿ ತಾಯಿಯಲಿ ಬ್ರಹ್ಮದೇಕತಾನಾ
ಕರೆಯುತಿಹುದು ಸ್ವರಮೇಳಕಾಗಿ ಗ್ರಹಗೋಲ ವಿಶ್ವಗಾನಾ.

- ಸೂರ್ಯಪಾನ : ೪೯/ಪ್ರ : ೧೯೫೬

---

ಭಾವ : ಧ್ರುವ ಮತ್ತು ಸಪ್ತರ್ಷಿಗಳ ದರ್ಶನ ಧ್ಯಾನದಿಂದ ಬಂದ ಭಾವವಿಸ್ತಾರ. ಋತುಗಾನದ ಬೇರೊಂದು ಬಗೆ.

ಶಬ್ದಾರ್ಥ : ಪಾಟಲ=ಪಾದರಿ ಹೂ, ಗಾಣಾ=ಗಾಳ, ಕೊಂಡಿ. ತಾಯಿ=ವಾದನದಲ್ಲಿಯ ವಿಶಿಷ್ಟ ರೀತಿ.

# ೨೧ ಬಾ ಬೇಗ

೧

*ಓ ಮೇಘರಾಜ ಘನ ವಿದ್ಯುಲ್ಲತಾ ತೇಜ*
*ಓಜೆಗುಂದಿದನಿಂದು ರವಿರಾಜ, ಆ ಗ್ರೀಷ್ಮ*
*ಭೀಷ್ಮ ಭಾಸ್ಕರತೆ ಎಂದೋ ಮುಸಳಿ, ನೀ ಬಂದೆ*
*ತಂದೆ ಜೀವನದಾಶೆ, ಕೃಷಿಕರೀಕ್ಷಣದಲ್ಲಿ*
*ಸ್ಫುರಿಸೆ ಚಾತಕ ಭಾಷೆ, ರಿಕ್ತ ಧ್ವನಿಯಾಗಿ ಗ-*
*-ರ್ಜಿಸಬೇಡ; ಸುಪ್ತ ಬೀಜವು ಬೇಡದೇನೊ ಜೀ-*
*-ವನ ಮೋಕ್ಷ, ಅಗೊ ಅಲ್ಲಿ ಏಕಾಕ್ಷ ದಾಂಪತ್ಯ*
*ಕರೆಕರೆಯೊಳೀಕೊ ಕರೆಯುತ್ತಿಹುದು ಬಾ ಬೇಗ.*

೨

*ಓ ಘನವೆ ಜೀವನವೆ ಅಂತರಿಕ್ಷದೊಳಿಂತು*
*ಸಾಕ್ಷಿಕನ ತೆರದಿ ಸಂಚರಿಸುವರೆ? ಇಳಿಯಣ್ಣ;*
ಕ್ಷೇತ್ರವಾಗಲಿ ಫಲ ರುಚಿರ ಗಾತ್ರ ಸತ್ಪಾತ್ರ
ಚಾಂಚೊಲದಿ ಬರಿದೇನು ಇಂದ್ರಚಾಪದ ಬಣ್ಣ.

೩

*ದೃಶ್ಯಕು ಅದೃಶ್ಯಕ್ಕು ಕೊಡುಕೊಳೆಯೆ ಚೆಂದ*
*ಜೀವಕು ಅಜೀವಕ್ಕು ದೈವಿಕವೆ ಬಂಧ.*

- ಉತ್ತರಾಯಣ : ೨೨/ಪ್ರ : ೧೯೬೦

---

ಭಾವ : ಮಳೆಯು ಬರುವಿಗಾಗಿ ಕೊಟ್ಟ ಕರೆ.

ಶಬ್ದಾರ್ಥ : ಏಕಾಕ್ಷ ದಾಂಪತ್ಯ=ಕಾಗೆಯ ಜೋಡಿ.

# ೨೨ ಮಿಂಚು


*ಬಾನ ಬಿರಿಸಿಡಿಲಲ್ಲ ಕೆಮ್ಮಿಂಚು ಹೊಮ್ಮಿಂಚು*
*ಅಬ್ಬ! ವಜ್ರದ ಮಿಂಚು, ನೇತ್ರಪಲ್ಲವಿಯ ಈ*
*ತಂತ್ರ ಬಲ್ಲವರಾರು?* ಏನೇನೊ ಬರೆಬರೆದು
ಮತ್ತೆ ಅಳಿಸಿದ ಹಾಗೆ ಮಾಯವಾಗುತ್ತಲಿದೆ.
೨
ತತ್‌ಕ್ಷಣಕೆ ಕಾಣದಾಗುವ ಈ ನಿರೀಕ್ಷಣದ
ವೇಗದಲಿ ಆವ ಸಂದೇಶವಿದೆ ? ಹಾ ! ಮೂಢ.
೩
*ಮೇಘನಾದನ ಹೆಗಲ ಅಪ್ಸರೆಯಪಾಂಗವೀ*
*ಪಾಂಗು ಗಗನಾಂಗನೆಯ ಪ್ರಾಯದ ಅಭಿಪ್ರಾಯ !*
*ನೀರ ಬಗೆ ಹೊಗೆಯಲ್ಲಿ ಬೆಂಕಿ ಅಡಗಿರಬಹುದೆ ?*

- ಸೂರ್ಯಪಾನ : ೫೬/ಪ್ರ : ೧೯೫೬

---

ಭಾವ : ಪ್ರತಿಮಾ ಧ್ಯಾನಜನಿತ ಮಿಂಚು.

ಶಬ್ದಾರ್ಥ : ಅಪಾಂಗ=ಕಡೆಗಣ್ಣನೋಟ. ಪಾಂಗು=ರೀತಿ, ಆಕಾರ, ಸಾಮ್ಯ.



# ೨೩ ಸರಸ್ವತಿ

೧

“ಕಮಲನಾಭನ ನಾಭಿ ಕಮಲದಾಸನದಲ್ಲಿ
ಕ್ರಮದಿಂದ ವಿಶ್ವವಂ ಕುಳಿತು ಸ್ಮರಿಸುವನೋರ್ವ
ನಮನ ಮಾಡುವೆ. ನಗುವಶೇಷಶಯನಗೆ ತನ್ನ ಸೃಷ್ಟಿಯನೆ ನೋಡುವವಗೆ॥
ನಾಲ್ಕು ದಿಕ್ಕಿಗೆ ನಾಲ್ಕು ಮೋರೆ ಮಾಡಿದ ಮೂರ್ತಿ
ನಾಲ್ಕು ವೇದದ ಸೃಷ್ಟಿ ಹಾಡ ತೊಡಗಿದ ಕೂಡ
ನಾಲ್ಕು ನಾಲಿಗೆಗಳಿಂ ಓಂಕಾರ ಹೊರಟತ್ತೆ ಶಂಖವನ್ನೂದಿದಂತೆ॥

೨

ಬಳಿಯ ಹತ್ತಿತ್ತು ಅಂತರಿಕ್ಷದೊಳ್ ಥರಥರನೆ
ಅಳಿಯ ಹತ್ತಿತ್ತು ಎಲ್ಲ ವಾತದಾವರಣವನು
ಸುಳಿಸುತ್ತಿ ಏರುವಂಥಂಥ ಧ್ವನಿಶಿಖರದೊಳ್ ಮೂಡಿದೇ ತಾರೆ! ನೀನು.॥
ನಿನ್ನ ನಾದದ ಬೊಗರಿ ಕಿವಿಯೊಳಾಡಿಸಿ ನಿದ್ದೆ
ಕಣ್ಣುಗೊಂಬೆಗಳಲ್ಲಿ ತೀಡಿ ತೇಜದ ಬೀಜ
ನನ್ನ ಮುಂದಾದ ಮೇಲೆ ಅಂದ ಸಾವಿರದಲದ ಕಮಲೆ ನೀನರಳಲಿಲ್ಲೇ.॥

೩

ಯಾಚಕಂ ನಾ, ವಾಚೆ ಬೇಡಲಿಕ್ಕೂ ಇಲ್ಲ
ಆಚಿಮನದೊಳಗಾಗ್ಗೆ ಕುಳಿತೆಯಂಜಲಿಯೊಡ್ಡಿ
ನಾಚು ಮಾಡುತ ಬಂದು ವರದ ಹಸ್ತವನಿಟ್ಟ ಬಾಗಿಸಿದ ತಲೆಯ ಮೇಲೆ॥
ಇಂಥ ನಿಮಿಷಗಳನ್ನು ನೆನಿಸಿ ಯಾವಾಗಲೂ
ಅಂಥವೇ ತಿರುಗಿ ಬರಲೆಂದು ಎನ್ನುವೆ ನಾನು
ಪಂಥಗಾರತಿ ಹಚ್ಚಿ ಸತ್ಯ ತತ್ತ್ವದ ದೀಪವಾನಂದವನ್ನು ಬೀರೆ.॥

- ಶತಮಾನ : ೨೩/ಪ್ರ : ೨೦೦೪

---

ಭಾವ : ‘ಸರಸ್ವತಿ’ ಕುರಿತು ರಚಿಸಿದ ಮೊದಲನೆಯ ಪ್ರಾರ್ಥನೆ.

ಶಬ್ದಾರ್ಥ : ಯಾಚಕ=ಬೇಡುವವ. ವಾಚೆ=ವಾಕ್‌ಶಕ್ತಿದೇವತೆ-ಸರಸ್ವತಿ.

ವಿಶೇಷ : ವಾರ್ಧಕ ಷಟ್ಪದಿ ರಚನೆ. ಮಹಾಕವಿ ಲಕ್ಷ್ಮೀಶನ ಪ್ರೇರಣೆ. ಪ್ರಭಾತ ಸಂಪುಟ-೧ ಸಂಚಿಕೆ-೧ ಆಗಸ್ಟ್ ೧೯೧೮ ರಂದು ಮುದ್ರಣಗೊಂಡಿತ್ತು.

# ೨೪ ನೀಸಾದಿನೀ-ದೇವತಾ ಸರಸ್ವತಿ

೧

ನಾ ಭಾವಾ; ಮೈದುನನಲ್ಲ
ನಾ ನೀ। ನೀ ನಾ

೨

ನೀ। ಸಾದಿನೀ। ನಾ। ಸಾದೆನೇ। ಸದಿನೀ। ಏಸಾದಿನೀ। ದಾನೀ
ವಾದಿನೀ। ಸಂವಾದಿನೀ। ಸಂವೇದನೀ। ದಿನದಿನ ಸಂಧಾನಿ। ನೀ

೩

ಸರಿ ಸರೀ ಗಮಕಾ। ಪದ ಪದಾನೀ। ದನಿದನೀ
ನಿಶಾವಾಸಿನೀ। ಬ್ರಹ್ಮದಾಸಿನೀ। ದೊರೆಸಾನಿ ನೀ। ಸ್ವಾಮಿನೀ
ಆನಾದೇದಣಿದಗೆ। ಈನಾದೇ ತಣಿದಗೇ
ಊನಾದೇ। ಅನೂನಾದೇ। ಹಣ್ಣಾದಾ। ಹುಣ್ಣಿಮೀ
ಅವನಾ। ಅವಳಾ ಹವಳಾ। ಅದಾದೀ। ಆದೀ
ಆ ಹಾದೀ। ಕಾದೀ। ಸಾದೀ ಸಾಂತಾ
ನಳದಾ। ದಾದೀ। ದಾಯೀ। ಮಂಗಲದಾಯೀ
ಅಬ್ಬಾ। ಆಯೀ। ಈ ಬಾಯಿ। ತಾಯೀ
ನಾ ನಾಯೀ। ಸನಾಯೀ। ನಾಗಸ್ವರ ಕಾಯೀ
ಪುಂಗಿ। ಉತ್ತುಂಗಿ। ಗಂಗೀ

೪

*ನಾದಿಂ ಧಿನ್ನಾ। ಮಾದಿನೀ। ಆ ಸ್ವಾದಿನೀ। ವಾಜಿನೀ*
*ಜೀವಾಜಿನೀ। ವಾಜಿನೀವತೀ। ಸರಸ್ವತೀ*
*ರಸ ಸಾರಸ। ಹಂಸೀ। ತಮಧ್ವಂಸೀ*
*ಉತ್ತಮಾ। ಆದಿಮಾ। ಮಾ। ಅದಿತೀ*
*ಸಂವದತಿ। ಉನ್ಮಾನಿನೀ। ನೀ ನಾ। ನಾ ನಾ।*

- ಮರ್ಯಾದೆ : ೩/ಪ್ರ : ೧೯೬೬

---

ಭಾವ : ಋಗ್ವೇದ-ಸರಸ್ವತಿ ಸೂಕ್ತ ೭.೯೫-೯೬ ರ ಚಿಂತನ ಈ ಸ್ತೋತ್ರಕ್ಕೆ ಪ್ರೇರಣೆ. ಇದು ೩ನೆಯ ಸ್ತುತಿ.
ಶಬ್ದಾರ್ಥ : ಆನಾದೇ=ಆನ್+ಆದೆ. ಆನ್=ಧರಿಸು, ಆದೆ=ಧರಿಸಿದವನಾದೆ. ಈನಾದೇ=ಈನ್=ಮರಿಹಾಕು+ಆದೆ=ಮರಿಹಾಕಿದವಳಾದೆ. ಸಂತತಿ ಭಾಗ್ಯ ಪಡೆದೆ. ಊನಾದೇ=ಊನ=ಕೊರತೆ+ಆದೆ=ಕೊರತೆ ಉಳ್ಳವನಾದೆ. ಅನೂನಾದೇ=ಅನೂನ=ಕಡಿಮೆ ಇಲ್ಲದ, ಕೊರತೆ ಇಲ್ಲದ=ಶ್ರೀಮಂತನಾದೆ, ಜ್ಞಾನ ಶ್ರೀಮಂತಿಕೆ.
ವಿಶೇಷ : ಬದರಿಯಿಂದ ೮ ಕಿಲೋಮಿಟರ ಅಂತರದ ಮೇಲೆ ಭೀಮಪೂಲು ಇದೆ. ಅಲ್ಲಿ ಮಾತ್ರ ಸರಸ್ವತಿ ನದಿ ಕಾಣುತ್ತಾಳೆ. ಅನಂತರ ಗುಪ್ತಗಾಮಿನಿ.

## ೨೫ ಅರವಿಂದನಾಭನ ಪಾದಾರವಿಂದಕ್ಕೆ

*ಅರವಿಂದನಾಭನ ಪಾದಾರವಿಂದಕೆ ಹಸ್ತಾರವಿಂದವು ಬಾಗುತಿರೆ,*
*ನಯನಾರವಿಂದವು ಮುಚ್ಚಿಕೊಂಡಿರುವಾಗ ಹೃದಯಾರವಿಂದವು ಅರಳಲಿರೆ*
*ಆಸ್ಯಾರವಿಂದವು ನಲಿವನು ಸೂಸುವ ತೆರ ನಿನಗೆ ಸೂಸಲಿ ಮಂಗಲವು*
*ಎಂದಿತು ಅರವಿಂದ ಪದಭೃಂಗ ಅರವಿಂದು! ಅರವಿಂದಮಯವಾದ ಮಾನಸವು.*

- ಹೃದಯ ಸಮುದ್ರ-೬/ಪ್ರ : ೧೯೫೬

---

ಭಾವ : ಶ್ರೀ ಅರವಿಂದರ ತನ್ಮಯತೆಯ ಚಿತ್ರ ಇಲ್ಲಿ ಮೂರ್ತಿಸಲಾಗಿದೆ.

ಶಬ್ದಾರ್ಥ : ಅರವಿಂದು=ಅರವಿಂದರ ಪದಭೃಂಗದ ಹೆಸರು. ಅರವು+ಇಂದು=ಇಂದಿನ ಜ್ಞಾನ.

ವಿಶೇಷ : ಒಂದು ಮುದ್ರಣದಲ್ಲಿ ಈ ಕವನ ೬ ಸಾಲುಗಳ ೨ ಷಟ್ಪದಿಯಾಗಿ ಬೇಂದ್ರೆ ಮಾಡಿದ್ದು ಹೀಗೆ-

೧
ಅರವಿಂದ ನಾಭನ
ಪಾದಾರವಿಂದಕೆ
ಹಸ್ತಾರವಿಂದವು ಬಾಗುತಿರೆ॥
ನಯನಾರವಿಂದವು
ಮುಚ್ಚಿಕೊಂಡಿರುವಾಗ
ಹೃದಯಾರವಿಂದವು ಅರಳಲಿರೆ॥
೨
ಆಸ್ಯಾರವಿಂದವು
ನಲಿವನು ಸೂಸುವ
ತೆರ ನಿನಗೆ ಸೂಸಲಿ ಮಂಗಲವು
ಎಂದಿತು ಅರವಿಂದ
ಪದಭೃಂಗ ಅರವಿಂದು
ಅರವಿಂದ ಮಯವಾದ ಮಾನಸವು.

# ೨೬ ಬರುವಳು ಬರುವಳು


೧
*ಬರುವಳು ಬರುವಳು ಬಂದೇ ಬರುವಳು*
*ಕಾದಿರಿ ಹಾಗೋ ಹೀಗೋ.*
*ನಸುಕಿನ ನಗೆಗಣ್ ಸೂಸುತ ಸುತ್ತೂ*
*ಈಗೋ ಇನ್ನಾವಾಗೋ.*
೨
ಕಿಡಿಕಿಯಲ್ಲಿಣುಕುವ ನಗೆಮೊಗದಂತೆ
ತಾರೆಗಳಾಚೆಯ ನೀಲಿಮೆಯಂತೆ
ಹನಿಸದೆ ಬರಿ ಸುರಿಯುವಳು ಬೆಳ್ಳಿಯ ಕಿರಣಗಳೇರಿ
ಹೊನ್ನಿನ ಹಡಗವ ಸೇರಿ.
೩
*ಜಡಿವಳು ಸುರಿವಳು ತೊರೆಯುವ ಕರುಳು*
*ಯಾರಾರದೊ ಬಗೆಯರಳಿ,*
*ಜೀವವು ನಕ್ಷತ್ರವನುಗುಳುವುದು*
*ತೇಜಃಪುಂಜವು ಕೆರಳಿ.*

- ಹೃದಯ ಸಮುದ್ರ-೧೧/ಪ್ರ : ೧೯೫೬

---

ಭಾವ : ಮದರ್ ಅವರ ದರ್ಶನಕ್ಕಾಗಿ ನಿರೀಕ್ಷೆಯಲ್ಲಿದ್ದಾಗ ಪ್ರದೀಪ್ತವಾದ ಭಾವದಚಿತ್ರ

ಶಬ್ದಾರ್ಥ : ನೀಲಿಮೆ=ನೀಲಿಬಣ್ಣ ಸ್ನೇಹದ ಪ್ರತೀಕ.




# ೨೭ ಅಜ್ಞಾನಹಂಕಾರ ನಾಶಿನೀ!

*ಅಜ್ಞಾನಹಂಕಾರ ನಾಶಿನೀ!*
*ಹೇ ಮಾಹಿಷ ಮಂಡಲ ವಾಸಿನೀ ॥ ಪಲ್ಲವಿ ॥*
*ಚಂಡ ಮುಂಡರ ತುರಿದ ಚಾಮುಂಡೀ!*
*ಸುಂದೋಪಸುಂದರ ರಸವ ನೀನುಂಡಿ ॥ ಅನು ಪಲ್ಲವಿ ॥*

೧
ಬನವಾಸಿ ನಾಡಿಂದೆ ಮಧು ಕೈಟಭರ ಕೊಂದೆ
ಓ ತಾಯಿ ಶಾಂತತೆ ತಂದೆ
ದ್ವಂದ್ವ ಪ್ರತಿದ್ವಂದ್ವ
ಪಕ್ಷ ಪಕ್ಷದ ನಿಂದೆ.

೨
*ಹೇ ಶುಂಭ ದಮನೀ*
*ನಿಶುಂಭ ನಿಷೂದಿನಿ*
*ಕೇಳಿಕೇಳಿ ನೀನೂ ನೊಂದೆ*
*ಧೂಮ್ರಲೋಚನ-ರಕ್ತ ಬೀಜರು ತಲೆ ಎತ್ತೆ*
*ಅವರ ತಲೆಯನರ್ಪಿಸಿಕೊಂಡೆ!*



- ಶತಮಾನ : ೨೨/ಪ್ರ : ೨೦೦೪

---

ಭಾವ : ಚಾಮುಂಡಿಗೆ ಸಲ್ಲಿಲಿದ ಪ್ರಾರ್ಥನೆ. ಜೀವನದಲ್ಲಿ ಕೃತಜ್ಞತೆಬೇಕು; ಕೃತಘ್ನತೆ, ರಿಣಗೇಡಿತನ ಸಾಕು ಎಂಬ ಅಪೇಕ್ಷೆ.

ವಿಶೇಷ : ೬-೧೦-೧೯೬೨ ರ 'ನಾರೀನಾರಾಯಣಿ' ರೂಪಕದ ಮತ್ತೊಂದು ಹಾಡು.

# ೨೮ ಭುವನೇಶ್ವರಿ

೧

*ಸೇವಕರಿಪ್ಪವನೀವಾ ಶಕ್ತಿ!*
*ಭಾವಿಸೆ ತನ್ನೊಳು ಸಂವಿತ್ ಶಕ್ತಿ ॥*

೨

*ವಾಣಿಯೆನಿಸಿ ವಾಕ್ ಸಿದ್ಧಿಯನಿತ್ತು*
*ವಾಣದೆ ಲಕ್ಷ್ಮಿಯೆನಿಸಿ ಶುಭವಿತ್ತು ॥*

೩

ಗಿರಿಜೆಯೆನಿಸಿ ಸೌಭಾಗ್ಯವನಿತ್ತು
ವರವಂಬಿಕೆಯೆನಿಸುತ್ತೊಲಿದಿತ್ತು॥

೪

*ಯೋಗವನಿತ್ತು ಮನೋನ್ಮನಿಯೆನಿಸಿ*
*ಭೋಗವನಿತ್ತಾ ಕುಂಡಲಿನಿಯೆನಿಸಿ ॥*

೫

ಮತ್ತೆಯು ಬಹುನಾಮಂಗಳವೆರಸಿ
ತತ್ತದಖಿಳ ರೂಪಿಂದವತರಿಸಿ ॥

೬

*ತಾನೇ ಭುವನೇಶ್ವರಿಯಾಗಿಹಳು*
*ನಾನಾಭಕ್ತಸುಖಪ್ರದೆಯಹಳು ॥*

- ಶತಮಾನ : ೮೨/ಪ್ರ : ೨೦೦೪

---

ಭಾವ : ೧೯೨೬ರಲ್ಲಿ ಗೆಳೆಯರ ಗುಂಪು ನಾಡಹಬ್ಬದ ಆಚರಣೆಗೆ ಒಂದು ವಿಶಿಷ್ಟರೂಪಕೊಟ್ಟಿತು. ಅದರ ಪೂರ್ವದ ಚಿಂತನೆಯ ಪ್ರಾರ್ಥನೆ. ನಾಡಹಬ್ಬದ ಆಚರಣೆ ಕರ್ನಾಟಕದಲ್ಲಿ ಒಂದು ಸಂಪ್ರದಾಯವಾಗಿ ಪ್ರಚಾರಪಡೆಯುವಲ್ಲಿ ಗೆಳೆಯರ ಗುಂಪಿನ ಗೆಳೆಯರ ಪಾತ್ರ ಪ್ರಮುಖವಾಗಿದೆ. ಶಕ್ತಿ ವಾಣಿ, ಲಕ್ಷ್ಮಿ, ಗಿರಿಜೆ, ಅಂಬಿಕೆ, ಕುಂಡಲಿನಿ ಮೊದಲಾದ ಅನೇಕ ನಾಮಗಳಿಂದ ತಾಯಿ ಭುವನೇಶ್ವರಿ ಭಕ್ತರಿಗೆ ಸುಖಗಳನ್ನು ಈಯಲಿ ಎಂಬ ಬೇಡಿಕೆ ಇಲ್ಲಿದೆ.

ಶಬ್ದಾರ್ಥ : ಸಂವಿತ್‌ಶಕ್ತಿ=ಜ್ಞಾನಶಕ್ತಿ, ಸಾಮರಸ್ಯದ ಶಕ್ತಿ, ವಾಣದೆ=ಬಿಡದೆ, ಮನೋನ್ಮನಿ=ಮನಸ್ಸಿನ ಉನ್ನತ ಅವಸ್ಥೆ, ತತ್ತದಖಿಳರೂಪ=ಸಂಪೂರ್ಣ ರೂಪ.

## ೨೯ ಪಿನಾಕಿರುದ್ರಾ !

೧

ಸಿಡಿಲಿನ ಮರಿಯೊಂದು ಸಿಡಿದಿತೊ ಅಣ್ಣಾ
ಒಡೆದಿತೊ ಚಂದ್ರನೆ
ಗಂಗೆಯು ಸೋಗು ಹಾಕಿದಳಣ್ಣಾ
ಉರುಳಿದ ಗಿರಿನಂದನೆ.

೨

ಹೊಲಹೊಲದಿಂದ ಹೊಲದವ ಬಂದ
ಹರಹರ ಹರಿಯುವನೆ
ಗಿರಿಗಿರಿಯಿಂದಾ ಹರಿದಾವ ನೀರು
ತೊರೆಬಂತು ಎಂದವನೆ.

೩

ಬೆನ್ನಲುಬೆ ಬಿಲ್ಲು, ಹಣೆಗೆಯ ಹಲ್ಲು
ಡವಿಗೆಯ ಕನ್ನಡಿಯೆ
ಡವಕೆಯ ಹಿಡಿಯೆ ಹಿಡಿಕೆಯ ಮಲ್ಲಿ
ಉಗುಳುವೆ ನಾ ತಡಿಯೆ.

೪

*ಡವಡವ ಎದೆಯಾ ಡಮರುವ ನುಡಿಸಿ*
*ತಾಂಡವಕೆದ್ದವನೆ*
*ಓಹೋ ಭದ್ರಾ, ಪಿನಾಕಿ ರುದ್ರಾ !*
*ಸೋಹಂ ಸೋಹಂ ಎಂದವನೆ.*

೫

ಎತ್ತೆತ್ತು ಕುತ್ತಾ ಬಾಳುವುದೆತ್ತಾ
ಮಾತೇ ಮುಗ್ಗರಿಸಿದೆ
ನಿಷಾದ ಭೂಮಿಯ ಆಗಿಯೆ ಸ್ವಾಮಿ
ವಿಷಾದ ಕುಗ್ಗಿಸಿದೆ.

೬

ಋಜುಮಾತು ಆಗಿ ಯಜು ಮಾತು ಬಂತು
ಯಜ ಯಜ ಎಂದವನೆ
ಭೈರವ ದೇವಾ, ಯಾಕೀ ಭಾವಾ
ಆನಂದ ಇಂಗಿದವನೆ.


- ಶತಮಾನ : ೧೮/ಪ್ರ : ೨೦೦೪

---

ಭಾವ : ಆನಂದವನ್ನು ಅಡಗಿಸಿಕೊಂಡ ರುದ್ರನ ವರ್ಣನೆ.

ಶಬ್ದಾರ್ಥ : ಪಿನಾಕಿ=ತ್ರಿಶೂಲ ಮತ್ತು ಡಮರು ಧರಿಸಿದ ಶಿವನ ರುದ್ರರೂಪ. ಕುತ್ತಾ-ಕುತ್ತು=ತೊಂದರೆ, ಕಷ್ಟ. ನಿಷಾದ=ಬೇಡ,ಕಿರಾತ. ಋಜುಮಾತು=ನೇರವಾದ, ಪ್ರಾಮಾಣಿಕವಾದ ,ಸರಳವಾದ ಮಾತು. ಯಜ-ಯಜನ್=ಹೋಮ ಹವನ.

ವಿಶೇಷ : ಈ ಕವನದ ಹಸ್ತ ಪ್ರತಿ ಡಾ। ಕರ್ಕಿಯವರ “ಛಂದೋವಿಕಾಸ” ಪುಸ್ತಕದ ಹೊರ ಹೊದಿಕೆಯ ಮೇಲಿದೆ.



# ೩೦ ಅಗಾಧ ಗಾಥಾ

೧

ಗಹನವೋ ಗಹನಾ ಈ ವಿಸ್ತಾರಾ ಅಗಾಧಾ !
ಗಗನಾ ಅಗಣಿತಾ ಗಣನಾತೀತಾ
ಮತಿಯಾಯಿತು ಭೀತಾ ಈ ಈತಾ
ಶ್ರೀ ರಾಮಾ ಆಗ್ಯೆ ಪ್ರೀತಾ ನವನೀತಾ
ಮೂಡಲಿಲ್ಲಾ ಮುಳುಗಲಿಲ್ಲಾ ಸುತ್ತೂತ್ತಡೆಗೆಲ್ಲಾ
ಗಾಥಾ ಕಾ ಕಥಾ ! ಯಥಾ ತಥಾ ಅಲ್ಲಾ, ಅಗಾಧಾ !

೨

ಬೇರೇನೂ ಇರದಾಗಲೇ ಬೀಜಾ ಹೊರಾವಾ
ಅಮಾ ಮಾ ಮಾಮಾ, ಶ್ಯಾಮಸುಂದರಾ ಎಲ್ಲರ ಕಾವಾ
ವೃಂದಾವನದಾವಾ; ದಾವಾನಲನಲ್ಲಾ
[ಎಲ್ಲಿಯ ನೆಲ್ಲಿಗೂ ಅಲ್ಲಿಯೆ ರುಚಿ ಕೊಡಬಲ್ಲಾ!]
ಕಾಡಿನ ನೆಲ್ಲಿಗೆ ಉಪ್ಪಿನ ರುಚಿ ಕೊಡಬಲ್ಲಾ!

೩

*ಬ್ರಹ್ಮಾ ಚೈತನ್ಯಾ ಚಿಂತನಾ*
*ಮಂಥನಾ, ಗ್ರಂಥನಾ*
*ಮಾಡೋದೇ ಅಗಾಧಾ !*
*ಇದು ಸಾಧಾ ಸೀಧಾ ಧಾರಾ ಪ್ರಕಾರಾ*
*ಅನೇಕಾಕಾರಾ ವಿವಿಧಾಗಾರಾ*
*ತಾರಾಪಥಾ ನಾಸ್ತಿ ಅನ್ಯಥಾ, ಅವ್ಯಥಾ*
*ಸೋಸೋ ಸೂಸೋ ಅಗಾಧಾ! ಅಗಾಧಾ !*

೪

ಹೂವಾ ನೂತೂ ಘಮಾಘಮಾ ನಾತಾ, ಕಂಪಾ ತರಾವಾ
ಕಣ್ಣಿಗೇ ಕಾಣಿಕೆ ತರಾವಾ, ಯಾತರಾವಾ ?
ಭಾವಾ, ಅಭಾವಾ, ವೈಭವಾ ಪ್ರಭಾವಾ
ಸಭಾ, ಭಗಣಾ ಸಹಿತಾ ರಹಿತಾ ಸುಹಿತಾ
ಅಥಾಂಗ ಗಂಗಾ ಅಭಂಗಾ
ಲಿಂಗಾ ತೂಸ್ಯಾ ಅಂಗೋಪಾಂಗಾ !

೫
ಗೋ, ಗೋ, ಸಾಗೋ ಆಗೋ ಈಗೋ
ಹಾಗೋ ಹೀಗೋ, ಬಾಗೋ ಮಾಗೋ
ನೀನೇ ನನ್ನವನಾಗೋ ಲಾಗೋವೇಗೋ
ರಾಗೋದ್ಭವಾ ಅಸಂಭವಾ ಸಂಭವಾ ನವೋನವಾ !
ಅವಾ ಯಾವಾ ? ಬೆಳಗಿನ ಜಾವಾ ಬರಾವಾ ?
೬
ದ್ಯಾ ಅಂದರ ದೂರಿಲ್ಲಾ; ದೂರಿದೆ ಅಂದರ ತಿಮಿರಾ, ದುರಿತಾ
ಒಳಗೂ ಹೊರಗೂ ನಿತ್ಯಾ ಋತಾ ನಿರುತಾ ತಾನಿರುತಾ
ಇರತಾ ಇರತಾ ದುರಿತಾ ಕಳದೂ ಆನಂದ ಭರಿತಾ
ದೆವ್ವಲ್ಲಾ ದ್ಯಾವಾ ಪೃಥಿವೀವಲ್ಲಭಾ ಅವಾ ಸುಲ್ಲಭಾ
ದಿನಂಪ್ರತಿ ಪ್ರಭಾ ಪ್ರಭಾತದ ಕಾಲಾ, ದಿನಾ ಹೊಸಬಾ !
ಅದು ಸಂಧಿ ಸಂಧಿಕಾಲಾ, ಕುಂದದೆ ಅದರಾ ಪ್ರಸಭಾ
ಸಭಾಸದರ ಮೀರಿ ತಾರಕಾಗಣಗಳಿಗೆಲ್ಲಾ ಗ್ರಹಣಾ
ಗ್ರಹಣಾತೀತಾ ಸ್ವಯಂ ಪ್ರತೀತಾ, ಅಪ್ರತಿಮಾ, ಅರುಣಾ
ಚರಣಾ ಇಲ್ಲಾ ಕಿರಣಾ ಇವೆ, ಅವೇ ಭಗಲಾ ಹಗಲಾ !
ಸ್ವಸ್ಥ ಸ್ವಾಸ್ಥ್ಯ ಕಮಲಾ, ಆದವೊ ಅಗಲಾ ಖಗೋಲಾ
ಭೂಗೋಲಾ ಒಂದಕ್ಕೊಂದು ಸಂಧಿ ಹೊಂದಿ
[ನನ್ನ ಮನೆಗೆ ಬಂದಿ, ಆಪ್ತಾ ಬಹುರೂಪಿ ಸಂಬಂಧಿ !]
೭
ಅನಕಾ ತನಕಾ ನವಸಹಸ್ರಮಾನದ ಸೂರು ರೇಖಾ
ಸುರೇಖಾ ! ವೆಂಕಟನ ಹತ್ತಿರಾ ಕುದುರೇ ಮುಖಾ !
ಪದ್ಮಾವತಿ ಸಂಗಸುಖಾ, ಕಲ್ಲಾಗ ಮೂಡ್ಯದ ಚಿತ್ರಾ
ಅಲ್ಲಾ ಚಿತ್ರಾ ! ನೋಡವ್ರಿಗೆ ಬೇಕು ಕಣ್ಣು
ಅದೇ ಟೆಂಗಿನಕಾಯಿ, ಬಾಳೇ ಹಣ್ಣು
ಬದುಕೋದೇ ಭಾರತ ವೈಭವಾ
ಬಂದವೋ ದಿನಾ ನವೋನವಾ !
ಆತ್ಮೋದಿತಾ ಸರ್ವಸ್ವೇಜಾತಾ, ಇದರಾತಾ ಅಲ್ಲಾ ಯಾತಾಯಾತಾ
ಇದು ಆಖಾತಾ ಸಾಗರಾಬಿಟ್ಟಲ್ಲಾ, ನೆಲವೇ ಬಿಟ್ಟದೆ; ಬಿಟ್ಟಲ್ಲಾ.

೮

ನಿರ್ಮಲದಾ ಅಮಲೋ! ಎಲ್ಲಾ ಕಡೆ ಸೋಮಾ, ಸೋಮಲಾ.
ಇಲ್ಲಾ ಮಲಾ, ಇದು ಅತ್ಯಂತ ತ್ರಯೋದಶ ವಿಮಲಾ
ಬ್ರಹ್ಮಾ ಸಬಲಾ, ಶಬಲಾ, ಶ್ಯಾಮಲಾ, ಶಾಲ್ಮಲೀ ಹೊಲಾ
ಅಂಬರಾ ವಾಗಾಡಂಬರವಲ್ಲಾ, ಮೌನದಾ ನಿಧಾನಾ
ಶಂಬರನನಿರ್ನಾಮಾ ಮಾಡಿದನೀತಾ ನೇತ್ರಾ, ಅನಿಮಿಷಕ್ಷೇತ್ರಾ
ಓ ಧಾತಾ, ವಿಧಾತ್ರಾ, ಅನೇಕಾನೇಕಾ ಪಾತ್ರಾ ಸುಸೂತ್ರಾ
ಕುಂಭದಲ್ಲೂ ತುಂಬಿ ಅಪಾರಾ ಪಾರಾವಾರಾ ಎಂಬೀ
ನಂಬಿ ಬಿಂಬಿಸೀ, ಪ್ರಲಂಬಿಸಿ ಅವಲಂಬಿಸಲಿಲ್ಲಾ.

೯

ಅದ ಅದ ಅನತಾ ಇದ್ದೆ, ಅದು ಇದೇನೋ ಇದಿರೇ ಅಗಾಧಾ!
ಕಣ್ಣು ತೆರೆದೇ ಮುಚ್ಚಿದ್ದೇ, ಒಳಗೊ ಹೊರಗೊ ನಡುವೆನೂ ಅಗಾಧಾ!
ಮೂರೂಕಡೆ, ನೂರೂಕಡೆ, ಸಾವಿರದಾಕಡೆ ಈ ವೃತ್ತಕ್ಕಿಲ್ಲಾ ಕಡೆ.
ಒಳಗಡೆ, ಹೊರಗಡೆ, ಗೋಡೆ ಗೋಡೆ ಇಲ್ಲಾ ತ್ರಿಕೋಣಾ ಅಗಾಧಾ!
ತಿರುತಿರುಗಿ ಆಗಿದೆ ಗೋಲಾ ಚೌಕಾಕಾರಾ ಕೂಡಾ ಅಗಾಧಾ!
ಭೂಚರಾ, ಚರಾಚರಾ, ನಿಂತ ಈ ಮರಾ, ಹರಿಯುವ ನೀರಾ.
ಆಗೋದೆಲ್ಲಾ ಹೋಗೋದೇ ಅಲ್ಲಾ, ಸ್ಥಿರಾನೆಲಾ ತಿರುಗತದಲ್ಲಾ ಅಗಾಧಾ!
ಮಳೀ ಇಳೀತದ, ನೆಲಾ ಅಲ್ಲೇ ಉಳೀತದ, ಬೆಳಿ ಮೇಲಿಂದ ಮೇಲೆ ಬೆಳೀತದ
ಬೀಜಾ ತಿರೋದೇ ಇಲ್ಲಾ, ಒಂದಕ್ಕೆ ನೂರೂ, ಅದಕ್ಕೆ ಸಾವಿರಾ ಅಗಾಧಾ!
ಅಮರಾ ಪಟ್ಟಾಕಟ್ಟದೆ, ಬುನಾದಿಗೇ ಅನಾದಿ ಬುಡಾ. ಇದು ಅಗಾಧಾ!
ತೆರವಂಬೋದು ಬೇರೆಲ್ಲಿಂದಾ ಬಂತು, ನೀರು ತುಂಬಿತು ಎಂತು?
ಸಾನಾದು? ನೀರಿನೊಳಗಿನಾ ನಾರು. ನಾರದನ ತಂತಿ
ಅನೇಕಾನೇಕಾ ಜನ್ಮಾ ಬಂದವೋ, ಬಂಧನಾ ತಂದವೋ ಸಂತಿ.

೧೦

ಕೇಶವಾ, ನೀನ್ಯಾತರ ನಾಶಾ ಮಾಡುವೇ? ಅವರಾಗ ನೀನೇ ಇರಾವಾ
ನಾರಾಯಣಾ, ನೀರು ತೀರೋಂವಲ್ಲಾ, ತಡೋಂವಲ್ಲಾ, ಆವನೊಡನೇ ನೀ ಇರಾವಾ
ಮಾಧವಾ, ಮಧುಮಾಸದಾ ಮಕ್ಕಳಾಗಣಕ್ಕ ನೀ ಕಮಲಾ ತರಾವಾ
ಗೋವಿಂದಾ, ನೀ ಬಂದೇ ಗೋವಿನಾ ಹಿಂದ. ಅವ್ವ ನಿನಗಿಂತಾ ಮುಂದೆ ಅಗಾಧಾ!
ವಿಷ್ಣು-ಪುರುಷ, ವೃಷಭಾ ಕರುವಿನಾ ಹಿಂದೆ, ಕರು ನೀನೇ ಮಾಡಾವಾ
ಮಧುಸೂದನಾ, ನಿನ್ನ ಶೋಧನಾ ನಾ ಮಾಡಿದ್ದಲ್ಲಾ ಆ ಬೋಧನಾ ನಿನ್ನದೇ ಅಗಾಧಾ!
ತ್ರಿವಿಕ್ರಮಾ, ಚದುರಾ ನಿನ್ನಾ ಚತುವಕ್ರಮಾ ಅಕ್ರಮಾ ಅಲ್ಲಾ, ಪರಾಕ್ರಮಾ
ವಾಮನಾ, ಮನುಮನುವಿನಾ ಮನಮನದಾಗ ನೀನೇ ತುಂಬಿದವಾ
ಶ್ರೀಧರಾ, ಈಧರಾ ಆಧಾರಾ ಇಲ್ಲದೇ ನಿಂತಾಳ್ಹ್ಯಾಂಗನು ಸದಾ ದಕ್ಷಿಣಾ ಉತ್ತರಾ
ಹೃಷೀಕೇಶಾ, ಹೃದಯದಾ ಅಧೀಶಾ ಹರ್ಷಕ್ಕೆ ಸ್ಪರ್ಶಕ್ಕೆ ಪುಲಕಿಸಿ ಹಿಗ್ಗಿದಾವಾ
ಪದ್ಮನಾಭಾ, ನಾಭಿಯೊಳಗ ಪದ್ಮ, ಅದು ನಿನ್ನಾ ಚಿರಂತನ ಸದ್ಮಾ. ಚತುರ್ಮುಖಾ ಸದೈವಾ
ದಾಮೋದರಾ, ಆ ಕಾಂಚೀದಾಮಾ ಕಾಂಚನ ಧಾಮಾ ಹಿರಣ್ಯಗರ್ಭಾ ಅಗಾಧಾ,
ಸಂಕರ್ಷಣ, ನಿನಗೆ ಬೇರೆ ಇಲ್ಲಾ ಆಕರ್ಷಣಾ. ನನ್ನ ಘರ್ಷಣಾ ಶಾಂತಮಾಡೊ ಅಗಾಧಾ!
ವಾಸುದೇವಾ, ಶೇಷಾ ನೀನೇ ಆದಾವಾ, ಮಂಚದ ಮ್ಯಾಲೆ ಮಲಗಿದಾವಾ ಅಗಾಧಾ!
ಪ್ರದ್ಯುಮ್ನಾ, ಕೃಷ್ಣಾ ನಿನ್ನಾಮ ನೀ ಅನಂಗಗ ಅಂಗಾ ತಂಗಲು ತೆರೆದಾವಾ
ಅನಿರುದ್ಧಾ, ನಿನಗಾರು ಅಡ್ಡಿ? ನಿಯಮಾತೀತಾ, ಉಷಾ ನಿಶಾ ಮುಕ್ತಿ ಮಾಡಿದಾವಾ
ಪುರುಷೋತ್ತಮಾ, ತಮಾ ದಾಟ ಪ್ರಕಾಶಾ ಆಗಿ ತಮಾ ಸೃಷ್ಟಿಯೊಳಗ ಅಡಗಿಸಿದಾವಾ
ಅಧೋಕ್ಷಜಾ, ನಿನಗಾವುದು ಅಧಾ, ಯಾವುದು ಮುದಾ, ನೀನೇ ವಿವಿಧಾ ಪರೋ ವಿಧಾ
ನಾರಸಿಂಹಾ, ನನ್ನ ಅಂತಸ್ಥಾ ದೈವಾ ಅತಿಗೆ ಚತುರ್ಥಾ ಪಾದಾ ಆದಾವಾ
ಅಚ್ಯುತಾ, ನಿನಗೆಲ್ಲಿದಾ ಚ್ಯುತಿ? ಎಲ್ಲಾ ಭೂಮಿಕಾ ನಿನ್ನ ನಾಕಾ, ಅಕಾ ಇಕಾ
ಜನಾರ್ದನಾ, ನೀನೇ ಜನನೀ ಜನಕಾ. ನನ್ನ ಜನ್ಮ ಬಿಡುಂಬರದಾಗ ತಂದಾವಾ
ಉಪೇಂದ್ರಾ, ಇಂದ್ರನೂ ತಂದೆ ಮುಂದೆ. ನೀನು ಅವನ ಹಿಂದೆ ಅಡಗಿದಾವಾ
ಹರಿ ಹರೀ, ಆದರೂ ಹರೀಲಿಲ್ಲಾ ಮುರೀಲಿಲ್ಲಾ ಇಂತ ಇರತಾ ಎಲ್ಲಿ, ಇರಾವಾ
[ಕೃಷ್ಣಾ! ಕೃಷ್ಣಾ ಅಂತ ಸರ್ವಾರ್ಪಣದಿಂದ ಕರದಾಗಷ್ಟೇ ಪ್ರತ್ಯಕ್ಷ ಆಗಾವಾ!]

೧೧
ಹತ್ತರ ಗತೀ ಮುಗಿದು ಬಂದದ ಹನ್ನೊಂದರ ಕಥಿ
ಅರವತ್ತಾರರ ಸ್ನಾನ, ಪ್ರಾಣಪ್ರತಿಷ್ಠಾನ, ಮತ್ತ ಅದೆ ತಾನ
ಸದಾಶಿವಗ ಅದೇ ಧ್ಯಾನ ಅಂತಾರ ಸುಳ್ಳು ಅಲ್ಲಾ
ಮಹಾದೇವೀ ಕುಚ ಚೂಚುಕಾ ಕಂಡು ಆಗ್ನ್ಯಾನ ಭ್ರಾಂತ
ಕಣ್ಣು ಮುಚ್ಚಿಕೊಂಡ ಶಿವಾ ತೆರೆಯಲೊಲ್ಲಾ ಮೂರೂ ಕಣ್ಣಾ
ಇನ್ನ ಹ್ಯಾಂಗ ಕಳೀಬೇಕು ಅನಂತ ಭವಾ? ಅಂತಾಳ ತಾಯಿ
ಮಕ್ಕಳೊಳಗ ತುಂಬಬೇಕು ಹ್ಯಾಂಗ ಜೀವಾ ಜೀವಾಳಾ?
ಚತುರ್ಥನೇತ್ರಾ ದಾಟ ಪ್ರಪಂಚ ಮುರಿದು ಸಂಚ
ಆರು ಏಳು ಎಂಟು ಹತ್ತೊಂಬತ್ತರ ಗಂಟಾಗಿ, ಬಿಡಿಸ ಬರದೋ ದಶಮಗ್ರಂಥಿ
ಶಿವಾ ಆಗ್ನ್ಯಾನ ಶೂನ್ಯ ಪಂಥಿ!
ಶಕ್ತಿ ಮಿಡಿದಾಗ ತನ್ನ ತಂತಿ, ಕುಂತಿಗೆ ಹಿಡೀತೋ ಭ್ರಾಂತಿ
ಅದಿತಿ ಹನ್ನೆರಡರ ಲೆಕ್ಕಾ ಹಾಕತಾಳ, ತಾಳ ಹಾಕಿ
ಯಕ್ಷ ಮೀರಿ ಆಟಿಗೀ ಯಜ್ಞಕುಂಡ, ಅದು ಗಂಡಭೇರುಂಡ!
೧೨
ಈ ಅಗಾಧ ಗಾಥಾ ಕೇಳಿ ಮುಗ್ಧಾ ಆದಾ ದತ್ತಾ ಅಗಾಧಾ!
ಈ ಗಾಥಾ ಅನೇಕಪಿ ತ್ರಿನೇಕದವಾ ದತ್ತಾ ಆದಾ, ದಿನಾ ದಿನಾ ಅಗಾಧಾ!
'ಸಂ.ವಾ.ಪ.'* ನಾ ಸಂಚೋಡಿ, ಬಿಡಿಸಿಕೊಂಡೆ ಬೇಡಿ
ಪ್ರಭಾಕರ ಪ್ರಭಾತಾ ಆದಾ, ಪ್ರತಿಪದಾ, ಪುನರ್ವಸು
ಮಿಲಿಂದಾ, ಮಕರಂದಾ, ಸ್ಮಿತಾ ನನ್ನ ಆನಂದ ಅಮೃತಾ!
ನಾನೇ ನನ್ನಷ್ಟಕ್ಕೆ ವಿಸ್ಮಿತಾ ಸ್ವೈರ ಮೂರ್ತಿ
ಅಸೂಯಾ ಲೋಕ, ಅಸೂಯಾ ಲೋಕಾ
ಅನಸೂಯಾ ಸುತಾ, ಅತ್ರಿ ನನ್ನ ತಂದೆ ತಾಯಿ, ಪ್ರಕೃತಿ, ಜಗಜ್ಜ್ಯೋತಿ!

೧೩
ಭಜನೀ ಮಾಡಿಸೀ ಇಂತಿ, ಇಪ್ಪತ್ತು ಗಾಂಧ್ಯ ನಿಂತಿ
ಎರಡೇ ಕೈ. ಮಾನವಾ ವಿಟ್ಠಲಾ ಆಗಿ
ಮಾನವನ ಮಾನಾ ಬೆಳೆಸಿದಾವಾ !
ಹರೇ ರಾಮಾ ಹರೇ ಕೃಷ್ಣಾ, ಸನಾತನಾ ಭವಾ
ಭವಾ ತಂದಾವಾ ನನ್ನವಾ
ಅಂಬಿಕಾತನಯ ಕಟ್ಟಿದಾ ಗಾಥಾ
ವಿಶ್ವನಾಥಾ ! ವಿಶ್ವರೂಪಾ !

· ಶತಮಾನ : ೧/ರಚನೆ : ೧೬-೧೧-೧೯೭೯/ಪ್ರ : ೨೦೦೪

---

ಭಾವ : ಜೀವನ ಮತ್ತು ಕಾವ್ಯ ಎರಡೂ ಅಗಾಧ. ಇವುಗಳ ನೆಲೆ, ಬೆಲೆ, ಗಾಹತಿ ಇವುಗಳ ಚಿಂತನ, ಮನನ ಒಂದು ಭಾವಗೀತವಾಗಿ ಹೊರಹೊಮ್ಮಿದೆ.

ಶಬ್ದಾರ್ಥ : ಅಗಾಧ=ಆಳವಾದ ತಳಕಾಣದ, ನೆಲೆಸಿಲುಕದ, ಗಂಭೀರವಾದ. ನವನೀತಾ=ಬೆಣ್ಣೆ, ಗಾಥಾ=ಹಾಡು. ಅಥಾಂಗ=ಅತ್ಯಂತ ಆಳವಾದ, ತಳಕಾಣದ. ಬಾಗೋ=ಹಿಂಬಾಲಿಸಿದ ರಕ್ಷಕನಾಗಿ. ವೇಗೋ=ವೇಗವಾಗಿ. ದ್ಯೌ=ಆಕಾಶ ದುರಿತ=ಪಾಪ, ಕತ್ತಲೆ, ಎರಡು ಪ್ರಕಾರದ ತೆರವುತನ. ಪ್ರಸಭಾ=ರಭಸ, ವೇಗ.

ವಿಶೇಷ : *೧೨ ನೆಯ ನುಡಿಯಲ್ಲಿ ಬರುವ - ಸಂ.ವಾ.ದ - ವಾಮನ ಬೇಂದ್ರೆ, ಪ್ರಭಾಕರ, ಪ್ರತಿಮಾ, ಪುನರ್ವಸು, ಕೃತಾ, ಮಿಲಿಂದ, ಮಕರಂದ ಹಾಗೂ ವೈಖರಿ ಇವರು ಸಪ್ತ ಮೊಮ್ಮಕ್ಕಳು - ಸಪ್ತ ಭೂಮಿಕೆಗಳು - ಏಳು ಏಳು ಎಂದವು.

ಶತಮಾನ ಎಂಬುದು ಅಪ್ರಕಟಿತ ಕವನಗಳ ಸಂಗ್ರಹದ ಶೀರ್ಷಿಕೆ. ಬೇಂದ್ರೆಯವರ ಜನ್ಮ ಶತಮಾನೋತ್ಸವ (೧೯೯೬) ದ ಅಂಗವಾಗಿ ಪ್ರಕಟಿಸಲು ಸಿದ್ಧಪಡಿಸಿದ ಅಪ್ರಕಟಿತ ಹಾಗೂ ಈ ವರೆಗಿನ ಕವನ ಸಂಗ್ರಹದಲ್ಲಿ ಸೇರ್ಪಡೆಯಾಗದ ಕವನಗಳ ಸಂಗ್ರಹ. ಇದು ಕೇವಲ ಸಂಕಲ್ಪ ರೂಪದಲ್ಲಿದ್ದದ್ದು ಈಗ ಸಿದ್ಧವಾಗಿ ಸಮಗ್ರ ಕಾವ್ಯದ ಅಂಗವಾಗಿ ಸೇರಿಕೊಂಡು ಮೂಡಿ ಬರುತ್ತಿದೆ.

# ೩೧ ನಾಕು ತಂತಿ

**ಒಂದು**

೧

ಆವು ಈವಿನ
ನಾವು ನೀವಿಗೆ
ಆನು ತಾನದ
ತನನನಾಽ

೨

ನಾನು ನೀನಿನ
ಈ ನಿನಾನಿಗೆ
ಬೇನೆ ಏನೋ?
ಜಾಣಿ ನಾಽ

೩

ಚಾರು ತಂತ್ರಿಯ
ಚರಣ ಚರಣದ
ಘನಘನಿತ ಚತು-
-ರಸ್ವನಾ

೪

ಹತವೊ ಹಿತವೋ
ಆ ಅನಾಹತಾ
ಮಿತಿಮಿತಿಗೆ ಇತಿ
ನನನನಾ

೫

ಬೆನ್ನಿನಾನಿಕೆ
ಜನನ ಜಾನಿಕೆ
ಮನನವೇ ಸಹಿ-
ತಸ್ವನಾ.

## ಷಡ್ಜ

೧
ಗೋವಿನ ಕೊಡುಗೆಯ
ಹಡಗದ ಹುಡುಗಿ
ಬೆಡಗಿಲೆ ಬಂದಳು
ನಡುನಡುಗಿ;


೨
ಸಲಿಗೆಯ ಸುಲಿಗೆಯ
ಬಯಕೆಯ ಒಲುಮೆ
ಬಯಲಿನ ನೆಯ್ಗೆಯ
ಸಿರಿಯುಡುಗಿ;

೩
ನಾಡಿಯ ನಡಿಗೆಯ
ನಲುವಿನ ನಾಲಿಗೆ
ನೆನೆದಿರೆ ಸೋಲುವ
ಸೊಲ್ಲಿನಲಿ;

೪
ಮುಟ್ಟದ ಮಾಟದ
ಹುಟ್ಟದ ಹುಟ್ಟಿಗೆ
ಜೇನಿನ ಥಳಿಮಳಿ
ಸನಿಹ ಹನಿ;

೫
ಬೆಚ್ಚಿದ ವೆಚ್ಚವು
ಬಸರಿನ ಮೊಳಕೆ
ಬಚ್ಚಿದ್ದಾವುದೊ
ನಾ ತಿಳಿಯೆ.

೬
ಭೂತದ ಭಾವ
ಉದ್ಭವ ಜಾವ
ಮೊಲೆ ಊಡಿಸುವಳು
ಪ್ರತಿಭೆ ನವ.



## ಮೂರು

೧

'ಚಿತ್ತೀಮಳಿ, ತತ್ತೀ ಹಾಕತಿತ್ತು
ಸ್ವಾತಿ ಮುತ್ತಿನೊಳಗ
ಸತ್ತ್ವಯೊ ಮಗನಽ
ಅಂತ ಕೂಗಿದರು
ಸಾವೀ ಮಗಳು, ಭಾವೀ ಮಗಳು
ಕೂಡಿ'

೨

'ಈ ಜಗ, ಅಪ್ಪಾ, ಅಮ್ಮನ ಮಗ
ಅಮ್ಮನೊಳಗ ಅಪ್ಪನ ಮೊಗ
ಅಪ್ಪನ ಕತ್ತಿಗೆ ಅಮ್ಮನ ನೊಗ
ನಾ ಅವರ ಕಂದ
ಶ್ರೀ ಗುರುದತ್ತ ಅಂದ.'

## ನಾಕು

೧

'ನಾನು' 'ನೀನು'
'ಆನು' 'ತಾನು'
ನಾಕೆ ನಾಕು ತಂತಿ,

೨


ಸೊಲ್ಲಿಸಿದರು
ನಿಲ್ಲಿಸಿದರು
ಓಂ ಓಂ ದಂತಿ!
ಗಣನಾಯಕ
ವೈ ಮಾಯಕ
ಸೈ ಸಾಯಕ ಮಾಡಿ
ಗುರಿಯ ತುಂಬಿ
ಕುರಿಯ ಕಣ್ಣು
ಧಾತು ಮಾತು
ಕೂಡಿ.

- ನಾಕುತಂತಿ : ೪/ಪ್ರ : ೧೯೬೪

---

ಭಾವ : ನಾಕು ತಂತಿಯ ನಾಕು ಭಾಗಗಳು. ಒಂದೇ ಭಾವದ ನಾಕು ಮಗ್ಗಲು. ೧ರಲ್ಲಿ ಧ್ವನಿ ಪ್ರಬಲವಾದರೆ, ೨ರಲ್ಲಿ ಪ್ರತಿಮೆಗಳ ಸಾಲಿವೆ. ೩ನೆಯದರಲ್ಲಿ ಒಂದು ಸವಾಲು ಜವಾಬು ಇದೆ. ೪ನೆಯ ವಿಭಾಗ ಮೊದಲನೆಯದರ ಧ್ವನಿಗೆ ವಾಗರ್ಥ ದಾಂಪತ್ಯವನ್ನು ಕಿಂಚಿತ್ ಒಡದೇ ಹೇಳುತ್ತದೆ.

ಶಬ್ದಾರ್ಥ : ಆವು=ಆಕಳು, ಹಸು. ಈವು=ಕೊಡುವಿಕೆ. ಉದ್ಭವ=ಉತ್ಪತ್ತಿ, ಜನ್ಮ. ಚಿತ್ತೀಮಳಿ=ಚಿತ್ರಾ ನಕ್ಷತ್ರದ ಮಳಿ. ಸ್ವಾತಿ=ಸ್ವಾತಿ ನಕ್ಷತ್ರದ ಮಳೆಯ ಹನಿ ಚಿಪ್ಪಿನಲ್ಲಿ ಸೇರಿದರೆ ಅದು ಮುತ್ತಾಗುತ್ತದೆ. ಇದು ಸೃಷ್ಟಿ ವೈಚಿತ್ರ್ಯ.



## ೩೨ ಧ್ವನಿಸೂತ್ರ

೧

ತಾಪ ಮೀರಿದರೆ ಪಾತ ಸಹಜ
ಪತಿ ತತ್ತ್ವ ಕಾಣೊ ಪತಿತ!
ಪತಿತತ್ತ್ವ ಬಂತೆ ಸಹನೆ ಬೇಕು
ಸಹಿತತತ್ತ್ವದಲ್ಲಿ ಸ್ವಹಿತ.

೨

ಒಂದೆ ಕೂಗಿನಲಿ ಮುಟ್ಟಬೇಕು ಧನಿ
ಹುಟ್ಟಬೇಕು ಒಳಗೆ
ಕಿವಿಯಿದ್ದು ಕಿವುಡ! ಶ್ರೋತ್ರಿಯನು ಹೃದಯ
ಧ್ವನಿಯಿಲ್ಲದೇನೆ ಬೆಳಗೇ?

೩

ಶಬ್ದದಲ್ಲಿ ಧ್ವನಿ; ಚಿತ್ರದಲ್ಲಿ ರವಿ
ಸರಸ್ವತಿಯ ಮಾಟ.
ಭಾವವಿಲ್ಲದೇ ರಸವು ಹರಿಯುವುದೇ?
ಅಮೃತ ಜೀವದಾಟ.

೪

ಸ್ವಯಂಭಾವ ಸಂಭಾವ್ಯ ಕಾವ್ಯ
ಇಳಿಗಿಳಿದು ಬಹಳು ವಾಣಿ.
ಮಹಿಷನಿದ್ದೆಯಲಿ ಬರಿಯ ಸದ್ದು
ಸಹೃದಯ ರಾಜ, ರಾಣಿ.

೫

ಇಂದ್ರನಿಗೊ ವರುಣ ಯಮನಿದಿರು ಸೋಮ
ಆ ಅಗ್ನಿಗಿದಿರು ವಾಯು.
ನರನನೀಶ ಓ! ವಿಷಕೂಶ!
ಪುರುಷಂಶ ಭರಿತ ಆಯು.

೬

ಊರ್ಧ್ವಬ್ರಹ್ಮ ಅಧರಕ್ಕನಂತ
ಉದರಕ್ಕೆ ಶಾಂತಿಸುಖವು
ಸಾದಿ-ಹಾದಿ ಆವರ್ಣಕಾದಿ
ಸಾವಿರದ ರಂಧ್ರಮುಖವು.

೭

ಮೃದ್‌ಗಂಧದಲ್ಲಿ ಹೃದ್‌ಗಂಧವೊಳಿಯೆ
ಇರುಳೊಳಗೆ ಬ್ರಹ್ಮಕಮಲ!
ಮೂರು ಸಂಧ್ಯೆ ಮುಗಿದಾಗ ಚದುರು
ನಭದಲ್ಲಿ ಭಾಗ್ಯವಿಮಲ.

೮


ಶ್ರದ್ಧೆಯಿಲ್ಲ ತಲೆಕೆಳಗು ಬುದ್ಧಿ
ಓಂ ಮಹದ್ಯೋಗ ಸತ್ತ್ವ
ಋತಂಭರನು ವಿಶ್ವಂಭರನು
ಆ ಅತ್ರಿ ದತ್ತತತ್ತ್ವ

– [illegible]

---

ಭಾವ : ದತ್ತಾತ್ರೇಯ ತತ್ತ್ವ ಮಹದ್ ಭಾವ [illegible]

ಶಬ್ದಾರ್ಥ : [illegible] ಸಾದಿ-ಹಾದಿ [illegible] ವರ್ಣಕಾದಿ=ವರ್ಣಕ್ಕೆ+ಆದಿ [illegible] ಮೂರುಸಂಧ್ಯೆ-ಪ್ರಾತಃಸಂಧ್ಯಾ, ಮಧ್ಯಾಹ್ನಸಂಧ್ಯಾ ಹಾಗೂ ಸಾಯಂಕಾಲದ ಸಂಧ್ಯಾ [illegible]



# ೩೩ ಚೈತನ್ಯದ ಪೂಜೆ

ಚೈತನ್ಯದ ಪೂಜೆ ನಡೆದದ
ನೋಡವ್ವ ತಂಗಿ॥ ಅಭಂಗದ ಭಂಗೀ ॥ ಪಲ್ಲವಿ ॥

೧

ಸೌಜನ್ಯ ಎಂಬುದು ಮೊದಲನೆ ಹೂವು
ಅರಳೋಣ ನಾವೂ ನೀವೂ
ಸಾಮರ್ಥ್ಯ ಎಂಬುದು ಬೆಲಪತ್ರಿ
ಶಿವಗರ್ಪಿತ ಇರಲಿ ಖಾತ್ರಿ.

೨

ಸತ್ಯ ಎಂಬುವ ನಿತ್ಯದ ದೀಪ
ಸುತ್ತೆಲ್ಲಾ ಅವನದೇ ರೂಪ
ಪ್ರೀತಿ ಎಂಬುವ ನೈವೇದ್ಯ
ಇದು ಎಲ್ಲರ ಹೃದಯದ ಸಂವೇದ್ಯ.

೩

*ಸೌಂದರ್ಯ ಧ್ಯಾನಾ ಎದೆಯಲ್ಲಿ*
*ಅಸ್ಪರ್ಶಾ ಚಿನ್ಮಯದಲ್ಲಿ*
*ಆನಂದಗೀತ ಸಾಮವೇದಾ*
*ಸರಿಗಮ ನಾದಾ.*

೪

*'ಉದ್ಭವ' 'ಉದ್ಭವ' ಹೇ ಮಂಗಲ ಮೂರ್ತಿ*
*ಅಲಲಾ! ಅಹಹಾ! ಅಮಮಾ!*
*ಆತ್ಮಾ ಪರಮಾತ್ಮಾ ಅಂತರಾತ್ಮಾ*
*ಘನಮೋ ಘನ! ನಿಮ್ಮಾ ಮಹಿಮಾ!*

- ನಾಕುತಂತಿ : ೩೬/ಪ್ರ : ೧೯೬೪

---

ಭಾವ : ಜಾಗತಿಕ ಸಾಮರಸ್ಯಕ್ಕೆ ಸೌಜನ್ಯದ ಸಾಮರ್ಥ್ಯ; ಸತ್ಯದ ಪ್ರೀತಿ ಹಾಗೂ ಸೌಂದರ್ಯದ ಆನಂದ ಎಂಬ ಜೀವನ ಮೌಲ್ಯಗಳ ಆಚರಣೆ ಅವಶ್ಯ. ಇದರ ಸಿದ್ಧಿ ಆತ್ಮಾ, ಅಂತರಾತ್ಮಾ ಮತ್ತು ಪರಮಾತ್ಮ ಇವರ ಐಕ್ಯದ ದರ್ಶನ. ಚೈತನ್ಯ (Energy) ಇದು ವಿಶ್ವವ್ಯಾಪಿ.

ಶಬ್ದಾರ್ಥ : ಉದ್ಭವ=ಉತ್ಪತ್ತಿ, ಒಡಮೂಡುವಿಕೆ, ಅರೂಪ ರೂಪವಾಗಿ ಪ್ರತ್ಯಕ್ಷ ಆಗುವಿಕೆ.

ವಿಶೇಷ : ಬೇಂದ್ರೆಯವರು ತಮ್ಮ ಪ್ರಥಮ ಮೊಮ್ಮಗ ಚಿ.ಪ್ರಭಾಕರನ ಧ್ಯಾನಕ್ಕಾಗಿ ರಚಿಸಿದ ಸಾಧನಾಗೀತ ಇದು.

## ೩೪ ಆನಂದ ಭೈರವಿ

೧

*ದೇಹ ಪ್ರಾಣ ಮನಃ ಸಾಕ್ಷಿ*
*ತ್ರಿನೇತ್ರಾ ಚತುರಾ ಮಮ*
*ಮಾತಾ ಮಾಂ ತ್ರಾತು ಕಾರುಣ್ಯಾತ್*
*ಅರುಣಾಭರಣಾ ಸ್ವಯಂ.*

೨

*ನಮೇತಿ ಮನನಾತ್ ಧ್ಯಾನಾತ್*
*ಸುಮನಾತ್ ಪ್ರಕಟಾ ಸ್ವಯಂ*
*ಅಯಂ ಆತ್ಮಾ ಸ್ವಯಂ ಬ್ರಹ್ಮಾ*
*ಓಂಕಾರ ನಿನದೀಕೃತಾ.*

೩

ರಾತ್ರೌ ರಟತಿ ಮಂಡೂಕಃ
ಟರೌರವ ನವೋನವಃ
ವೃಷಭೋ ವರ್ಷತಿ ಪ್ರಾತಃ
ಸ್ನಾತೋರುಣ ಪುರಸ್ಕೃತಃ
ಮೂರ್ಧ್ನಿಂ ಕಿಂ ಹೇ ಋಷೇ ರೌಷಿ
ಲಲಿತಾ ಲಾಲಿತಃ ಸ್ವನಃ
ಸ್ತನಂಧಯೋಽಪಿ ಕ್ರಂದಂತಿ
ಆನಂದಾತ್ ಸ್ವಮುಖೇ ಸ್ತನಾಃ

೪

ನವವ್ಯೂಹಾತ್ಮಕೋ ದೇವಃ
ಪರಾನಂದಃ ಪರಾತ್ಮಕಃ
ಪರಾನಂದಃ ಪರಾಶಕ್ತಿ
ಚಿದ್ರೂಪಾನಂದ ಭೈರವೀ
ತಯೋರ್ಯದಾ ಸಾಮರಸ್ಯಂ
ಜಗದುತ್ಪದ್ಯತೇ ತದಾ.

- ತಾ ಲೆಕ್ಕಣಿಕೆ ತಾ ದೌತಿ-೫೮/ಪ್ರ : ೧೯೮೩.

---

ಭಾವ : ದೇಹ, ಪ್ರಾಣ, ಮನ ಹಾಗೂ ಸಾಕ್ಷಿ ಕುರಿತು ರಚಿಸಿದ ಈ ಸ್ತೋತ್ರದಲ್ಲಿ ಸಂಸ್ಕೃತ ಭೂಯಿಷ್ಟ ಶೈಲಿ ಇದೆ. ಇದು ಬೇಂದ್ರೆ ಕಾವ್ಯ ಮಾರ್ಗದಲ್ಲಿ ಅತಿ ವಿರಳ. ವಸ್ತುವಿಗೆ ಅನ್ವಯಿಸಿ ಈ ರೀತಿಯ ರಚನೆಯಾದದ್ದು ಕಂಡು ಬರುತ್ತದೆ. ಶ್ರೀಪದ ತರ್ಪಣ ಪದ್ಯದಲ್ಲಿ ಹೀಗಾಗಿದೆ.

ವಿಶೇಷ : ಲಲಿತಾ ದೇವತೆಯ ಸಂಕೇತವಾಗಿ ಪೊಳೆಯ ಆಕಾರದ ಪ್ರತಿಮೆ ಪೂಜಿಸಲ್ಪಡುತ್ತದೆ. ಇದರ ಆರಾಧನೆ ಬೇಂದ್ರೆ ಮನೆತನದ ಸಂಪ್ರದಾಯ. ತಾಯಿಯ ಸ್ತನಪಾನ ಆನಂದದಾಯಕವಾಗಿರುವಂತೆ ಇಲ್ಲಿಯೂ ಆನಂದಕ್ಕಾಗಿ ಪ್ರಾರ್ಥಿಸಲಾಗಿದೆ. ಈ ಕವನವನ್ನು ಸಂಸ್ಕೃತ ಸ್ತೋತ್ರ ಪಠಿಸಿದಂತೆ ವಾಚನಮಾಡಿ ಆನಂದ ಪಡೆಯಬೇಕು

## ೩೫ ಕೇಳಿ ನುಡಿ; ನುಡಿಯ ಕೇಳಿ

೧

ಅಆ, ಇಈ, ಉಊಽ ಎನ್ನೆ ಸ್ವರಜಾತಿಯ ಜತಿಜತಿ
ಘ್ರಾಣಮೂಸ ಜ್ಞಾನತಾನ ಆತ್ಮನತನ ಕೃತಮತಿ
ಮೌನದಾಳಿ ಮಂದ್ರೋತ್ತರ ಸಂದೇಹದ ಆ ಋತಿ ॥ನುಡಿಯ ಕೇಳಿ.

೨

ಏಳೆಗೀತಿ ಪೇಳಿಬಂತು ಮೇಳದಲ್ಲಿ ಸೇರಲೂ
ಏಳು ಎತ್ತು ಕುದುರೆ ಹತ್ತು ಸಮಯವಿಲ್ಲ ಮೀರಲೂ
ಮೂಡಪಕ್ಕ ಉಕ್ಕು ಉಕ್ಕು ನೀಲಿ-ಕೆಂಪು-ಹೇಲಲೂ ॥ನುಡಿಯ ಕೇಳಿ.

೩

ಯಾಲಕ್ಕಿಯ ಮುಖವಾಸದ ಸುಖವಾಸದ ಕಂಪನಾ
ಕಿಂಕಣಿಯ ಮುತ್ತಿನ ಗಗ್ಗೆ ಜೇನು ತುಂಬಿದ ಘನಘನಾ
ಯಾ ಕಿಂಕಣಿ ಸುಳಿಸುವುದೋ ಮುತ್ತಿನಂತ ಸುಸ್ವನಾ ॥ನುಡಿಯ ಕೇಳಿ.

೪

ನಾಮ ಕಾಮಧೇನು ಈಗ ಸಾಮ-ಸೂಮ ಮೂರ್ತವು
ನೇಮಿಚಕ್ರ ಸದಾವಕ, ಹೃದಯಾಶಾ ಪೂರ್ತವು
ತ್ವರಿತು ತೂರ್ತ, ತೂರ್ಯಧ್ವನಿ ಪಾದಘಾತ ಕೂರ್ತವು ॥ನುಡಿಯ ಕೇಳಿ.

೫

ಈ ನೇಸರು ಈ ನಿಸರ್ಗ ಯಜ್ಞ-ವೇದಿ ಪ್ರಟ್ಟಿಸಿ
ತತ್ ಬ್ರಹ್ಮದ ಓಂ ವಿಸರ್ಗ ಸರ್ಗ ಸ್ವರ್ಗ ಮುಟ್ಟಿಸಿ
ನೀಟು ಸೆಟ್ಟು ದೇಟಿಯಾಗಿ ನಿಂತಿದೆ ಓಂ ನಿಟ್ಟಿಸಿ ॥ನುಡಿಯ ಕೇಳಿ.

೬

ಆಸ್ತಿಗೆ ತುಳಿ ಶ್ರಾವಣ ಬೆಳೆ ತೆಗೆದೆ ತಾರಕನ ಗುಂಜಿ
ಹಿಂಜಿದಂತೆ ಹಿಗ್ಗುತ್ತಿದೆ ಹತ್ತಿ ಬತ್ತಿ ಪಂಜಿ
ಮೌಂಜಿಬದ್ಧ ಬ್ರಹ್ಮಚಾರಿ ತೇಜಸ್ವಿ ಪುಂಜಿ ॥ನುಡಿಯ ಕೇಳಿ.

೭

ನಗುತ ನಲಿದು ಓಂ ನೃತ್ಯಕಾ ಭವ ಭವ ಭವ ನಾಟಿಸು
ಋತಸತ್ಯದ ಆ ಮಹತ್ವ ಸ್ಪಷ್ಟಯಾಗಿ ನಾಟಿಸು
ನಾಟಕದೊಳ [illegible] ನೋಡಿದಾಗ ಕಾಣಿಸಿ ತ್ರಾಟಿಸು ॥ನುಡಿಯ ಕೇಳಿ.

೮
ಕಂಠ್ಯನಾದದಾಽಕಾರ ಪಾದವಾಗಿ ಊರಿಸು
ಅನುಸ್ವಾರ ಏರಿ, ನಾಭಿ ಅವಿನಾಭಿಗೆ ಏರಿಸು.
ಶ್ರೀರಂಗದ ಓಂಕಾರವ ಓಂಕಾರಕೆ ಸೇರಿಸು ॥ನುಡಿಯು ಕೇಳ್.
೯
ಸ್ವಸ್ತಿಮಂಗಲಂ ಭವತು ಸೌರಭಾಗ್ಯ ತೆರೆಯಲೀ
ಸೌಮ್ಯ ಸೋಮ ತಿಂಗತಿಂಗಳಾಗಿ ಮಾಗಿ ಮೆರೆಯಲೀ
ವಾದ್ಯವೃಂದ ಮಾಧ್ಯಮವೆನೆ ಸಂಗೀತವೆ ಹರಿಯಲೀ ॥ನುಡಿಯು ಕೇಳ್.
೧೦
ನರ್ತನವೋ ವರ್ತನವೆನೆ ಅಭಿನಯಿಸುತ ಸಾಗಲಿ
ಪ್ರೇಕ್ಷಕನಲಿ ಸಾಕ್ಷಿಕತೆಯು ಸಪ್ತಪಿಂಡವಾಗಲಿ
ಸಿರ್ಗಿಫ್ಸಾ-ಚಾಂಗು-ಭಲಾ ಪೇಽರಂಬನು ತೇಗಲಿ ॥ನುಡಿಯು ಕೇಳ್.
೧೧
ಮೋದವೋ ಪ್ರಮೋದವೋ ಬೃಹದ್ವಿಭೂತಿ ಮೂಡಲಿ
ಪಡುವ ಹೊತ್ತು ಹೋತು, ಹೂತ ದೇವ- ಧ್ವನಿ ಹಾಡಲಿ
ಸಾರ್ವಭೌಮ ಮಾನವತೆಯ ಚಂದ್ರ ಸೂರ್ಯ ನೋಡಲಿ ॥ನುಡಿಯು ಕೇಳ್.
೧೨
ಪ್ರಾತಿಭನಲಿ ನವೋನವವು ಹತ್ತುಗಡೆಯೆ ಅತ್ತಲೂ
ಅನಾದಿಯೋಗ ಶಾಂತ್ಯಯೋಗ ಅನಂತ್ಯವೆ ಇತ್ತಲೂ
ಹಿಂದೆ ಮುಂದೆ ಮೇಲೆ ಕೆಳಗೆ ಒಳಗೆ ಹೊರಗೆ ಸುತ್ತಲೂ ॥ ನುಡಿಯು ಕೇಳ್.
೧೩
ಎಲುವು ಎಲುವು ನಾದ ನಾದ ಯಾವುದು ಸಾವಿತ್ರಿಯೋ
ಮಾತೆಯಾದ ಏಕ್ಕೆ ಏಕ್ಕೆ ಉಜ್ಜ್ವಲಿದ ಸಿತ್ರಿಯೋ
ಸಿರೀಗಪದ ರಸದ ಬಸಿ ಆದಿತ್ಯಗೆ ಬಿತ್ತಿಯೋ ॥ನುಡಿಯು ಕೇಳ್.

೧೪

ಮೇರುದಂಡ ಅದು ಉದಂಡ! ತ್ಯಾಗಿಯಾಗಿ ಕೇಳುವೆ
ವರ್ಣ ವರ್ಣ ಆ ಸುವರ್ಣ ಬೆಳಕಿನಲ್ಲಿ ಬೀಳುವೆ
ಎಚ್ಚರೆನ್ನ ತಬ್ಬಿಕೊಂಡು, ಏಳುವೆನೋ ಏಳುವೇ ॥ಸುಡಿಯ ಕೇಳಿ.


- ನಾಕುತಂತಿ : ೪೩/ಪ್ರ : ೧೯೬೪

---

ಭಾವ : ಪರಾ, ಪಶ್ಯಂತಿ, ಮಧ್ಯಮಾ ವಾಕ್ಕುಗಳ ಸಮ್ಯಕ್ ಯೋಗದಲ್ಲಿ ಕಾವ್ಯೋದ್ಭವವಾಗುತ್ತದೆ. ಈ ಶ್ರುತಿ ಸಂಪತ್ತಿಯನ್ನು ಸಾಮಾಜಿಕ, ರಾಜಕೀಯ ಕ್ಷಣಿಕ ಸಂಸ್ಕಾರಗಳಿಂದ ದುರ್ಗಂಧಕ್ಕೆ ಒಳಪಡಿಸಬಾರದು. ಅಂಥ ಎಚ್ಚರದ ಏಳು ಹೆಜ್ಜೆ ನಮಗೆ ಬೇಕಾಗಿವೆ. From Seven fold ignorance to Seven fold knowledge - ಅಜ್ಞಾನ ಸಪ್ತಕದಿಂದ ವಿಜ್ಞಾನ ಸಪ್ತಕದವರೆಗೆ ಎಚ್ಚತ್ತ ಮಾನವನು ಸಾಗಬೇಕಾಗುತ್ತದೆ. ಇಲ್ಲಿ ಶಬ್ದದ ಕ್ರೀಡೆ-ಕೇಳಿ ಇಲ್ಲ. ಸಮಾಹಿತ ಚಿತ್ತದಿಂದ ಅಕಾಮಹತವಾಗಿ ಕೇಳಬಹುದಾದ ಧ್ವನಿ ಇದೆ. 'ಅ' 'ಆ' ಗಳ ಪಾಠ ನಾವು ಪ್ರಾರಂಭಿಸಬೇಕು.

ಶಬ್ದಾರ್ಥ : ಸಿಂಫನಿ=symphony=ಸ್ವರ ಮೇಳ ಮೈತ್ರಿ-ಸಿಂಪು+ಹನಿ=ಸ್ವಾತಿ ನಕ್ಷತ್ರದ ನೀರಿನ ಹನಿ ಸಿಂಪಿನಲ್ಲಿ ಮುತ್ತಾಗುವ ಕ್ರಿಯೆ. ಮೇಟಿ-ಮೇಂಟಿ=ಶ್ರೇಷ್ಠತೆ, ದೊಡ್ಡಸ್ತಿಕೆ. ತ್ರಾಟಕ=ದೃಷ್ಟಿಬಂಧ. ಹೇರಂಬ=ಗಣಪತಿ. ಮೇರುದಂಡ=ಬೆನ್ನುಹುರಿ. ಬೀಳುವೆ-ಬೀಳ್ಕೆ= ಹೋಮ. ಯುದ್ಧ ಮಂದೇಹರ=ರಾಕ್ಷಸ.

ವಿಶೇಷ : ಸುಡಿ ೬-ಅಶ್ವಿನಿ ತುಲೆ, ಶ್ರಾವಣ ಚಲೆ ತೊಲೆ ತೂಕದ ಗುಂಜಿ-ಅಶ್ವಿನಿ ಮಾಸದಲ್ಲಿ ದಸರೆಯ ಹಬ್ಬ ಆಡಂಬರದ ಹಬ್ಬ ಬರುತ್ತದೆ. ಅಶ್ವಿನಿ ಎಂಬುದು ತೂಕದ ಎರಡು ತಕ್ಕಡಿಗಳಂತೆ ಜೋಡಿ ನಕ್ಷತ್ರ. ಈ ಮಾಸದ ಮೌಲ್ಯ ಆಡಂಬರದಲ್ಲಿದೆ. ಶ್ರಾವಣ ಮಾಸದ ಚಲೆ-ವೇದ ಶ್ರವಣ ಮಾಡುವ ಆಡಂಬರ - ರಹಿತ ಜ್ಞಾನೋಪಾಸನೆಯಲ್ಲಿದೆ. ಸುವರ್ಣದ ಒಂದು ತೊಲೆಯ ತೂಕ ಮಾಡುವಾಗ ಸುವರ್ಣಕಾರ ಒಂದೊಂದು ಗುಂಜಿಯಿಂದ ತೂಗಿ ಸರಿಪಡಿಸುತ್ತಾನೆ. ಮಾಸ ಮಹಾತ್ಮ್ಯದ ಮಹಿಮೆಯನ್ನು ಸೂಕ್ಷ್ಮವಾಗಿ ಅಭ್ಯಸಿಸಿ, ವಿಮರ್ಶಿಸಿ ತಿಳಿದುಕೊಳ್ಳುವುದು ಅವಶ್ಯ. ಇದು ಪ್ರಜ್ಞಾಶಕ್ತಿ ಪಡೆದವನಿಗೆ ಸಾಧ್ಯ. ಈ ಉಕ್ತಿ ಪರಂಪರಾಗತ ಅಲಂಕಾರ ಉಕ್ತಿ ಅಲ್ಲ



# ೩೬ ಧನ್ಯ ವೃಂದಾವನಾ !

**ಒಂದು**

*ಧನ್ಯ ವೃಂದಾವನಾ*
*ಧನ್ಯ ವೃಂದಾವನಾ*
*ದೇವನಾ; ಜೀವನಾ*
*ಭಾವನಾ, ಧನ್ಯ ವೃಂದಾವನಾ // ಪಲ್ಲವಿ //*

೧

ನರಲೋಕ ನರಕಲೋಕವು ಅಲ್ಲ
ಸುರಲೋಕ ಚ್ಯುತಿಗೆ ಬಾಹಿರವಲ್ಲ
ಲೋಕಬಾಹಿರಗೆ
ಲೋಕದ ದುಃಖ ತಿಳಿದಿಲ್ಲ;
ಲೋಕ ಸಂಗ್ರಹಕಾರಿ-ಆ ಚತುರ್ಲೋಕಧಾರಿ
ಅವತಾರಿ
ಲೋಕನಾಯಕ ಬಲ್ಲ ॥ ಧನ್ಯ ವೃಂದಾವನಾ..........


೨

ತಾಯಿ, ಹೆಂಡತಿ, ಮಗಳು, ಗೆಳತಿ
ಲೋಕವಾದಳು ಪ್ರಕೃತಿ
ಪುರುಷನೋ। ಅವಳ ಸಂಗಾತಿ
ಅಸುರಾಹಂಕಾರ ಪರಮ ಪ್ರೇಮಾಸ್ಪದವೇ ?
ಅತೀತ, ಅಂತರ್ಗತ, ಉದ್ಗತ
ಆ ಬಂಧ ಬಿಡಿಸುವನು
ಪರಮ ಪುರುಷೋತ್ತಮನು. ॥ ಧನ್ಯ ವೃಂದಾವನಾ.........

೩

*ವೃಂದೆ, ತುಳಸಿ, ರಾಧೆ, ವೇಣು, ಗೋವು, ಗೋಪಿ*
*ಅಲ್ಲ ಪಾಪಿ.*
*ಈ ಭೂಮಿಗೆ ಶ್ರೀ ಕೃಷ್ಣನೇ ಸ್ವಾಮಿ*
*ನಮಾಮಿ, ನಮಾಮಿ*
ತಂ ವಂದೇ ತಂ ನಮಾಮಿ ॥ ಧನ್ಯ ವೃಂದಾವನಾ.........





೪

ಕೊಳಲಾಗುತಿದೆ ಉದಯಾ
ಹೊಳಲುಗೊಡುತಿದೆ ಹೃದಯಾ
ತೆರವುಗೊಡು, ತೆರೆಯುತಿರು
ಸಂವಿತ್ತಿನೆದೆಯಾ ॥ ಧನ್ಯ ವೃಂದಾವನಾ..........

೫

ಕಿವಿಯಲ್ಲಿ ಪಡಿನುಡಿಯೆ ಗೋಪಿಯರ ಗೆಜ್ಜೆ
ಕಣ್ಣಿನಲಿ ಮೂಡುತಿವೆ ಶ್ರೀಧರನ ಹೆಜ್ಜೆ
ನಾಡಿ ನಾಡಿಯು ಅವನು ಪವಡಿಸುವ ಸೆಜ್ಜೆ ॥ ಧನ್ಯ ವೃಂದಾವನಾ.........

೬

ಅರಗುತಿದೆ ಕರಗುತಿದೆ ನೀರಿನಲಿ ನೀರು
ಉದ್ದನೀರಿದು ; ಆಳ ಎಷಬೇಡ ಭೀರೂ !
ಮುಳುಗಿದ್ದು, ಮುಳುಗಲಿ ತಿಳಿದಷ್ಟು ಹೀರು ॥ ಧನ್ಯ ವೃಂದಾವನಾ.........


೭

ಓಂ ನಮಮ ! ಏನಮಮ ! ಘಮಘಮಾಟ !
ಓ ರಮಣ ಇದು ಪುಲಕ ಪುಲಕ-ಪೂದೋಟ !
ಮಾಟವೆನಲೋ ? ನಿನ್ನ ಆಟವೆನಲೋ ?
ಈಗ, ಎಲ್ಲ ರಸದೂಟ ॥ ಧನ್ಯ ವೃಂದಾವನಾ.........

೮

ಪ್ರೀತಿ ಸಾಗರದ ವಡವಾನಲದ ಭಕ್ತಿ
ಜಾಲಂಧರನ ಶಕ್ತಿ.
ವೃಂದೆ ಆತನ ಮಡದಿ
ಆ ಅಸುರ ಬದುಕಿದ್ದೆ
ಅವಳ ಸೌಭಾಗ್ಯ ಬಲದಿಂದ ;
ಅವಳದಚ್ಯುತ ಪ್ರೇಮ
ಅವಳಾದಳು ದಗ್ಧೆ;
ಚ್ಯುತಳಾಗಿ. ಭ್ರಾಂತಿಯಲಿ
ದಗ್ಧಳಾದಳು-ಪ್ರೌಢೆ
ಆದರೂ ಮುಗ್ಧೆ ॥ ಧನ್ಯ ವೃಂದಾವನಾ.........

९



ಶೈವ, ವೈಷ್ಣವ ದೇವತಾ ವೃಂದ ವೃಂದಕ್ಕೆ
ಅಂದಾಯ್ತು ಬಂಧನ ವಿಮುಕ್ತಿ
ವೃಂದೆ ಮಾಡಿದಳು ಅಗ್ನಿ ಪ್ರವೇಶ
ಅದು ಈ ಪ್ರದೇಶ!
ವಿರಸ ಅರಸನ ತೊರೆದು
ಸರಸ ಪುರುಷೋತ್ತಮನ
ಕೂಡಿದಳು ಹೃದಯದೇಕಾಂತದಲಿ
ಆ ವೃಂದೆ-ಸುರವಂದ್ಯೆ! ॥ ಧನ್ಯ ವೃಂದಾವನಾ..........

೧೦
ಶಂಖ ಚೂಡನ ರಮಣಿ-ತುಲಸಿ
ಅವಳ ಶಾಪಕ್ಕೆ ತುತ್ತಾಗಿ
ಕಲ್ಲಾದ ವಿಶ್ವಪಾಲಕನ ತೇಜಸ್ಸು
ಶಿಲೆಯಾಯ್ತು-ಶಾಲಿಗ್ರಾಮ
ಅದು ಪ್ರೇಮ ಸಂಗ್ರಾಮ ॥ ಧನ್ಯ ವೃಂದಾವನಾ.........

೧೧
ತಾಪ, ಪ್ರತಾಪ; ಶಾಪ, ಉಃಶಾಪ
ಸುಪ್ರೀತಿ, ಭಕ್ತಿಚರಿತೇ
ಇದು ಅವಳ ಚರಿತೆ.
ಭಕ್ತಿ ಇದ್ದಲ್ಲಿ ಭಗವಂತ
ಅಸಹಜವು ಅಲ್ಲ ಭಕ್ತಿ.
ಇಲ್ಲ ಬಲವಂತ
ಆ ಶಕ್ತಿ-ಭಕ್ತಿ
ಅಲ್ಲಿ ಭಗವಂತ.
ತಪ ತಪನೆ ತೊಯ್ದು, ತೊರೆಗರೆಯುವುದು ಧಾರೆ
ಭೂಮಿ ಬಳಿ ಸಾರೆ
ಶಂಖಜಲ, ತುಲಸಿದಲ-ಅಲಲ ಶಾಲಿಗ್ರಾಮ
ಕಾಮೋದೆ ಉದಯಿಸಲು ಸತಿ ವೃಂದೆ ಆರಾಮ
ಅದು ಪ್ರೇಮಧಾಮ! ಅಲ್ಲಿ ಪೂರ್ಣವಿರಾಮ ॥ ಧನ್ಯ ವೃಂದಾವನಾ..........

೧೨
ತಪಃ ಸಿದ್ಧಾ
ಜನ್ಮಜನ್ಮಾಂತರದ ಋಷಿಕಾಮ
ಅಧಿಯಜ್ಞ ಶುದ್ಧಾ
ಹೃದಯಾಗ್ನಿ ಆಹುತ ಸೋಮ



ಆತ್ಮದಾನ ಪ್ರಸಿದ್ಧಾ
ಅದುವೆ ಗೋಪೀ ನೇಮ
ಅಲ್ಲಿ ಲಯಿಸುವವು
ಭಾವತರಂಗ
ನೀಲ ಮೇಘ ಶ್ಯಾಮ!
ಶ್ರೀ ಕೃಷ್ಣ! ಶ್ರೀರಾಮ! ॥ ಧನ್ಯ ವೃಂದಾವನಾ..........

೧೩

ಆ ಕೃಷ್ಣ ವಿಶ್ವ; ಈ ವಿಷ್ಣು ವಿಶ್ವ
ಎರಡೊಂದು ಆಗುಹೋಗು
ಓ ತುರೀಯ, ವಿಶ್ವಾತ್ಮನಾಗಿ
ತೇಜಸ್ವಿ ಪ್ರಾಜ್ಞನಾಗು.
ಚೈತ್ಯಾಗ್ನಿ ಸೋಮ, ಯೋಗೀಶ ಕಾಮ
ನವಸೃಷ್ಟಿ ವೃಷ್ಟಿ ಮಾಡು
ದೃಕ್ ದೃಶ್ಯದಲ್ಲಿ ದರ್ಶನದ ಜತೆಗೆ
ದಿಕ್ ದೃಷ್ಟಿ ಪುಷ್ಟಿ ಮಾಡು.
ಮಹಾಪಿಂಡ, ಕೋದಂಡ, ಚಕ್ರ ಬ್ರಹ್ಮಾಂಡ
ಶುಕ್ರತುಷ್ಟಿ
ದೇವ, ಜೀವ, ಹಲವಾದ ಭಾವ
ಅದಕೇಕೆ ಬೇರೆ ಇಷ್ಟಿ?
ಇಷ್ಟಿಯಲಿ ಪರಮೇಷ್ಟಿ
ಇಷ್ಟದಲಿ ಧರ್ಮ ಶರ್ಮ ಪಡೆದು
ವಿಶ್ವಾವೇಶ ಆವೇಶ ತುಂಬಿ
ಅವತರಣ ಬರಲಿ ನಡೆದು ॥ ಧನ್ಯ ವೃಂದಾವನಾ..........

೧೪

ಕೃಷ್ಣ ರಾತ್ರಿಯಲಿ
ಕೃಷ್ಣ ಧಾತ್ರಿಯಲಿ
ಉದಿಸಿದನೋ ಚಂದ್ರಮಾ
ಕಂಸನ ಸಂಹಾರಕ್ಕೆ ಕೃತ್ಸ್ನವೂ
ರೂಪಗೊಂಡಿತಮಮಾ
ಅಸಮಾ, ನಿರುಪಮಾ ॥ ಧನ್ಯ ವೃಂದಾವನಾ..........



## ಎರಡು


ಇಂದು ನಿನ್ನಿನ ನೀರಲ್ಲ
ಯಮುನೆಯ ಕೃಷ್ಣಜಲ. ॥ ಪಲ್ಲವಿ ॥

೧

ಮಣ್ಣು ನೀರಿನಲಿ ಗಾಳಿ ತೆರೆದು
ಬಯಲಾಟವು ಬೆಂಕಿಯು ಗೆರೆ
ಯಾವ ಚಿತ್ರ ಬರೆದಿಹೆ ವಿಚಿತ್ರ
ಬಾ, ಗೋಪೀಚಂದನ ಧೊರೆ ॥ ಇಂದು ನಿನ್ನಿನ.........

೨

ಯಮುನ ಸಂಯಮಕೆ ಯಮಿಯು ಸತ್ತರೂ
ಆದಳು ಯಮುನಾ ಜಳಾ
ಕಾಲ ಪಾತ್ರ-ಕಾಲಿಂದಿಗಾತ್ರ
ಕಾಳಿಂಗನ ರಂಗಸ್ಥಳಾ ॥
ವ್ರಾತ್ಯ ಸೂತ್ರ ವ್ರತಬದ್ಧ; ಶುದ್ಧ ಆ
ಕಾತ್ಯಾಯಿನಿಯರು ಸದಾ
ಬೆಳ್ಳ ಬೆಳಗು ದಿನಮುಳುಗು ಹಾಕುವರು
ಒಳಗು ತಿಳಿಯದೇ ಹದಾ.
ಸುತ್ತಲಾರು ? ಬಯಲತ್ತಲಾರು ?
ರವಿ ಕಂಡನು ಕವಿ ಕಾಂಬುದಾ
ಗವಿಯೊಳೇನು ? ಕವಿದಿತ್ತೊ ಯಾಕೊ ?
ಮಿಂಚಿತ್ತು ಕೃಷ್ಣ ಅಂಬುದಾ !
ಬಳಕೆ ಇಲ್ಲದಾ ಒಳಕೆ ಇಲ್ಲದಾ
ಜಳಕ, ಎಲ್ಲ ಜಳಜಳಾ
ಕಪ್ಪುನೀರು, ತಿಳಿಯಿರದೆ, ತಳದನೆಲೆ
ಮುಚ್ಚಿಹ ಗುಣಗಣಗಳಾ ॥ ಧನ್ಯ ವೃಂದಾವನಾ.........



೨

ವೃಂದೆ ಮಾಸತಿಯ ಸುಟ್ಟನಿಟ್ಟು
ಸುಡುಗಾಡು ಎಂದರೂ ವನಾ
ಸಾಲಲಾರದೇ ಬದುಕಲಾರದೇ
ಬರುವರು ಅಲ್ಲೇ ಜನಾ.
ಮಸಣಭೂಮಿಯಲಿ ತಲೆಯನೆತ್ತಿ
ನಿಂತಿತ್ತು ತುಲಸಿಯಾ ತೆನೆ
ಬರುವ ದೇವ ಬರಲಿಲ್ಲ. ಕಾಮದಾ
ಹೋಮ ಧೂಮದಾ ಕೊನೆ.
ಜಗುಳಿದ್ದ ಜಮುನೆ, ತೆಗಳಿದ್ದ ಜನುಮ
ಉಗಳಿದ್ದು ಗಂಧ ಸಂಧಿಸು
ಮೂರುಲೋಕ ಮೀರಿದ್ದ ಹರಿಯೆ ಬಾ
ಪದ ಪದ ಪದವಂದಿಸು
ಆ। ಪದವಿಯ ನೀ ಹೊಂದಿಸು ॥ ಧನ್ಯ ವೃಂದಾವಾನಾ..........

೪

ಬಂತು ರಾಧೆಯ ಪಾತ್ರ, ಶ್ರೀಕೃಷ್ಣ ಚರಿತದಲಿ
'ನ ದೇವ ಚರಿತಂ ಚರೇತ್' ಎಂಬ
ಉಕ್ತಿಗನುವಾಯ್ತು.
ಯಾವ ಶ್ರಾವಣದ ಶ್ರವಣಕ್ಕೆ ಬಿತ್ತೋ ಆ ನಾಮಾ
ರಾಧಾ-ಕೃಷ್ಣ
ರಾಧಾ-ಕೃಷ್ಣ
ಮಾಧವನ ವೈಶಾಖಾ-ಆಗಿತ್ತು ಬಹುಶಾಖಾ ॥ ಧನ್ಯ ವೃಂದಾವನಾ.........

೫

ರಾಧಾ ಮಾಧವನಾದ ನವೋನವ
ಮೈತುಂಬ ಎಂಥ ತುಪ್ಪುಳು
ಯಮುನೆ ಕೃಷ್ಣಜಲ ?
ವೃಂದೆ ಅಸುರ ಕುಲ ?
ತುಳಸಿ ಯಾವ ತೊಪ್ಪುಲು ?
ಕಲ್ಲೊ ರಾಮಾ ಆ ಶಾಲಿಗ್ರಾಮಾ
ದೇವನೆ ಅದನೊಪ್ಪಲು
ಅಹಂ ವಿಕತ್ತಿ ಅಂಕುರ ಭಕ್ತಿ
ಭಗವಂತನೆ ಅಪ್ಪಲು ॥ ಧನ್ಯ ವೃಂದಾವನಾ.........

೬



ಸಾಮಾನ್ಯ ಗೋಪಿಯರು, ಅಸಾಮಾನ್ಯತೆಯ
ಬೆಳಕಿನಲಿ ಬೆಳಗಿದರು
ಕೃತಕವೇ ಕುಶಲ, ಕೃತಕೃತ್ಯತೆಯು ಕೃತಿಯಲ್ಲಿ
ಚಿತ್ತ ಎರಡಿಲ್ಲ ಶ್ರೀ ಪದತಲದಲ್ಲಿ
ಆ ಕುಲವೋ, ಈ ಕುಲವೋ, ಮಾನಿಸರೆ ಅಲ್ಲ ಘನ
ಘನ ಸಿದ್ಧ ಶ್ರದ್ಧೆಯಾ ತಚ್ಛಲದಲಿ
ಮತ ಮರೆತು, ಮೈಮರೆತು, ಮನ ಮರೆತು ಕರಗಿದರು.
ಶ್ರೀಕೃಷ್ಣ ಸ್ಮರಣೆಯಾ ವ್ಯಾಕುಲದಲಿ
ಗೋ ಗೋಪ ಗೋಪಿಯರು ಅರಳಿದರು, ತೆರಳಿದರು
ಗೋಲೋಕ ತೆರೆದಂತೆ ಗೋಕುಲದಲಿ ॥ ಧನ್ಯ ವೃಂದಾವನಾ.........


## ಮೂರು

ಪರಮ ಪುರುಷಾ, ಅಲ್ಲವೋ
ಅಲ್ಲಾ ಪರಪುರುಷಾ ॥ ಪಲ್ಲವಿ ॥

೧
ಹೃದಯ ಪುರದೊಳೇ ಅವನ ನಿವಾಸಾ ತಾ ಬದುಕುವುದೇ ಆ ವಿಶ್ವಾಸಾ
ಮೈ ಮೈ ತಿನುವುದು ಯಾ ಪರಿಹಾಸಾ ?
ಪ್ರಾಣ ಪತಿಯು ನಿಜ, ಕೃಷ್ಣ ವಿಲಾಸಾ ॥ ಪರಮ.........

೨
ಅರಸನ ಸರಸವು ಅರಸಿಕ ಆಟಾ
ಪುರುಷಾಕರ್ಷಣೆ ಪ್ರಕೃತಿಯ ಮಾಟಾ
ಗುಣಗಳ ಗುಣಿಕೆಯ ವಿಷಮದ ಕೂಟಾ
ಮನ ಸಾಯುವುದೇ ಅಮೃತದ ಊಟಾ ॥ ಪರಮ.........

೩
ಅಸುರನ ವಶವೇ ಪ್ರೇಮದ ತನುವೇ
ಪರವಶವೆಲ್ಲಾ ಆತ್ಮದತನವೇ
ಕೃಷ್ಣ ಒಲಿದರೆ ಬೇರೆಯ ಮನವೇ
ವೃಂದೆ ಸಾಯದೇ ವೃಂದಾವನವೇ ?
ಪರಮ ಪುರುಷಾ । ಅಲ್ಲವೋ
ಅಲ್ಲಾ ಪರಪುರುಷಾ ॥ ಧನ್ಯ ವೃಂದಾವನಾ.........



೪
ಎಲ್ಲಿ ಯಮುನೆ ತಡಿಗದರ ಸಮನೆ ಆ
ಮಾಸತಿ ವೃಂದಾವನಾ
ಅಲ್ಲೇ ಅಲ್ಲೇ ಲಯಗಾಣುವದೀ ಮನಾ
'ಎಲ್ಲೆ ರಾಧೆ', 'ಓ ಕೃಷ್ಣಾ ಪೋದೆ' ಎಲ್ಲೆಂದಳೊ ಆ ಭಾಗವು
ಅಲ್ಲೇ ಅಲ್ಲೇ ಭಾರತಿಯನುರಾಗವು
ಎಲ್ಲಿ ವೇಣು ಧ್ವನಿ ಕೇಳಿ ಹಸು, ಮರಾ
ತಮ್ಮನೆ ತಾ ಮರೆತವೋ
ಅಲ್ಲೇ ಅಲ್ಲೇ ಮನ-ಮನ-ಮನ ಬೆರೆತವೋ.
ಎಲ್ಲಿ ಗೋಪಿ ಅನುತಾಪದಿಂದ ತಾ
ತಾಪಸಿ ತಾನಾದಳೋ
ಅಲ್ಲೇ ಅಲ್ಲೇ ಗೋಲೋಕಕೆ ಹೋದಳೋ
ಎಲ್ಲಿ ಕೃಷ್ಣ ಪರಮಾತ್ಮ ಪ್ರಾಪ್ತ
ತನ್ನೆಲ್ಲರಿಗೂ ಆಪ್ತನೋ.
ಅಲ್ಲೇ ಅಲ್ಲೇ ಭಕ್ತನು ಉದ್ದೀಪ್ತನೋ
ಎಲ್ಲಿ ಎಲ್ಲಿ ಆ ಕೃಷ್ಣಪದಗಳೆ-
ಲ್ಲೆಲ್ಲಿ ತೃಷ್ಣೆ ಹಿಂಗದೋ
ಅಲ್ಲೇ ಅಲ್ಲೇ ಭವ-ಭವ-ಭವ ಇಂಗದೋ.
ಎಲ್ಲೆ ಇಲ್ಲ ಇದರಲ್ಲಿ ಎಲ್ಲರೊಳು
ಎಲ್ಲಾ ತಾನಾದವಾ
ಇಲ್ಲೇ ಇಲ್ಲೇ ಬರಲಾದೊರೆ ಯಾದವಾ
ಎಲ್ಲಿ ನೆಲ್ಲಿ ಮತ್ತೆಲ್ಲಿ ಮಾಲತಿ
ಎಲ್ಲಿ ತುಳಸಿ ಪಲ್ಲವಾ
ಅಲ್ಲೇ ಅಲ್ಲೇ ಬಾಗುವನವಾ ಬಲ್ಲವಾ ॥ ಧನ್ಯ ವೃಂದಾವನಾ..........
೫
ಕಿವಿಯಲ್ಲೇ ಕಣ್ಮೂಡುವವು
ನೃತ್ಯದಂದ ಬರಮಾಡುವವು
ಬಾ ಕಿಶೋರಾ ಹರೀ
ರೂಪವ ತೋರಾ ॥ ಧನ್ಯ ವೃಂದಾವನಾ..........

೬
## ಕೋಲಾಟ




ಅವನಾ-ಇವನಾ-ಯಾವನಾ
ಆದಾವನಾ ವೃಂದಾವನಾ
ಯಾರು ಭೂ ಯಾರು ಹೂ
ಯಾರಿಗೆ ಸು ವಾಸಾ
ಯಾರು ಭೋ ಯಾರು ಹೋ
ಯಾರಿಗೆ ಸುವಾಸಾ
ಯಾರು ಭೋ ಯಾರು ಹೋ
ನಾರೀ ನವಮಾಸಾ
ಮುದ್ದಿಗೋ ಮುಖವಗೋ
ಗೋಚರಿಸಿ ಚಾರಿ
ಬಲವಗೋ ಹೊಲವಗೋ
ಭವ ಬಾರಿ ಬಾರಿ
ಹೃದಯಕೋ ಉದಯಕೋ
ರಾಧಾನುರಾಧಾ
ಭಕ್ತಿಗೋ ಶಕ್ತಿಗೋ
ಜೀವನಾ ಮೋದಾ ॥ ಧನ್ಯ ವೃಂದಾವನಾ.........

೭
ಯಾವ ಗೋವಳರ ಭಾಷೆಯಲಿ
ಗೋಪಿಯರು ಹಾಡಿದರೊ
ಯಾ ರಾಗದಲಿ ಹಾಡಿದರೊ ?
ವೇಣುವಾದನವ ಶ್ರೀಕೃಷ್ಣ
ಯಾ ರಾಗದಲಿ ಮಾಡಿದನೋ ?
ಆ ಗೀತ, ಆ ರಾಗ, ಆ ನೃತ್ಯ-ಕೃತಕೃತ್ಯ.
ಭಾರತದ ವಿವಿಧ ಭಾಷೆಗಳಲ್ಲಿ ಬಹುರೂಪ ತಾಳಿಹುದು.
ವೃಂದಾವನದಲಿ ಅಲೆವ ಎಲೆ ಎಲೆ
ತುಲಸೀ ಪತ್ರದ ಬೆಲೆS
ವೃಂದಾವನದಲಿ ಸತಿಯ ಕಣ ಕಣಾ
ಪ್ರೇಮದ ಆಭರಣಾ
ಯಮುನಾ ತೀರದ ಸೀಕರ ಪವನಾ
ರಾಧಾ ಮಾಧವ ಹೃದಯ ಗ್ರಥನಾ
ಗೋಪೀ ಚಿನ್ಮಥನಾ ॥ ಧನ್ಯ ವೃಂದಾವನಾ.........

೮

## ಗೆಜ್ಜೆ ಕೋಲಾಟ




ಓ ಶಾಮುನಾ ಮನಃಕಾಮುನಾ
ಅನನ್ಯ ಇಂದಿನ ದಿನಾ
ಧನ್ಯ ವೃಂದಾವನಾ.
ದೇವ ದೇವನಾ, ಜೀವ ಜೀವನಾ
ಭಾವಭಾವನಾ
ಧನ್ಯ ವೃಂದಾವನಾ.
ಎಲ್ಲರ ಹೃದಯದ ನವನೀತಾ
ಜೀವಾಭಾವಾಗೀತಾ
ಕುಣಿತಾ ಕೋಲಿನ ಗುಣಿತಾ
ರಾಸಲೀಲೆಯೋ, ಭಾಸಲೀಲೆಯೋ
ಹಾಸಲೀಲೆಯೋ
ಇದು ಮಾನವ ಲೀಲಾ! // ಧನ್ಯ ವೃಂದಾವನಾ..........
೯
ಇದು ಭಕ್ತಿ ಲೋಲ, ಸುಖ ಯುಕ್ತಿ ಮೂಲ
ಇದು ಸದಾಕಾಲ, ಇದು ಪ್ರಾಣ ತಾಲ
ಇದು ಮುಕ್ತಿಯ ಕುಲಶೀಲಾ.
ಇದು ಕರ್ಮಕ್ಕನುಕೂಲಾ
ಇದು ಧರ್ಮ ಸಹಿತವೋ ಬಲಾ
ಅಬಲಾ ಅಬಲಾ ನಾರೀವೃಂದಾ
ಗೋಪೀತನಯಾ ಗೋವಿಂದಾ
ಜೀವ ಸಂನಿಭಾ ಋಷಭಾ
ಶ್ರೀಕಾರಾ। ನಭಾಕಾರಾ
ಧನ್ಯ ವೃಂದಾವನಾ..........

ಅಜರ, ಅಮರ, ಈ ರಾಸಲೀಲೆ. ಯಮುನೆಯಾ ದಡದಲ್ಲಿಯೇ ಮುಗಿಯಲಿಲ್ಲ. ಆ ಬಳ್ಳಿ ಹಬ್ಬಿದೆ ಹಳ್ಳಿಹಳ್ಳಿಯ ಹೃದಯದಲಿ

ಗೋಲೋಕನಾಥಾ, ಗೋಪೀಶ, ಈಶ
ಮಮ ಪ್ರಾಣ। ಪ್ರಾಣವಲ್ಲಭಾ
ನಾ ವಿಶಾಖೆಯೋ-ನೀನು ಮಾಧವಾ
ಒಲಿದೆ ಸಹಜ ದುರ್ಲಭಾ

## ಕೋಲಾಟ

“ಗೊಲ್ಲತಿ। ಗೋಪಮ್ಮಾ। ಗೋಪೂಜೆ। ಮಾಡ್ಯಾಳೆ”
ಗೋಪಾಲ ಕೃಷ್ಣನ್ನ। ಸ್ಮರಣೆಯಲಿ ॥ ಪಲ್ಲವಿ ॥



೧
ಹಳ್ಳಿಪಳ್ಳಿಗೆ ಕೋಲು। ರಂಗನಾಟದ ಸಾಲು
ಕುಣಿಯಲಿ। ಶ್ರೀಹರಿಯು। ಕರುಣೆಯಲಿ
ಭಾರತದ। ಹದಿನೆಂಟು। ದಿಕ್ಕಿಗು। ಈ ನಂಟು
ಕಟ್ಟಲಿ। ಮುಡಿಗಂಟು। ಧರಣಿಯಲಿ॥
೨
ಧನ್ಯ ವೃಂದಾವನಾ। ಧನ್ಯ ವೃಂದಾವನಾ
ಹೃದಯ-ವೃಂದಾವನ ಕಿರಣದಲಿ
ಧನ್ಯ ವೃಂದಾವನಾ.

- ಶತಮಾನ : ೧೭/ಪ್ರ : ೨೦೦೪

---

ಭಾವ : ಶ್ರೀ ಕೃಷ್ಣ ಚರಿತ್ರೆಯನ್ನು ಆಧರಿಸಿ ರಚಿಸಿದ ಬಾನುಲಿ ರೂಪಕ. ಧಾರವಾಡ ಆಕಾಶವಾಣಿಯಿಂದ ಪ್ರಸಾರವಾಗಿತ್ತು.

ಶಬ್ದಾರ್ಥ : ಬಾಹಿರ=ಹೊರಗಿನ, ಬಹಿಷ್ಕರಿಸಲ್ಪಟ್ಟ ಪರಮ=ಉತ್ಕೃಷ್ಟ ಪ್ರಮುಖ, ಪರಮಾತ್ಮ. ಸಂವಿತ್ತು-ಸಂವಿತ್ತಿ=ಜ್ಞಾನ, ಪ್ರತ್ಯಕ್ಷ ಅರಿವು. ಪಡಿನುಡಿ=ಪ್ರತಿನುಡಿ, ಪ್ರತಿಧ್ವನಿ. ಪವಡಿಸು=ಮಲಗು, ಒರಗು. ಭೀರು=ಹೆದರುವ, ಅಂಜುವ, ಹೇಡಿ. ವಡವಾನಲ-ಬಾಡಬ=ಸಮುದ್ರದಲ್ಲಿ ಅಡಗಿದ ಬೆಂಕಿ, ಪ್ರಳಯಾಗ್ನಿ ದಗ್ಧ=ಸುಟ್ಟ, ಸುಡಲ್ಪಟ್ಟ ತೊರೆ=ಮೊಲೆಯಲ್ಲಿ ಹಾಲು ತುಂಬು, ಪಕ್ವವಾಗು, ಬಿಡು, ತ್ಯಜಿಸು. ಅಧಿಯಜ್ಞ=ಯಜ್ಞದ ಸಂಬಂಧೀ, ಮುಖ್ಯಯಜ್ಞ ಯಜ್ಞಾಭಿಮಾನಿ ದೇವತಾ-ಶ್ರೀಕೃಷ್ಣ ಪರಮಾತ್ಮಾ. ತುರೀಯ=ನಾಲ್ಕನೆಯ. ಇಷ್ಟಿ=ಇಚ್ಛೆ, ಯಜ್ಞ ವ್ರಾತ್ಯ=ಕೆಟ್ಟ ಮನುಷ್ಯ, ಭ್ರಷ್ಟ ಅಂಬುದ=ನೀರನ್ನು ಕೊಡುವ, ಮೋಡ. ಜಗುಳ್=ಜಾರು, ಕಳಚಿಬೀಳು, ಕುಸಿಯು. ತುಪ್ಪುಳ-ತುಪ್ಪಟ-ತುಪ್ಪಳ=ಗರಿ, ರೋಮ, ಮೃದುವಾದ ಕೂದಲ. ವ್ಯಾಕುಲ=ಗಾಬರಿಗೊಂಡ, ಆತುರಗೊಂಡ, ಚಿಂತೆ ಹಾಗೂ ದುಃಖ ಉಳ್ಳ ಸ್ಥಿತಿ. ಚಾರಿ=ನರ್ತನದ ಒಂದು ಪ್ರಕಾರ, ತಿರುಗಾಡುವ, ಗುರಿ, ಹಂಚಿಕೆ. ಚಾರು =ಸುಂದರ. ಸೀಕರ=ಹನಿಮಳೆ, ಶೀಕರ=ತುಂತುರ, ನೀರ ಹನಿಹನಿ.

ವಿಶೇಷ : ಜಾಲಂದರ, ವೃಂದಾ, ತುಲಸಿ, ಕಾತ್ಯಾಯಿನಿ, ಯಮ, ಯಮಿ ಈ ಪಾತ್ರಗಳ ವೈಶಿಷ್ಟ್ಯ ವೇದ ಹಾಗೂ ಪುರಾಣಗಳಿಂದ ಅಭ್ಯಸಿಸಬೇಕು.

# ೩೭ ಪ್ರತ್ಯಕ್ಷ

೧
ಮನೋನ್ಮನೀ
ಬಾರೆ ಬಾ ಮನೋನ್ಮನೀ
ಮಹಾಮನರ ಕಣ್ಮಣೀ
ನಿನ್ನ ಕಣಗೆ ನೀನೇ ಕುಣೀ
ದೇವದೇವ ನಿನ್ನ ಧಣಿ
ಬಾರೆ ಬಾ ಮನೋನ್ಮನೀ.
೨
ಹುರುಳಿನ ಅರಳರಳಿಸಿ
ಮಾಲೆ ಮಾಡಿ ಕೊರಳಿಸಿ
ಹೃದಯವೀಣೆ ಬೆರಳಿಸಿ
ಕುಣಿಸು ಜಗಕಲಾಪಿನೀ
ಬಾರೆ ಬಾ ಮನೋನ್ಮನೀ
೩
ಒಲವು ಬಳ್ಳಿಯಾಗಿರೆ
ಜೀವ ಅತ್ತ ಬಾಗಿರೆ
ನಿನ್ನ ಪಾದ ತಾಗಿರೆ
ತುಂಬು ವಿಶ್ವವಾಹಿನೀ
ಬಾರೆ ಬಾ ಮನೋನ್ಮನೀ.
೪
ನಿನ್ನ ಪ್ರಾಣ ಅರ್ತಿಸಿ
ಚೆಲುವನ್ನೇ ಮೂರ್ತಿಸಿ
ಬಯಕೆಗಳನು ಪೂರ್ತಿಸಿ
ಬರಲಿ ದೇವ-ದ್ವೀಪಿನೀ
ಬಾರೆ ಬಾ ಮನೋನ್ಮನೀ.
೫
ಬಾಳಿನ ಒಡಲೊಳಿತಿಗೆ
ಭರತಿಯಾಗಲೊಮ್ಮೆಗೆ
ಪಯಣ ಬೆಳೆಸೆ ನೆಮ್ಮೆಗೆ
ಧ್ರುವವಾಗುತೆ ಕರೆಯೆ ನೀ
ಬಾರೆ ಬಾ ಮನೋನ್ಮನೀ

ಒಕ್ಕೊರಲಿನ ಗೀತಿಗೆ
ಪ್ರೇರಕವಿಹ ರೀತಿಗೆ
ಜೀವನದೀ ನೀತಿಗೆ
ಸ್ವಚ್ಛಂದವಿಧಾಯಿನೀ
ಬಾರೆ ಬಾ ಮನೋನ್ಮನಿ.

- ಹೃದಯ ಸಮುದ್ರ-೧೫/ಪ್ರ : ೧೯೫೬

---

ಭಾವ : ಈಶ್ವರ ಸ್ವರೂಪದಲ್ಲಿ ಮನಸ್ಸು ಐಕ್ಯವಾಗುವುದಕ್ಕಾಗಿ ಮಾಡಿದ ಪ್ರಾರ್ಥನೆ.

ಶಬ್ದಾರ್ಥ : ಕಣಿ=ಕಂಡದ್ದು,ಭವಿಷ್ಯ. ಧಣಿ=ಒಡೆಯ. ಕಲಾಪಿನೀ=ಹೆಣ್ಣುನವಿಲು.

ವಿಶೇಷ : ಪ್ರತಿ ಅಕ್ಷ-ಎಂದರೆ ಕಣ್ಣಿಗೆ ಇದಿರಾಗಿ, ವಸ್ತುವಾಗಿ ಕಾಣುವದು. ಕಣ್ಣಿಗೆ ಪ್ರತ್ಯಕ್ಷ. ಹೀಗೆಯೇ ಬೇರೆ ಬೇರೆ ಇಂದ್ರಿಯಗಳಿಗೆ ಅವವುಗಳ ವಿಷಯ ಪ್ರತ್ಯಕ್ಷವೆ. ಕಿವಿಗೆ ಶಬ್ದ, ನಾಲಿಗೆಗೆ ರುಚಿ, ಮೈಗೆ ಸ್ಪರ್ಶ, ಹಾಗೆಯೆ ಮನಸ್ಸಿಗೆ ಸಂಕಲ್ಪಗಳು ವಿಕಲ್ಪಗಳು ಪ್ರತ್ಯಕ್ಷ, ಬುದ್ದಿಗೆ ಅದರ ಆ ಆ ಕಾಲದ ನಿಶ್ಚಯವು ಪ್ರತ್ಯಕ್ಷ, ಅಹಂಕಾರಕ್ಕೆ ತನ್ನ ದೇಹಾತ್ಮ ಬುದ್ಧಿ ಪ್ರತ್ಯಕ್ಷ. ಚಿತ್ತಕ್ಕೆ ತನ್ನ ನೆನವು ಮರೆವು ಪ್ರತ್ಯಕ್ಷ. ಅಂತಃಕರಣಗಳಲ್ಲಿಯೇನು? ಇಂದ್ರಿಯಗಳಿಗೇನು?-ಒಂದು ದ್ವಂದ್ವ-ಸಂಧಿಪ್ರಕಾಶದಲ್ಲಿ ತನ್ನ ವಿಷಯಜ್ಞಾನವಾಗುತ್ತದೆ. ಎರಡು ಕಣ್ಣಿಗೆ ಕಾಣುವ ವಸ್ತು ಒಂದೇ. ಎರಡು ಕಿವಿಗೆ ಕೇಳಿಸುವ ಶಬ್ದ ಒಂದೇ. ಅವುಗಳಿಗೆ ದ್ವಿಧಾವೃತ್ತಿ ಮೂಲತಃ ಇಲ್ಲ. ಆದರೆ ಇಂದ್ರಿಯಾರ್ಥಗಳಂತೆಯೆ ಅಂತಃಕರಣಾರ್ಥಗಳೂ, ಕತ್ತಲೆ-ಬೆಳಕಿನ ಸಂತಾನ. ಕತ್ತಲೆ ಬೆರೆಯದ ಬೆಳಕಲ್ಲ ಅದು. ಶುದ್ಧ ಚಿತ್ತಕ್ಕೆಯೆ ಶುದ್ಧ ಸತ್ತ್ವದ ಪ್ರಕಾಶ ತೆರೆಯುವದು. ಈ ಪ್ರಕಾಶದ ಪ್ರಭುವಾಗಬೇಕಾದರೆ ಸತ್ತ್ವವನ್ನೂ ಅರಲಿನಂತೆ ಮಿದ್ದಿ ಮೂರ್ತಿ ಮಾಡಬಹುದಾದ ತತ್ತ್ವದ ಜಾಗೃತಿ ಬೇಕು.

## ೩೮ ಶಾಂಭವೀ

೧

ಶಂಭೂ / ಸ್ವಯಂಭೂ / ಭವಿತಾ / ಭಾವಿತಾ
ಅಭಿನಯಿತಾ / ಮುದ್ರಾಂಕುರಿತಾ / ತಾರಿತಾ
ತರತಮಿತಾ / ಪ್ರಭೂ / ವಿಭೂ / ಸಂಭೂ
ಅಧಿಭೂತಾ / ಆಧ್ಯಾತ್ಮಿಕಾ / ದೇವಿಕಾ
ವಸುಧಾ / ವಾಸುವಾಸಾ । ಸುವಾಸಾ
ಯರಲವಾ । ವಿಶೇಷಾ । ಸಾ

೨

ಹಳಿತಾ । ಅಹಲ್ಯಾ । ರಾಮಾ । ವಿರಮಿತಾ । ನಮಿತಾ
ಗೌತಮತ್ಯಕ್ತಾ । ಅವಿಶೇಷಾ । ಸ್ವಯಂ ವ್ಯಕ್ತಾ
ಅರ್ಧೋನ್ಮೇಷಾ । ಮಿಥುನಿತಾ । ವೈದೇಹಿ । ದೇಹೀ
ಕುಶಲವ ಮಾತಾ । ಜಾತವೇದಾ । ಯಜ್ಞಕ್ಷೇತ್ರೇ । ಜ್ಞಾತಾ
ಸಂಪದಪ್ರಾಪ್ತಾ । ಆಪ್ತಾ । ಸ್ವಯಂ ತೃಪ್ತಾ । ಶಾಂಭವೀ
ಭೋ । ಭೋ । ಭಿಕ್ಷಾಂದೇಹೀ

- ಮರ್ಯಾದೆ : ೪/ಪ್ರ : ೧೯೬೬

---

ಭಾವ : ಶಾಂಭವಿ-ಪಾರ್ವತಿಯ ಸ್ತುತಿ.

ವಿಶೇಷ : ಬೇಂದ್ರೆ ಕಾವ್ಯದ ಔಪನಿಷದಿಕ ರೀತಿ ಇದು. ಪ್ರತಿ ಶಬ್ದದಲ್ಲಿ ರಾಮಾಯಣದ ಹರವು ಇದೆ. ಇದೇ ಬಗೆಯ ಇನ್ನೊಂದು ರೀತಿ ಮರ್ಯಾದೆ ಕವನ : 'ನೀ ನಾದಿನೀ'-'ದೇವತಾ ಸರಸ್ವತಿ'. ನಿವೃತ್ತಿನಾಥರು ತಮಗೆ ಲಭಿಸಿದ ಶಾಂಭವೀ ಶಕ್ತಿಯ ದೀಕ್ಷೆ ಶ್ರೀ ಜ್ಞಾನೇಶ್ವರರಿಗೆ ಕೊಟ್ಟ ಅನಂತರದಲ್ಲಿ ಅವರಿಂದ 'ಜ್ಞಾನೇಶ್ವರಿ' ಮಹಾಕಾವ್ಯದ ರಚನೆ ಆಯಿತು ಎಂಬ ಹಿನ್ನಲೆ ಈ ಕವನ ಸೃಷ್ಟಿಗೆ ಕಾರಣವಾಗಿರಬಹುದು. ಈ ಕವನದ ಛಂದಸ್ಸು-ಸಾಮಛಂದಸ್ಸು. ಆದುದರಿಂದ ಇದರ ವಾಚನ ಸಾಮಗಾನದಂತೆ ಏರಿಳಿತ ಸಹಿತ ಮಾಡಿ ಆನಂದ ಪಡೆಯಬೇಕು.

## ೩೯ ಸಪ್ತಕಲಾ

೧

ಸ್ಪಂದಽ ಬಂಧಾ ಸ್ವಚ್ಛಂದಾ
ಸ್ವೈರಾಽ ನಿರ್ವೈರಾಽ ಸಹಜಽ ಅಂದಾಽ
ಆಡಲೂ ಬರದಾಽ ಸುಮ್ಮನಿರದಾಽ
ಕಾದುಽ ಕಾದುಽ ನಾದಾಽ
ಭೇದಾಽ ಅಭೇದಾ, ಮೀರಿ
ಭಾವಽ ನೋವಽ ತಾಳದೇ
ತನ್ನಽ ತಾ ನುಂಗೀ
ಎದೆಯೊಳಗಿಂಗೀ
ಸ್ವಾತಂತ್ರ್ಯಽ ಪಡೆಯುವದಣ್ಣಽ
ಅರ್ಕಽ ಚಂದ್ರಽ ಸಾಂದ್ರವಾಗಿಽ
ವಾಚಾತೀತಽ ಗೀತಽ
ಸ್ವರಮೇಳಽ-ತಾಳಽ-ರಾಗಽ
ರೀತಿಯಲ್ಲಿ
ಆತ್ಮಽ ಪ್ರೀತಿಯಲ್ಲಿ,
ಸ್ವಾತಂತ್ರ್ಯಽ ಪಡೆಯುವದಣ್ಣಽ

೨

ಇದೋ ಅರೆವೋ ಮರೆವೋ
ಅವಳಿಽ ಜವಳಿಽ ತರವೋ
ಧ್ರುವಾಸ್ಮೃತಿಯಾ ಕರೆವೋ
ಆಕಾಶ ರೇಖಾ ಲೇಖಾ
ಹೃದಯಾಂತಃಕೇಕಾ
ಭಾವಽ ನೋವಽ ತಾಳದೇ
ಅದೃಶ್ಯ ಹೊಳೆದೂ
ಕಾಣ್ಕೆಽ ರೂಪಽ ತಳೆದು
ಸ್ವಾತಂತ್ರ್ಯ ಪಡೆಯುವದಣ್ಣಽ
ಟಂಕಾಽ ಆತಂಕಾ ಸರಿಸಿಽ
ವ್ಯಂಗ್ಯಾಽ ವಕ್ರಽ ಬೆರೆಸಿ,
ಎಲ್ಲೂಽ ಕಲ್ಲೂಽ ಚಿತ್ರಽ
ಮೂರ್ತಿಯಲ್ಲಿ
ಕೀರ್ತೀಽ ಆರ್ತಿಯಲ್ಲಿ.
ಸ್ವಾತಂತ್ರ್ಯಽ ಪಡೆಯುವದಣ್ಣಽ

೩

ತಂತ್ರಽ ಅರಿಯದೇಽ
ಮಂತ್ರಽ ಮಣಮಣಗುಟ್ಟೀ
ಕೆಟ್ಟಽ ಯಂತ್ರದಂತೇ
ಕೈತಪ್ಪಿಽ ಎತ್ತೆತ್ತೊ
ತತ್ತರಿಸುತ್ತಿರಲು
ಭಾವಽ ನೋವಽ ತಾಳದೆ,-
ಮೌನಽ ಕೂಡಿಽ
ಮೌನಽ-ಮೂಡಿಽ
ಸ್ವಾತಂತ್ರ್ಯಽ ಪಡೆಯುವದಣ್ಣಽ
ಆವೇಶಽ-ಅಂಗಾಂಗಽ-ತುಂಬಿಽ
ನರನರಽ ನಲುಗಿಽ ಅಲುಗೀಽ
ಗೊಂದಣಽ-ತಾಂಡವಽ ಲಾಸ್ಯಽ
ನೃತ್ಯದಲ್ಲೀ
ಇಲ್ಲೀಽ ಮರ್ತ್ಯದಲ್ಲಿ
ಸ್ವಾತಂತ್ರ್ಯಽ ಪಡೆಯುವದಣ್ಣಽ

೪

ಕರ್ಮಽ ಅಕರ್ಮದ ತಂತ್ರಽ
ಫಲವಿಫಲತೆಯೊಳತಂತ್ರಽ
ಈಶ್ವರೀ ಯಂತ್ರ-
ಸ್ವರೂಪಽ ತೋರ್ಪಽ ದೀಪಽ
ಮಿಂಚಿಗೂ ಸಮೀಪಽ
ಭಾವಽ ನೋವಽ ತಾಳದೇಽ
ಪ್ರಕೃತಿಯೂಽ ದುಡಿದೂಽ
ದೈವಽ ತಡೆದೂಽ
ಸ್ವಾತಂತ್ರ್ಯಽ ಪಡೆಯುವದಣ್ಣಽ
ಅವಿದಿತಽ ವಿದಿತಽ ಉದಿತಾಽ
ಸಾತ್ವಿಕಾಽ-ಭಾವಾಽ-ಜೀವಾಽ
ಅಭಿನಯಽ ವಚನಽ-ನಾಟ್ಯಽ-
-ಕೃತಿಯಲ್ಲಿ
ದೃಷ್ಟೀಽ ಶ್ರುತಿಯಲ್ಲಿ.
ಸ್ವಾತಂತ್ರ್ಯಽ ಪಡೆಯುವದಣ್ಣಽ.

೫
ಶಾಂತಾಽ ಶಿವಾಽ ಸೀಮಾತೀತಾಽ
ಸತ್‌ಶಕ್ತೀ ಸಹಿತಾ
ಚೇತಾಽ ಜಗನ್ನೇತಾ
ಸ್ವಾಲಿಂಗಿತ ದ್ವೈತಾ ಅದ್ವೈತಾ
ಸಂತತಾಽ ಅನಂತಾಽ
ಭಾವಽ ನೋವಽ ತಾಳದೇ
ಬಯಕೆಽ ಬೇನೆಗೆಽ ಬೆಂದು.
ತನ್ನೊಳು ತಾ ನಿಂದು
ಸ್ವಾತಂತ್ರ್ಯಽ ಪಡೆಯುವದಣ್ಣಽ
ಬೀಜಽ ಬಿಂದೂದ್ಭೂತಾ
ಕಲಲಾ ಜಾತಾ
ಇದು ಅಕಲಽ ವಿಕಲಽ ಸಕಲಽ
ಸುಕಲೆಯಲ್ಲಿ
ಈಽ ಕಳೇವರದಲ್ಲಿ
ಸ್ವಾತಂತ್ರ್ಯಽ ಪಡೆಯುವದಣ್ಣಽ.
೬
ಜನ್ಮಾಽ ಜನ್ಮಾಂತರ ತರತಮಭಾವಾ
ಪ್ರಕಟಸ್ವಭಾವಾ
ಪ್ರತಿಸರ್ಗೋತ್ಸುಕತಾ ಪ್ರತಿಭಾ
ನಿರಾಲಂಬಾ ಸ್ವಯಂಭಾ
ಕಲ್ಪನಾಗರ್ಭಿತ ಬಿಂಬಾ
ಭಾವಽ ನೋವಽ ತಾಳದೇ
ಅನನ್ಯಾ ಈಶ್ವರ ಪ್ರಭವಾ
ಕಲಾ ವಿಭವಾ
ಸ್ವಾತಂತ್ರ್ಯಽ ಪಡೆಯುವದಣ್ಣಽ
ಲೋಕಾಽ ಲೋಕ ಪ್ರಕಾರಾ
ದೇವತಾಕಾರಾ
ಇದು ದರ್ಶನ ಮುಖರಾ ಶಿಖರಾ
ವಾಸ್ತುವಲ್ಲಿ
ಗುಡಿ ಗೋಪುರದಲ್ಲಿ
ಸ್ವಾತಂತ್ರ್ಯಽ ಪಡೆಯುವದಣ್ಣಽ.

೭

*ಸಕಲಾ೨ ಸಿದ್ಧಾ೨ ಸರಸ್ವತಿ ವೀಣಾಪಾಣಿ*
*ಪಶ್ಯಂತಿಯ ವಾಣಿ*
*ಛಂದಾರೂಢಾ ನವೋಢಾ*
*ಮುಗ್ಧಾ, ರಸಿಕಾ, ಅನೂನಾ*
*ಧ್ವನಿತ ಪ್ರಾಣಾ*
*ಭಾವ೨ ನೋವ೨ ತಾಳದೇ*
*ಸ್ಫೂರ್ತಾ, ಅಮೂರ್ತಾ, ಆವಿರ್ಭೂತಾ*
*ಭವಮಂಥನ ಮಂತ್ರಾ,*
*ಸ್ವಾತಂತ್ರ್ಯ೨ ಪಡೆಯುವದಣ್ಣ೨*
ಅಕಾಮ್ಯಾ ರಮ್ಯಾ
ಶ್ರೋತ್ರಿಯಗಮ್ಯಾ
ಭವ್ಯ೨ ನವ್ಯ೨ ಹೃದಯದ್ರವ್ಯ.
ಕವಿಯಲ್ಲಿ
ದಿವ್ಯ೨ ಕಾವ್ಯದಲ್ಲಿ.
ಸ್ವಾತಂತ್ರ್ಯ೨ ಪಡೆಯುವದಣ್ಣ.

- ಸೂರ್ಯಪಾನ : ೨/ಪ್ರ : ೧೯೫೬

---

ಭಾವ : ಸಂಗೀತ, ಶಿಲ್ಪ, ನೃತ್ಯ, ನಾಟಕ, ಜೀವನ ವಾಸ್ತು, ಸಾಹಿತ್ಯ ಇವು ಸಪ್ತಕಲೆಗಳು. ಈ ಕಲಾ ಬಳ್ಳಿಯು ಮಾನವನ ಬಹುಮುಖಿ ಅಭಿವೃದ್ಧಿಯ ಸಪ್ತಕಲಗಳಲ್ಲಿ ಗುಮ್ಮಟದಲ್ಲಿ ನಿನಾದಗೊಂಡು ಸಾಮಗಾನವಾಗಿ ಕೇಳಿಸಿದೆ.

ಶಬ್ದಾರ್ಥ : ಟಂಕ-(ಟಂಕೆ) ಉಳಿ, ಕಲ್ಲುಳಿ. ಗೊಂದಣ-ಸಮೂಹ. ಕಲಲಾ-ಭ್ರೂಣ. ನವೋಢಾ-ಮದುವೆಯಾದ ನವ ವಧು.

# ೪೦ ಗೋವತ್ಸಲೀಲೆ

೧

*ಗೋವತ್ಸಲೀಲೆ ತೊರೆಕರೆಯ ಮೇಲೆ ವನವಾಟ ಸೆಜ್ಜೆಸಾಲೆ.*
*ಕೊಳಲೆಲ್ಲೊ ಉಲಿಯೆ ಹರಿನೀರು ನಲಿಯೆ ಎಲ್ಲೆಲ್ಲು ಭೃಂಗಮಾಲೆ.*

೨

ಇದು ಭೋಗಭೂಮಿಯೇ ಯೋಗಭೂಮಿ ಅರಿದೆಂದು ನೋಡುತಿದ್ದೆ.
ಕಲ್ಪನೆಯ ಬೊಗರಿ ತುದಿಬೆರಳ ತಿಗರಿ ಓ ಆಡುತಿತ್ತು ನಿದ್ದೆ.

೩

*ಹಸಿ ಹಾಲು ಕೂಡ ಬಿಸಿ ಎಂದು ಬಂದ-ತಾ ಬಾಲ, ಕೃಷ್ಣನಾಗಿ*
*ಕೆನೆಕೆನೆಯು ಎಂದು ಮುಖ ಚಾಚಿ ನಿಂದ ಆ ತಾಯಿ ಕೆನ್ನೆಗಾಗಿ.*

೪

ಬೆನ್ನೆಗೆ ಒರಗಿ ಹೆಗಲಲ್ಲಿ ಬಾಗಿ ಚಾಚಿತ್ತು ವತ್ಸವಲ್ಲಿ.
ಹೃದಯ ಕಂಚುಕವು ತೊಯ್ದು ಹನಿಸುತಿದೆ ತೊರೆದ ಹಾಲಿನಲ್ಲಿ.

೫

ಸೋಮ ತಾರೆಯರ ಮೈತ್ರಿ ಕೂಡಿತ್ತು ಶಕ್ತಿ ನೇತ್ರದಲ್ಲಿ.
ಪುಷ್ಪದತ್ತ ಅರಳಿದನು ಒಲಿವಿನಲಿ ವಿಷದ ಪಾತ್ರದಲ್ಲಿ.

೬

ಸತಿ ಮುಖದ ಸುಖಕೆ ಶಿವನಟ್ಟಹಾಸ ಕಡಲಾಗಿ ಉಕ್ಕುತಿತ್ತು.
ಧರ್ಮರೂಪ ವಾಕ್ಕರಣದಿಂದ ಶಿವಚರಣ ನೆಕ್ಕುತಿತ್ತು.

೭

ಮಲ್ಲಿಕಾರ್ಜುನನ ಶಿಖರದಲ್ಲಿ ಮೂಡಿತ್ತು ಚಂದ್ರಬಿಂಬ,
ಬಯಲಾಗಿ ನಿಂತ ನಿರ್ವಾಣಮೂರ್ತಿ ನಗುತಿತ್ತು ಬಾಯಿತುಂಬ.

- ಸೂರ್ಯಪಾನ-೧೫/ಪ್ರ : ೧೯೫೬

---

ಭಾವ : ಕಣ್ಣಿನೊಳಗಿನ ಪ್ರೇಮಕ್ಕೆ ಸೋಮ ಮತ್ತು ತಾರೆಯರ ಮೈತ್ರಿಯ ಶಕ್ತಿ ಇರುತ್ತದೆ. ಇದು ಕೃಷ್ಣ ಮತ್ತು ಯಶೋದೆ ಹಾಗೂ ಶಿವ ಮತ್ತು ಅವನ ಪ್ರತಿಬಿಂಬದಲ್ಲಿ ಫಲಿಸುತ್ತದೆ. ಕೃಷ್ಣ ಮತ್ತು ರಾಧಾ ಹಾಗೂ ಶಿವ-ಶಕ್ತಿ ಇವರ ಪ್ರೇಮಕ್ಕೂ ಆ ಶಕ್ತಿ ಇದೆ.

ಅರ್ಥ : ತಿಗರಿ-ತಿಗುರಿ=ಕುಂಬಾರನ ಚಕ್ರ. ಕಂಚುಕ=ಉದ್ದವಾದ ನಿಲುವಂಗಿ.

ವಿಶೇಷ : ಶಿವನು ವಿಷದ ಪಾತ್ರೆಯಲ್ಲಿ ತನ್ನ ಪ್ರತಿಬಿಂಬ ಕಂಡಾಗ ಅದೇ ಪುಷ್ಪದತ್ತನಾಗಿ ಹೊರಹೊಮ್ಮುತ್ತದೆ. ಇವನು ಶಿವನ ಮಾನಸಪುತ್ರ.

# ೪೧ ಕಲ್ಪವೃಕ್ಷ ವೃಂದಾವನಂಗಳಲಿ

*೧*

*ಕಲ್ಪವೃಕ್ಷ ವೃಂದಾವನಂಗಳಲಿ*
*ಹೇಗೋ ಹೊಕ್ಕು ಬಂದೆ।*
*-ಅಲ್ಲ ಎಚ್ಚರವು ಅಲ್ಲ ನಿದ್ದೆಯೂ*
*ಏನೋ ಯೋಗದಿಂದೆ।*
*ಸುಳಿದೆ ಅಲ್ಲಿಯೂ ನನ್ನ ಸಹಜಸಖಿ*
*ನೀನು ಹಿಂದೆ ಮುಂದೆ*

*೨*

*ಕೇಳು ಕಮಲಮುಖಿ, ಏಳು ಜೀವಸಖಿ*
*ಕಂಡ ಸುಖದ ಕೀಲ*
*ಬಾಲ ಸುತ್ತಿ ಹೆಡೆಯೆತ್ತಿ ತೂಗುತಿರೆ*
*ಭೋಗಸುಪ್ತಕಾಲ*
*ಈ ತೋಳಿನಲಿ ಹೋಳು ಮೈಯಿರಲು*
*ಬೀಸಿತಿಂದ್ರಜಾಲ.*

೩

ಕತ್ತಲಲ್ಲಿ ಕಣ್ಣಾಗಿ ನೋಡುತಿದೆ
ನೂರು ಇಂದ್ರರಂತೆ
ಬೆಳಕುನಾಯಿ ಮೈಮೂಸಿ ಬರುತಲಿದೆ
ಶುಕ್ರ ಚಂದ್ರರಂತೆ
ಕಂಪೆ ಕಂಪಲ್ಲಿ ಗಾಳಿ ಹೂತಿತೋ
ಏನೊ ಎನ್ನುವಂತೆ

೪

ಮನದ ಚಿತ್ರಗಳೆ ಮೈಯ ತಾಳಿದೊಲು
ಗೆಳತಿ ಗೆಳೆಯರಾಗಿ
ಸರಸ ವಚನಗಳ ಕರಗಿಸುತ್ತಿರಲು
ಜೀವರಸಗಳಾಗಿ
ಹೊಮ್ಮಿತದರ ಸವಿ ಪ್ರಣವನಾದದೊಳು
ಪ್ರಣಯನಾದವಾಗಿ

೫

ಅಲ್ಲಿ ಎಲ್ಲರಿಗೂ ನಾಲ್ಕು ಕೈಗಳೇ
ಮಾಟ ತಪ್ಪದಿಹವು
ಎರಡು ಒಪ್ಪಿಸಿವೆ ಕುಶಲ ಕಲೆಗಳಲಿ
ಎರಡು ಅಪ್ಪಿ ಇಹವು
ಎಲ್ಲರಲ್ಲಿ ತಲ್ಲೀನರಾಗಲೋ
ಜೀವ ಜಪ್ಪಿಸಿಹವು

೬

ಕಾಮನ ಬಿಲ್ಲಿಗೆ ಬಾಣ ಹೂಡಿದೊಲು
ಕಂಗಳೆಸೆಯುತಿಹವು
ತೋಳು ತೋಳಿನಲಿ ಕಸೆಯ ಮಾಡಿದೊಲು
ಎದೆಯ ಬೆಸೆಯುತಿಹವು
ಪ್ರಾಣದುಕ್ಕಿನಲಿ ಪ್ರೀತಿಜ್ಯೋತಿಗಳು
ಮಿಂಚಿ ಮಸೆಯುತಿಹವು

೭

ಜೇನು ನೊಣಗಳೊಲು ಹಾವಭಾವಗಳು
ಇನಿದು ಜಿನುಗುತಿಹವು
ಹೊನ್ನಿಹುಳಗಳೊಲು ಓರೆನೋಟಗಳು
ಹಾರಿ ಮಿನುಗುತಿಹವು
ಬಳ್ಳಿಮಾಡಗಳು ಸನ್ನೆ ಮಾಡುತಿವೆ
ನನಗು ನಿನಗು ಬರಲು

೮

ಪಾರಿಜಾತಗಳು ಮುದ್ದುಗರೆಯುವವು
ಹವಳದುಟಿಗಳಿಂದ
ಕಂಪಸೂಸಿ ಮಂದಾರ ಉಸಿರ ಬೆರೆ-
ಯುವವು ಸುಮನದಿಂದ
ಸ್ಫುರಿಸುವದು ಹೃದ್ಗಂಧ ತುಂಬಿದಾ-
ನಂದನಾಡಿಯಿಂದ

೯

ಬಯಕೆ ಮೂಡದಲೆ ಬಯಸಿದೊಡವೆಯೂ
ಕೈಗೂಡುತಿತ್ತು
ಪಡೆದ ಬದುಕನೇ ಬಯಸುತಿದ್ದೆನೋ
ಎನ್ನುವಂತೆ ಇತ್ತು
ಕೊಡುವ ಕೈಯೆ ತಾನಾಸೆ ಕೊಡುವದೋ
ಯಾರಿಗೇನು ಗೊತ್ತು !

೧೦

ರಕ್ತಕಣಗಳೂ ಜೀವದಣುಗಳೂ
ಕುಣಿಯೆ ಕೊಡುತ ಹೊಳಲು
ತನ್ನ ಉಸಿರನೇ ನನ್ನದಾಗಿಸುತ
ಮೆಲ್ಲನೊಲಿಸಿಕೊಳಲು
ಎದೆಯಲಾವುದೋ ದನಿಯು ಮೂಡುತಿದೆ
ಊದಿದಂತೆ ಕೊಳಲು.

೧೧


ನೋಡುತಿರಲು ಒಳಗಣ್ಣನಿದಿರು ನೀ
ಹೇಗೊ ರಾಧೆಯಾದೆ।
ಕೇಳುತಿರಲು ಒಳಗಿವಿಯು ಕೊಳಲು, ನ-
ನ್ನೊಳಗೆ ಮಾಯವಾದೆ।
ನಾನು ನೀನೊ; ನೀ ನಾನೋ ಎನೋ
ಎನುತೆನುತಲೆಚ್ಚರಾದೆ.

- ಹಾಡು ಪಾಡು-೭/ಪ್ರ : ೧೯೪೬

---

ಭಾವ : ಕಲ್ಪವೃಕ್ಷಗಳಿಂದ ಕೂಡಿದ ವೃಂದಾವನದಲ್ಲಿ ಈ ಭಾವಕವನದ ನಾಯಕನು ತನ್ನ ಸಹಜ ಸಖಿಯೊಂದಿಗೆ ಸುತ್ತಾಡುವ ಅನುಭವ ಪಡೆಯುತ್ತಾನೆ. ಸಹಜಸಖಿ ಇವನಲ್ಲಿ ಒಂದಾದಾಗ ಎಚ್ಚರಾಗುತ್ತಾನೆ. ಅದ್ವೈತ ಅನುಭಾವದ ಭಾವಗೀತ. ಅಸಾಮಾನ್ಯ ಕನಸಿನ-ಯೋಗನಿದ್ರೆಯ ವರ್ಣನೆ ಇಲ್ಲಿದೆ.

# ೪೨ ಹುಟ್ಟಿನ ಗುಟ್ಟು



೧

ತ್ಯಾಗವೆ ಜೀವದ ಕರ್ಮಾ
ಭೋಗವೆ ಜೀವನ ಧರ್ಮಾ
ಯೋಗವೆ ಶಿವಜೀವರುಗಳ ಬಾಳಿನ ಮರ್ಮಾ.
ಹರ ಓಂ ಹರಿ ಓಂ ಹರಿಹರ ಓಂ ಬ್ರಹ್ಮಾ

೨

ನಾನು ತಾನು ಈ ಹಮ್ಮಾ
ಇದು ಅಣ್ಣಾ ಅದು ತಮ್ಮಾ
*ಅವಳಿ ಜವಳಿ ಸಂಬಂಧವು ಇದೆ ನಮ್ಮಾ ನಿಮ್ಮಾ*
*ಹರ ಓಂ ಹರಿ ಓಂ ಹರಿಹರ ಓಂ ಬ್ರಹ್ಮಾ*

೩

*ಪಡೆದವನೊ ಗುರುಗುಮ್ಮಾ*
*ಹಡೆದವಳಾವಳೊ ಅಮ್ಮಾ*
*ಹುಟ್ಟಿನ ಗುಟ್ಟನು ಹೇಳಲು ಕೇಳಲು ಇರು ಸುಮ್ಮಾ,*
ಹರ ಓಂ ಹರಿ ಓಂ ಹರಿಹರ ಓಂ ಬ್ರಹ್ಮಾ.

- ನಮನ : ೪೫/ಪ್ರ : ೧೯೫೮

---

ಭಾವ : ಹುಟ್ಟಿನ ರಹಸ್ಯಕ್ಕೆ ಬಾಯಿ ಇಲ್ಲ. ಅದು ಮೌನ. ಹರಿಹರ ಸಾಮರಸ್ಯದ ಹುಟ್ಟಿನ ಗುಟ್ಟನ್ನು ಬಚ್ಚಿಡುವ ಹವ್ಯಾಸದ ಬಗ್ಗೆ.

ಶಬ್ದಾರ್ಥ : ಹಮ್ಮಾ=ಅಹಂ.

# ೪೩ ದೇವವೀಣೆ

೧

*ದೇಹವೊಂದು ದೇವವೀಣೆ,*
*ನರನರವೂ ತಂತಿ ತಾನೆ,*
*ಹಗಲಿರುಳೂ ನುಡಿಯುತ್ತಿಹ ಉಸಿರಾಟವೆ ಗೀತ.*
*ಆದ ಬಾರಿಸೆ ನೀ ಪ್ರವೀಣೆ*
*ತಾಯಿ ನಿನ್ನ ಕೈಗೆ ನಾನೆ*
*ಒಪ್ಪಿಸಿಕೊಂಡಿಹೆನು ಬರಲಿ ಜೀವದ ಸಂಗೀತ.*

೨

ಮನದ ಮಲೆಯ ತುದಿತುದಿಯಲಿ
ಮೌನದ ಸುಪ್ತೋದಧಿಯಲಿ
ಏಳಲಿ ಅಲೆ ನವತಾರೆಯ ಕಿರಣಾವಲಿಯಂತೆ.
ಇಗೊ ಚಿತ್ತದ ಯಾವದೊ ಸ್ಮೃತಿ
ಸುಳಿಸುತ್ತಿದೆ ವಿದ್ಯಾರತಿ
ಮೈಮನವೂ ಪ್ರಾಣಪಥದಿ ನಲಿನಲಿ ನಲಿವಂತೆ.

೩

ನೀನೆಲ್ಲೋ ಹಾಡುತ್ತಿಹೆ
ನಾನೆತ್ತೋ ನೋಡುತ್ತಿಹೆ
ಹಾಡಿದ ಒಡನಾಟಕೆ ಒಳನಾಡಿಯು ನಡುಗುತಿದೆ.
ಸ್ಫುರಿಸುತ್ತಿದೆ ಸ್ಪಂದಿಸುತಿದೆ
ವಿವಿಧ ಸ್ವರ ಹೊಂದಿಸುತಿದೆ
ಉಳಿದಲೆದಾಟವು ಎಲ್ಲೋ ಅಲ್ಲೇ ಅಡಗುತಿದೆ.

- ಜೀವಲಹರಿ : ೧೬/ಪ್ರ : ೧೯೫೭

---

ಭಾವ : ದೇಹ ಒಂದು ದೇವವೀಣೆ ಎಂಬ ಅನುಭವ ಕೆಲವು ಬಾರಿ ಕೆಲವು ನಿಮಿಷಗಳಲ್ಲಿ ಮಿಂಚಿಹೋಗುತ್ತದೆ. ಅದನ್ನು ಬಾರಿಸುವವನು ಕೆಲವರಿಗೆ ಒಳಗೂ ಇರಬಹುದು ಕೆಲವರಿಗೆ ಹೊರಗೂ ಇರಬಹುದು. ಇದು ಅವರವರ ನಂಬಿಕೆ ಹಾಗೂ ಅನುಭವ. ಐತರೇಯ ಬ್ರಾಹ್ಮಣದಲ್ಲಿ ಶರೀರ ಒಂದು ಸ್ವಯಂಭೂ ವೀಣೆ ಎಂಬುದಾಗಿ ವರ್ಣನೆ ಇದೆ.

ವಿಶೇಷ : ಈ ಕವನ ಭೋಗ ಷಟ್ಪದಿಯ ಹೊಸ ಪ್ರಯೋಗ. ೩ ಮತ್ತು ೬ನೆಯ ಸಾಲಿನ ಕೊನೆಯ ಗಣ ೨ ಮಾತ್ರೆಯದಾಗಬೇಕು ಎಂಬ ಶಾಸ್ತ್ರ ಮೀರಿ ೩ ಮಾತ್ರೆಯದಾಗಿದೆ.



# ೪೪ ಕೊಳಲನೂದಿದನ ಸ್ವಾಮಿ

ಕೊಳಲನೂದಿದನ । ಸ್ವಾಮಿ
ಕೊಳಲನೂದಿದ । ಎಲ್ಲೋ
ಕೊಳಲನೂದಿದ ॥ ಪಲ್ಲವಿ ॥

೧
ಕೋಲು ಹಾಕಿದಂತೆ ಕಾಲ
ತಾಲದಲ್ಲಿ ಕುಣಿಯುತಿರಲು
ಮೂಲ ಹಿಡಿದು ಅಲ್ಲಾಡಿಸಿದ
ಬಳ್ಳಿಯಂತೆ ಬಳಕಿತು ಜೀವ ॥ ಕೊಳಲ..........

೨
ಕಣ್ಣ ಸನ್ನೆಯಿಂದ ನಮ್ಮ
ತನ್ನ ಎದೆಗೆ ಎಳೆದುಕೊಂಡು
ಭಿನ್ನಭಾವ ಮರಸಿ ಕಲೆತು
ಬೆರೆತು ಇಲ್ಲೆ ಒಡನಾಡಿದ ॥ ಕೊಳಲ..........

೩
ಸುಗ್ಗಿಗೊರಳ ಕೋಗಿಲಂತೆ
ಸುಗ್ಗಿ ದನಿಯು ಪಂಚಮದಲ್ಲಿ
ಮುಗ್ಗಿಬಿದ್ದು ಮುಗಿಯದನ
ಮುತ್ತುವಂತೆ ಸುತ್ತುವಂತೆ ॥ ಕೊಳಲ..........

೪
ಎಂಥ ಸ್ನೇಹ ಏನು ಮೋಹ
ಒಂದು ಪ್ರಾಣ ನೂರು ದೇಹ
ಹೊಂದಿ ಬಿಡಿಸಿ ಚಂದವರಿತು
ರಾಸಲೀಲೆ ಆಡಿದಂತೆ ॥ ಕೊಳಲ..........

೫

ಹುಣ್ಣಿವೆಯ ರಸವೆ ಹರಿದು
ಕಣ್ಣತುಂಬಿ ಮೈಯ್ಯ ತುಂಬಿ
ಹಣ್ಣಗೊಳಿಸಿ ಹದಕೆ ತಂದು
ತೆನೆಗೆ ಹಾಲು ತುಂಬಿದಂತೆ॥ ಕೊಳಲ..........

೬

ಯಾವ ಜನ್ಮದಲ್ಲೊ ಏನೊ
ನಾವು ತೊರೆದು ಬಂದ ಕರುಳು
ಜೀವ ಮಿಡಿಸಿ ನುಡಿಸಿ ನುಡಿಸಿ
ತಾಯಿ ಬಾರೆ ಎನ್ನುವಂತೆ॥ ಕೊಳಲ..........

- ಹಾಡು ಪಾಡು-೯/ಪ್ರ : ೧೯೪೬

---

ಭಾವ : ಗೋಪಿ ಆನಂದ ಸಮಾಧಿಯಿಂದ ಎಚ್ಚತ್ತು ಹೇಳಿದ್ದು



## ೪೫ ಕೊಳಲನೂದಿದನೇನ ಕೃಷ್ಣ

*ಕೊಳಲನೂದಿದನೇನ ಕೃಷ್ಣ?*
*ಕೊಳಲನೂದಿದಾ ॥ ಪಲ್ಲವಿ ॥*

೧
ತಿರುವುಗಿವಿಯ ಮಾಡಿ ಆವು
ನಿಂತವಕ್ಕ ನಿಂತಲ್ಲೇನ
ನೀನು ಕೂಡ ಬೀದಿಯಲ್ಲೆ
ನಡಿಯದನ ತಡೆದು ನಿಂತಿ ॥ ಕೊಳಲ..........

೨
ಕಣ್ಣ ನೀರು ಸುರಿವುದೇಕೆ
ನಿನ್ನ ಚಿತ್ತ ಕರಗಿತೇನ
ಯಾವ ಭಾವ ಪಾಕವಾಗಿ
ತುಂಬಿ ತುಳುಕಿ ಸೂಸಿತಿಲ್ಲಿ ॥ಕೊಳಲ..........

೩
ಏನೊ ನೋಡಿ ಕಾಣದಂತೆ
ಏನೊ ಕೇಳಿ ಕೇಳದಾಗಿ
ಏನೊ ಹೇಳ ಹೇಳಹೋಗಿ
ಆಡದೇನ ಇರುವಿ ನೀನು ॥ಕೊಳಲ..........

೪
ಗಲ್ಲದಲ್ಲಿ ತುಪ್ಪುಳೆದ್ದು
ಉಬ್ಬಿ ಹಿಗ್ಗಿ ನನೆಯುತಿರುವಿ
ಗದ್ದವಿಡಿದು ತುಟಿಯ ತಾಕಿ
ಸೋಕಿ ಹೋದಿತೇನ ನಿನ್ನ ॥ಕೊಳಲ..........

೫
ಯಾವ ಲೋಕದಿಂದೊ ಬಂದ
ಬಿಂಬ ಮೊಗವನರಳಿಸುವದು
ಮುದ್ದು-ತುಂಬಿ ಮುಟ್ಟತಕ್ಕ
ಬಣ್ಣವೇರಿ ಕಣ್ಣ ಬಿಡುವೆ ॥ಕೊಳಲ..........

೬

ಜೀವ ಸೂತ್ರಧಾರ ನಿಮ್ಮ
ಪಾತ್ರವಾಡಿಸುವನೇನ
ಇಷ್ಟು ಕೇಳಿ ಕಿವುಡಳಿರುವೆ
ಎಲ್ಲಿ ತನ್ಮಯಳಾದೇ ನೀನು // ಕೊಳಲ.........

೭

ರಂಗ ತಾನು ಇದ್ದಲ್ಲಿಂದ
ತನ್ನ ನಲ್ಲೆಯರಿಗೆಲ್ಲ
ಗಾಳಿ ಸುಳಿಯ ತಾನವಿಡಿದು
ಮುದ್ದ ತೇಲಿಬಿಟ್ಟನೇನ // ಕೊಳಲ.........

-ಹಾಡು ಪಾಡು-೮/ಪ್ರ : ೧೯೪೬

---

ಭಾವ : ಆಕಳಹಿಂಡಿನೊಡನೆ ಬರುವ ಗೋಪಿ ಏನೋ ಕೇಳಿಸಿದಂತೆ ಬೀದಿಯಲ್ಲೆ ಗಕ್ಕನೆ ನಿಂತದ್ದನ್ನು ನೋಡಿ ಆಕೆಯ ಸಖಿ ಕೇಳುತ್ತಾಳೆ.



# ೪೬ 'ಸಕಲ'

೧

ಎಷ್ಟು ಶಕಲವ ಕೂಡಿಸಿದರೆ ಇಡಿ ಒಂದಾದೀತು?
ಕಂಸಕಂಸಾತ್ಮರಿಗೆ ಕೃತ್ಸ್ನನಾಮವಪಥ್ಯ ;
ಆದರೂ ಇಂದಿಗೂ ಜಗವಖಂಡಿತ ಸತ್ಯ
ಕಿಡಿಗೇಡಿ ಕಿಡಿ ಬಂತು ತಿಕ್ಕಿ ಮಾತಿಗೆ ಮಾತು.

೨

ವಿಕಲ ಬುದ್ಧಿಗೆ ಸಕಲ ಎಟುಕದಿದೆ, ಆದು ಸೋತು
ಕಟುಕ ಬುದ್ಧಿಗೆ ಶರಣು ಮಾಡಿ ಕುಳಿತಿದೆ ಸದ್ಯ
ವಿಜ್ಞಾನಿಗಳ 'ಅಕಲು' ಹೃದ್ಯವಿದ್ದರು ವಧ್ಯ
ಸೌರಪಥದಲಿ ಧೂಮವೆದ್ದು, ಮೂಡಿದೆ ಕೇತು.

೩

*ಭೂ ವ್ಯೋಮ ಪಾತಾಳ ಒಂದಾಗಿ ಹೆಣೆದಿರುವ*
*ಓ ಗಂಗೆ, ರಸಲಹರಿ ಸಹಜ ಸಹಜ ಅಭಂಗಿ*
*ಈ ವಿಶ್ವಮಾನವರ ದೃಷ್ಟಿಯೇ ಏಕಾಂಗಿ*
*ಕಲಿಸು ನಿನ್ನಾ ಕಲೆಯ ವಿಶ್ವಂಭರೇ ಗುರುವೆ!*

೪

ಭಣಿತಿ ಭಂಗಿಗಳಲ್ಲಿ ಮುಗಿದು ಕುಂಠಿತ ಮತಿಯು
ಮತ್ತೆ ತಲೆಯೆತ್ತಿ ನಿಂತಿಹುದು ದಿತಿಸಂತತಿಯು.

- ಸೂರ್ಯಪಾನ : ೨೧/ಪ್ರ : ೧೯೫೧

---

ಭಾವ : ಗಂಗೆಯು ವಿಭೂತಿಮತ್ವದ ಇನ್ನೊಂದು ದರ್ಶನ.

ಶಬ್ದಾರ್ಥ : ಶಕಲ=ತುಂಡು. ವಿಕಲ=ಅಪೂರ್ಣ. ಅಕಲು-ಅಕ್ಕಲು=ಬುದ್ಧಿ, ವಿವೇಕ. ಕೃತ್ಸ್ನ=ಪೂರ್ಣ. ಸೌರಪಥ=ಸೂರ್ಯಮಾರ್ಗ. ಭಣಿತಿ-ಭಣಿತೆ=ಸಂಭಾಷಣೆ, ಮಾತುಕತೆ. ಭಂಗಿ=ರೀತಿ, ರೂಪ. ದಿತಿ=ಒಬ್ಬ ರಕ್ಕಸಿ.

## ೪೭ ದೀಪ

೧

*ಬಂತಿದೊ ಶೃಂಗಾರಮಾಸ*
*ಕಂತು ನಕ್ಕ ಚಂದ್ರಹಾಸ*
*ಎಂತು ತುಂಬಿತಾಕಾಶ*
*ಕಂಡವರನು ಹರಸಲು.*

೨

ಕಿರಿಬೆರಳಲಿ ಬೆಳ್ಳಿಹರಳು
ಕರಿ ಕುರುಳೊಳು ಚಿಕ್ಕೆ ಅರಳು
ತೆರಳಿದಳಿದೊ ತರಳೆ ಇರುಳು
ತನ್ನರಸನನರಸಲು.

೩

ಗಂಗೆ ಯಮುನೆ ಕೂಡಿ ಹರಿದು
ಸಂಗಮ ಜಲ ಬಿಳಿದು ಕರಿದು
ತಿಂಗಳ ನಗೆ ಮೇರೆವರಿದು
ಬೇರೆ ಮಿರುಗು ನೀರಿಗು.

೪

ಪಂಥದಿಂದ ಮನೆಯ ತೊರೆದು
ಪಾಂಥ ನೆನೆದನತ್ತು ಕರೆದು:
ಇಂಥ ಸಮಯ ಬೇರೆ ಬರದು
ದಂಪತಿಗಳಿಗಾರಿಗು !

೫
ನಾನು ನೀನು ಜೊತೆಗೆ ಬಂದು
ಈ ನದಿಗಳ ತಡಿಗೆ ನಿಂದು
ನಾನುರಾಗದಿಂದ ಇಂದು
ದೀಪ ತೇಲಿಬಿಟ್ಟೆವೇ ?
ದೀಪ ತೇಲಿಬಿಟ್ಟೆವು.!

- ನಾದಲೀಲೆ : ೪೩/ರಚನೆ : ಪುಣೆ, ೧೯೩೩-೩೫/ಪ್ರ : ೧೯೩೮

---

ಭಾವ : ಫಾಲ್ಗುಣ ಪೂರ್ಣಿಮೆಯ ಸುಮಾರಿಗೆ ಗಂಗೋಘದಲ್ಲಿ ದೀಪತೇಲಿ ಬಿಟ್ಟು. ಅದು ತೇಲುವುದೋ ಮುಳುಗುವದೋ ಎಂದು ಸಭಯ ಆಶೆಯಿಂದ ನಿರೀಕ್ಷಿಸುವ ದಂಪತಿಗಳಿಗೆ (ನಿರುದ್ಯೋಗಿ, ದ. ರಾ. ಬೇಂದ್ರೆ, ಎಂ. ಎ. ಅಭ್ಯಾಸಕ್ಕೆ ಪತ್ನಿ, ಇಬ್ಬರು ಮಕ್ಕಳೊಡನೆ ಕಕ್ಕನ ಆಶ್ರಯದಲ್ಲಿದ್ದಾಗ) ಸಂಸಾರ ಪ್ರವಾಹದಲ್ಲಿ ಪ್ರೇಮದ ಗತಿಯೂ ಹೀಗೇ ಎಂದು ಒಮ್ಮೊಮ್ಮೆ ಹೊಳೆಯುವುದುಂಟು. ಕಾಶೀ ಯಾತ್ರೆಯಲ್ಲಿ ಬರೆದ ಗೀತ.

ಶಬ್ದಾರ್ಥ : ಕಂತು=ಆನಂದ, ಕಾಮ, ಹೃದ್ಯ ಅನುಭವ, ಸೂರ್ಯಾಸ್ತ ಸಮಯ. ತರಳೆ=ಬಾಲೆ, ಹುಡುಗಿ. ಪಂಥ=ಪ್ರತಿಜ್ಞೆ. ಪಾಂಥ=ಪಥಿಕ.

ವಿಶೇಷ : ಇನ್ನೊಬ್ಬರ ಆಶ್ರಯದಲ್ಲಿ ದಂಪತಿಗಳು ಯಾತ್ರೆ ಮಾಡುವ ಪ್ರಸಂಗ. ಅಲ್ಲಿ ತೇಲಿ ಬಿಡುವ ದೀಪದ, ಎಣ್ಣೆಯ ಖರ್ಚು ಕಕ್ಕನ ಮೇಲೆ ಬೀಳಬಾರದು ಎಂಬ ಅಪೇಕ್ಷೆ ವ್ಯಕ್ತವಾಗಿದ್ದು ಮೌಲಿಕವಾದ ಮಾರ್ಗದರ್ಶನವಾಗಿದೆ. ವ್ರತ, ನಿಯಮ, ಪೂಜೆ, ಪುನಸ್ಕಾರದ ವೆಚ್ಚ ಸ್ವಂತ ಇದ್ದರೆ ಮಾತ್ರ ಅದು ಯುಕ್ತ.



## ೪೮ ತುತ್ತಿನ ಚೀಲ

೧

ಅನ್ನಬ್ರಹ್ಮದ
ದೇಗುಲದಲ್ಲಿ
ಬೆಳಗೂ ಬೈಗೂ
ಭಿಳಿ ಭಿಟಿ ಬೆಂಕಿ,
ಡೊಂಬರ ಪೂಜೆಯು,
ಕಾಗೆಯ ಮಂತ್ರ,
ಗಾಳಿಯ ಎಡೆಯು,
ಬೊಬ್ಬೆಯ ಗಂಟೆ-
ಅನ್ನ ಬ್ರಹ್ಮದ
ದೇಗುಲದಲ್ಲಿ !

೨

ನಾದಬ್ರಹ್ಮದ
ಕಗ್ಗವಿಯಲ್ಲಿ
ಮೌನದ ವೀಣೆಗೆ
ಕರುಳಿನ ತಂತಿ,
ಮಿಡಿದೂ ಮಿಡಿದೂ
ಮುರಿದವು ಬೆರಳು.
ಮಿಡುಕೀ ಮಿಡುಕೀ
ನೊಂದಿತು ಎದೆಯು-
ನಾದಬ್ರಹ್ಮದ
ಕಗ್ಗವಿಯಲ್ಲಿ!

೩

ಶಬ್ದಬ್ರಹ್ಮದ
ಗುಮ್ಮಟದಲ್ಲಿ
ಹಗಲೂ ಇರುಳೂ
ವೇದದ ವಾದ,
ಪಾಪಪುಣ್ಯಗಳ
ಜಾಳಿಗೆಯಲ್ಲಿ
ನೇತಿದೆ ಜೋತಿದೆ
ಜೀವದ ಜೇಡ-
ಶಬ್ದಬ್ರಹ್ಮದ
ಗುಮ್ಮಟದಲ್ಲಿ !

೪

ದೈವುಳ್ಳವರಿಗೆ
ದಯವೇ ಇಲ್ಲ !
ತಿತ್ತಿರಿ ತುಂಬಿದೆ
ಕೂಳಿನ ಕೋಟೆ !
ಬಿಡುಗಣ್ಣವರಿಗೆ
ಕಾಣುವದಿಲ್ಲ
ಅಮೃತದ ತೇಗಿನ
ಮದವಂತಹದು !
ಹಸಿದವ ಬಲ್ಲ
ಹಸಿವೆಯ ಶೂಲಿ !

೫

ಶಿವಾ ಶಿವಾ ಹೇ
ಶಿವ ಮಾದೇವಾ !
ಅತ್ತಿತ್ತು ಕೂಗಿತು
ಚೀರಿತು ಜೀವ !
ಬಾಯುಂಗಳದಲಿ
ಹುಟ್ಟಿದ ಮಾತು
ಮುಗಿಲಿನ ಕಿವಿಯನು
ಮುಟ್ಟಲೆ ಇಲ್ಲ;
ಹಾಡುವ ಸಭೆಯಲಿ
ಪರಳುವದುಂಟೆ ?

೬
ಕಿಕ್ಕಿರಿ ತುಂಬಿದ
ಭೂಮಿಯ ಕಣಜ
ಕಕ್ಕಸಬಡುತಿದೆ
ಬೊಕ್ಕಸದೊಡಲು
ಬಾಳಿಗಿಂತಲೂ
ಕೂಳೇ ಮೇಲೊ ?
ಬರಿದೋ ಬರಿದು
ತೆರವೋ ತೆರವೂ
ಬಡವರ ಬಗ್ಗರ
ತುತ್ತಿನ ಚೀಲಾ !
೭
ದೇವರದೊಂದು
ಗೋರಿಯ ಕಟ್ಟಿ
ಧರ್ಮದ ಧೂಪಕೆ
ಬೆಂಕಿಯನಿಕ್ಕಿ
ಗಣಗಣ ಬಾರಿಸಿ
ಪ್ರಾಣದ ಗಂಟೆಯ,
ಸಾವಿನ ನೋವಿಗೆ
ಕಲಮಲವೆದ್ದು
ನೆಲವನ್ನೆಲ್ಲಾ
ತುತ್ತುವೆನೆಂದು
ಗದರುತ್ತಿಹುದು-
ಗರ್ಜಿಸುತಿಹುದು-
ಬಡವರ ಬಗ್ಗರ
ತುತ್ತಿನ ಚೀಲದ
ಒಳಗಿನ ಒಳಗಿನ
ಒಳದನಿಯೊಂದು !

- ಗರಿ : ೨೯/ರಚನೆ : ೧೯೨೮/ಪ್ರ : ೧೯೩೨

ಭಾವ : ಅನ್ನ ನೋಡೆಂಬುದಕ್ಕಾಗಿ ಹೊಟ್ಟೆ ಉರಿಯುತ್ತಿರುವವರಿಗೆ ಈ ಹಾಡು ತಪ್ಪಿಲ್ಲ
ಶಬ್ದಾರ್ಥ : ಕಕ್ಕಸ=ಕರ್ಕಶ, ತೊಂದರೆ.

# ೪೯ ಯಮುನ ಕಲ್ಯಾಣ

೧
ಪ್ರಿಯಾ ನೀ ಲಾಲಿಸೋ
ನಿಲ್ಲದೇ ನಿಲ್ಲೆ ನಾ
ನಲ್ಲಾ ನಿಲ್ಲsದಲ್ಲಿs
ನಾs ನೆಲ್ಲೀ
ನಾನೆಂತು ನಿಲ್ಲಲಿs.
೨
ಅಲಲಾ ನಿಲ್ಲsಲಾರೆನಾ
ಅಥನಾಥನಿಲ್ಲದಲ್ಲಿ
ತನುವಿನಾ
ಈತನಾ
ಬರಿಯಾತನಾ
ನೀರಿಲ್ಲದಾ ಯಾತನಾ
ಹೂ ತಾ ಮಾತನಾ
ಸಖಿ ನಾ ಸಖನಾ
ತೊರೆಯೆ ಸುಖಿ ನಾನಾ
ಕಾಣೆನಾ.
೩
ಸಹಗಮನಾ
ಧವನಾ ಸರಿ
ಉರಿ ಉರಿ ಉರಿ
ಹಾವೆ ನಾ
ಹೂವೆ ನಾನಾಗುವೆ;
ನೀರಿನಾ ಹರಿಗೋಲಾಗುವೆ.

೪
ನೀರ ನಾ
ನಿಸ್ನಾತನಾ
ಸರುನಾತನಾ
ಯಮುನಾ
ಕಾಲಿಂದೀವಾತನಾ
ಲಾಲಿಸೋ ಮಾತನಾ.
ಮಕರ ಕೇತನಾ
ಅಂತರಂಗ ಚೇತನಾ
ತತ್ತರಂಗ ವಿಧಾತನಾ
ತನನಾ ತಾನನಾ
ಲಯವಾ ನಿಲಯನಾ
ನಲ್ಲ ನಾ ನೀರೆ ನಾ
ಅವನ ನೀರೆ ನಾ.
೫
ಶಿವನಾ ದವನಾ
ಯೌವನದಾ
ಕಂಪನಾ
ಮನನಾ, ನಮನಾ
ತಂಪನಾ
ಮಾಡುವ ಸೂರೆ ನಾ
ತರ ತಮ ಮನಕೆ ತಾರೆ, ನಾ
ಯಮುನಾ ಕಲ್ಯಾಣ ಕೈಧಾರೆ ನಾ
೬
ಕೇಳೀ ಕೇಳೀ ತಾಳಿನಾ
ಸಖೀಯೇ ಗಾಳಿ ನಾ
ನನ್ನನಾಳಿನಾ ಗತಿಯಾ ಹೇಳೆನಾ.

೭

*ವೇಂಕಟರನ್ನಾ*
*ಸಾರಿದೆನೊ ನಾ ನಿನ್ನಾ*
*ನಾ ನಿನ್ನಾ*
*ನೀರಜ ನಯನಾ*
*ನಿರ್ಮಲ ಗುಣರನ್ನಾ*
ಏನ್ನಾ ಕುಂದುಗಳನ್ನು
*ಎಣಿಸಲಾಗದು ದೇವಾ!*
*ಪನ್ನಗಾಚಲ ವಾಸಾ, ತೋಷಾ!*

೮

ಅನಾಥಾನೊ ನಾನು
ನೀ ಎನಗೆ ಬಂಧು ನೀನು
ನಿನ್ನವನೆಂದು ನೋಡು
ನೀ ದಯಮಾಡು
*ದೇಶದೇಶದವರ*
*ಪೊರೆವಂತೆ ಪೊರೆಯೆ ನಾ*
*ಶೇಷಾಚಲ, ಶ್ರೀಶಯನ ನಾ.*

-ಶತಮಾನ : ೯೬/ಪ್ರ : ೨೦೦೪

---

ಭಾವ : ಹಿಂದುಸ್ತಾನಿ ಸಂಗೀತದ ಎಲ್ಲಚೀಜು, ರಾಗವಿಸ್ತಾರದ ಹಾಡು ಕನ್ನಡದಲ್ಲಿಯೇ ಇರಬೇಕು ಎಂಬ ಆದರ್ಶ ಬೇಂದ್ರೆಯವರದಾಗಿತ್ತು. ಇದರ ಸತ್ತ್ವಪರೀಕ್ಷೆ ನಿಮ್ಮ ಮನೆಯಲ್ಲಿ ನಡೆಯಿತು. ಮಾಧವಗುಡಿ ತಾವು ಕಲಿತ ಯಮನ ಕಲ್ಯಾಣ ರಾಗ ಪ್ರಸ್ತುತಪಡಿಸುತ್ತಿರುವಂತೆಯೇ ಬೇಂದ್ರೆ ಅದರ ಹಾಡನ್ನು ಕೃಷ್ಣ-ರಾಧಾಭಾವವನ್ನು ಕನ್ನಡ ಗೀತಗೊಳಿಸಿದರು. ಈ ಕನ್ನಡ ಗೀತದ ಪ್ರತ್ಯಕ್ಷ ಪ್ರಯೋಗ ಗಾನರತ್ನ ಡಾ॥ ಗಂಗೂಬಾಯಿ ಹಾನಗಲ್ಲ ಅವರ ಸಮ್ಮುಖದಲ್ಲಿ ನಡೆದು ಒಪ್ಪಿಗೆ ಪಡೆದದ್ದು ಮಹತ್ತ್ವದ ಹಂತ. ಇದರ ಇನ್ನೊಂದು ಪ್ರಯೋಗ ಬೇಂದ್ರೆಯವರ ೧೦೪ನೆಯ ಜನ್ಮದಿನದಂದು ಮಾಡಿ ಜನಪ್ರಿಯತೆ ದೊರಕಿಸಿದ್ದುದ್ದು ಶುಭ ಸಂಕೇತ.

ವಿಶೇಷ : "ಅಂಬಿಕಾತನಯನ ಹಾಡs ಬೆಳದಿಂಗಳ ನೋಡs" ಕೃತಿಯಲ್ಲಿ ಸ್ವರ ಸ್ವಂಯೋಜನೆಯೊಂದಿಗೆ ಪ್ರಕಟಿಸಲಾಗಿದೆ - ದಿ : ೨೦-೨-೨೦೦೮, ಶ್ರೀಮಾತಾ ಪ್ರಕಾಶನ, ಧಾರವಾಡ.

# ೫೦ ಉಕ್ತಿ ಲಾವಣ್ಯ

೧

ಯಾವ ನೀರೂ ಸಾಕು ರಾಜಕೀಯದ ತೃಷೆಗೆ,
ಬೇಕೇಕೆ ಬೇರೆ ಒರತೆ ?
ಜಂಗಮು ಜಗತ್ತಿನಲ್ಲಿ ರಾಜ್ಯಧುರಧೀರರದು
ಇಹುದಣ್ಣ ತುಂಬ ಕೊರತೆ.

೨

ಭೂಮಿ ಭೂಮಾನಂದಕಾಗಿ ಓಗರೆದಿತ್ತು
ಬಂತು ಬೇರೆಯ ನೆಲೆಯ ಹಿರಿಯ ಮಹಿಮೆ,
ದೇವದ್ರವ್ಯವೆ ಇಳಿದು ಮನುಜರೂಪವ ತಳೆದು
ತೋರಿತ್ತು ಗುರುವಿನಾ ದೊರೆಯ ಗರಿಮೆ

೩

ಹೋ ಶ್ರದ್ಧೆ ಭೌತಿಕವು ಆದರೂನೂ
ಆ ಶ್ರದ್ಧೆ ಕ್ರಿಯಾಶೀಲ
ನೆಂ, ಬಿಗಿಯೆ ಬಿಗಿಯು ಅದು ಪುರುಷ
ಧಾತು ಶ್ರೀ ಶ್ರದ್ಧೆ ಜೀವಕೀಲ.

೪

ಅನುಭವ ಸಹ ಅನುಭಾವವು
ಅನುಭೂತಿಯ ಕಂಪ
ಆಳದೊಳಿದೆ ಬಾಳಿನ ಬೆಲೆ
ಭಾವಿಸು ಆ ತಂಪ

೫

ಪ್ರಕೃತಿ ಯಂತ್ರಕೃತ ಒಡವೆಯಲ್ಲ
ಈ ಒಡೆಯನ ಒಡನಾಡಿ
ಆದರ ಗತ್ತು ಓ ಈ ಜಗತ್ತು ತಾನ್
ಅದೇ ಗಾಡಿ ಮೋಡಿ.

೬

ಅತ್ತರೆ ಮುತ್ತಿಲ್ಲ
ನಸುನಗೆ ಭಂಗಾರ;
ಮುತ್ತಿಗೆ ಅತ್ತಿಲ್ಲ
ಬೆರೆವುದೆ ಶೃಂಗಾರ.

೭
ಉದಾಸೀನದಲಿ ಬರುವ ವಿಸ್ಮೃತಿಯ
ಛೇದ ಭೇಧ ಮಾಡಿ
ಬೇಡಿಕೊಳುತಿರುವೆ, ತೋಡಿಕೊಳುತಿರುವೆ
ನಿನ್ನ ಅರಿವು ಮೂಡಿ.
೮
ಈ ವಿಚಾರ ಸಂತತಿಯು ಸಂಚರಿಸ-
ದಂತೆ ಅದರ ಜೋಡಿ
ನೀನು ಎಡೆಬಿಡದೆ ಬಾರೊ ದೊರೆಯೆ,
ಬಗೆಬಗೆಯ ಕೂಡಿ ಕೂಡಿ.
೯
ಏಕಾಕಿ, ಪರಮಶಮಿ ಆಗಿ ನಮ್ಮೀಮನವು
ನಿನ್ನ ನೆಲೆಯಲ್ಲಿಯೇ ನೆಲೆಸಬೇಕು
ಆ ಗಿರಿಯ ತುದಿಯಿಂದ ಚೊಕ್ಕನೈಜವ ಕಂಡು
ಭ್ರಮೆಯಿಂದ ಐಕ್ಯಕ್ಕೆ ಒಲಿಸಬೇಕು.
೧೦
ಚೈತನ್ಯವು ಸ್ಥಿರಸ್ಥಾಣುವಿನಂತೆ
ಕದಲುಬದಲಿರಲಿ ತೋರಿಕೆಗೆಂತೇ
ಎಷ್ಟೆ ಇರಲಿ ಸಂಗ್ರಾಮದ ಚಿಂತೆ
೧೧
ಮೌನಗರ್ಭದಲಿ,
ನಿರಾಕಾರ ನಿಃಸೀಮಾನಂದವ ಕಂಡೆ
೧೨
ಲೋಕವು ಯಾವುದೆ ಬರಲಿ
ಭೂಮಿಕೆ ಯಾವುದೆ ಇರಲಿ
ಸತ್ ಚಿತ್ ಆನಂದದ ಮುರಲಿ
ಚೈತನ್ಯದ ಅರಿವಿನೊಳಿರಲಿ.
೧೩
ಅತಿದುರ್ಗಮ
ಅತ್ಯವಶ್ಯ
ಪಾರ್ಥಿವ ಭೂಮಿಕೆಯಲ್ಲಿ
ಭಗವತ್ ಚೇತನವಲ್ಲಿ
ಜಿಡುವುದು, ನಾಟುವುದು.

೧೪

ಚೆಲುವಿದ್ದಲ್ಲಿಯೆ
ನಲಿವಿಹುದು.
ಆದರ ಒಲುವಿನಲೆ
ಬಲವಿಹುದು.

೧೫

ಸಂಗ್ರಾಹಕ ಐಕ್ಯದೊಳಿದೆ
ಸರ್ವೈಕ್ಯದ ಹಾದಿ.

೧೬

ಮಾತು ಹಡೆಯುವದಲ್ಲ, ಮೌನಗರ್ಭದ ಬದುಕು
ಬಾಯ್ಬಡಕಗೇನು ಗೊತ್ತು!
ಬೆಳಕು ಕತ್ತಲೆಯಾಟ ತಿರುಗುವೀತಿರೆಗೆ ಇದೆ
ಸೂರ್ಯನಿಗೊ ಒಂದೆ ಹೊತ್ತು

೧೭

ಕೈಗೂಡಬಹುದು ಏನೂನು ಮೂಲದಲಿ ದೇವಸ್ಪರ್ಶ ಬೇಕು
ಇದ್ದರಾಯ್ತು ಭಗವತ್ ಸ್ಪರ್ಶ, ಕೊನೆಗಾಣಬಹುದು ಏನೂ
ಮಾಡಲಹುದು ಏನನ್ನು ಕೂಡ ಬೇಕಲ್ಲಿ ದೇವಸ್ಪರ್ಶ.

೧೮

ಆಗರ್ಭಜಾತ ಅಧಿಕಾರ ದೇವನಾನಂದ ದಿವ್ಯ ಐಕ್ಯ

೧೯

ದೇವಗರ್ಭದಿಂದ ಭೂಮಿ, ಭುವಿಯ ಗರ್ಭದೇವನು
ಅಡಗಿ ಒಳಗೆ ಇರುವದನ್ನೆ ಹೊರಗೆ ತರುವ ಯಾವನೊ?

೨೦

ಆತ್ಮವೋಚನವ ಮಾಡುತಿರುವದೇ ಬೆಳಕಿಗೊಂದು ಆದಿ
ಸೃಷ್ಟಿಯಲ್ಲಿ ಪರಿಪೂರ್ತಿಗೊಂಬುದೇ ಐಶ್ವರ್ಯದ ಹಾದಿ.

೨೧

ಹೊನ್ನಾಗಿಸುತಿವೆ ಹೂವು ನೆಲದೀ ಕೆಮ್ಮಣ್ಣ
ಕಾಣದೆ ಅರಳುತ್ತಲೆ ಇದೆ ಶಿವಕರುಣೆಯಣ್ಣ.

೨೨

ರಾತ್ರಿಯಲ್ಲ ನಮ್ಮ ಆದಿ; ರಾತ್ರಿಯಲ್ಲ ಅಂತ್ಯವು
ತಾಯ ಬಸಿರ ಬೆಳಕೆ ನಮ್ಮ ಚಿರಂತನದ ಚಿಂತ್ಯವು
ಬೆಳಕಿನ ಬಾಂಧವ್ಯದಿಂದ ತಾಯ ಸೆರಗ ಹಿಡಿದೆವು
ಬೆಳಕಿನಿಂದ ಬಂದೆವಣ್ಣ ಬೆಳಕಿನತ್ತ ನಡೆದೆವು.

೨೩
ಬೇನೆ  ಬಲ್ಲ ತಾಯಿಗೆಲ್ಲ ಗೊತ್ತು ಹೊತ್ತು ಕಾಲವು.
೨೪
ಮೂರ್ತಿ ಮಾಡುತ್ತಿಹುದು ಮರವೆಯ ಮುದ್ದೆಯಾದೀ ಮಣ್ಣನು
ಒಗರು-ಹುಳಿಗಳ ಪಾಕದಲ್ಲಿಯೆ ಬೆಳೆಸುವನು ಸವಿಹಣ್ಣನು
೨೫
ಎದೆಯ ಶೂಲಿ ಲಯಗೊಳಿಸಬೇಕು ತಾನಾ ತ್ರಿಶೂಲಿಯಲ್ಲಿ
೨೬
ಒಳಗೆ ಹೂತಿಹುದು ಒಂದು ಶಕ್ತಿ ಅದು ತೆರೆವುದೊಂದು ಕಣ್ಣ
ನಮ್ಮ ಮನನವನು ಮಿಕ್ಕು ನಾವು ಮೇಲಾಗಿ ಇರುವೆವಣ್ಣ
ಅದನೆ ಒಮ್ಮೊಮ್ಮೆ  ಮೂಡಿಸುವದು ಈ ಭೂಮಿ ಬಸಿರ ಬಣ್ಣ.
೨೭
ನಮ್ಮ ಕಾಣ್ಕೆ ಒಮ್ಮೊಮ್ಮೆ ಮೂಡುವದು ತೆರೆದು ಮಣ್ಣ ಕಣ್ಣ
ಒಂದು ಶಕ್ತಿ ಇದೆ ಒಳಗೆ, ಅದರಿದಿರು ನಮ್ಮ ಜ್ಞಾನ ಸಣ್ಣ
ನಂ ವಿಚಾರಗಳಿಗಿಂತ ನಾವು ಮಿಗಿಲಾಗಿ ಇರುವೆವಣ್ಣ
ಭೂಮಿ ಒಮ್ಮೊಮ್ಮೆ ತೆರೆದು  ತೋರುವದ ಆ ಕಾಣ್ಕೆಯನ್ನೆ.
೨೮
ಅಮೃತ ಆತ್ಮಗೈಯುವದು ಕಾರ್ಯವನು  ಗಹನಗುಹೆಯ ಸೇರಿ
ಹೃದಯ ಮನಗಳನು ರೂಪುಗೊಳಿಸುವದು ಸ್ವಪ್ರಭಾವ ಬೀರಿ
ಅಮೃತವಾಗುವವು ಆತ್ಮದೊತ್ತಡಕೆ ಮರ್ತ್ಯತೆಯನು ಮೀರಿ.
೨೯
ಸೃಷ್ಟಿ ಹೃದಯದಲಿ ವೇದಗಳ ಧರಿಸುವಳು
ಜಯಶೀಲ ಕರವಾಳದಂತೆ ಬಲ ಮೆರೆಸುವಳು
ನೋಡುತಿರುವಂತೆಯೇ ಚಿರಸುಖವ ಹರಿಸುವಳು.
೩೦
ಮರಗೂಳಿ ಮಣ್ಣಿನಲಿ ಬೆಳಕು-ನೆರೆ ತುಂಬಿತ್ತು
ಕುಡಿ ಹೊತ್ತಿ ಮಡಿ-ಮೂರ್ತಿ ಮಾಡಲಾಯ್ತು
ಧ್ಯಾನದೀಪಿತ ಕಿರಣ ನಮ್ಮ ನೆಲ ಮುಟ್ಟಿತ್ತು
ದೇವ-ಜೀವರ ಮನಕೆ ಆಯ್ತು ಸೇತು.
೩೧
ಮಾಯೆಯಾಗಿ ಬಂದಿತ್ತು ಬಸಿರಿನಲಿ ಹಸಿದು ವಿಶ್ವದಗಲ
ಬಯಕೆಯಾಗಿ ಬೀಸಿತ್ತು ಬಲವು ತಾನಾಗಿ ಪ್ರಾಣಾನಿಲ
ಬ್ರಹ್ಮಕರ್ಮ ಪ್ರತಿಸರ್ಗದಲ್ಲಿ ಬರೆ ತಾ ವಿಸರ್ಗವೆನಿಸಿ
ಜೀವ ಬಸಿರಿನಲಿ ಚಿಗುರಿ ಹೂತಿತ್ತು ತಾ ನಿಸರ್ಗವೆನಿಸಿ.

೩೨
ಜೀವನಲ್ಲಿ ತುಂಬಿಪಳು ತಾಯಿ ತಾನಾಗಿ ದೇವನೊಲವು
ಮನೋರಾಜ್ಯವನು ನಂಬಿ ಆಳುವಳು ಅರಳಿ ಅರಿವಿನೊಳವು
ಚುಂಬಿಸುವಳು ತನ್ನತ್ತ ಎಲ್ಲ ಹೊಮ್ಮಿರಲು ಪ್ರಾಣಬಲವು
ಬಿಂಬಿಸುವಳು ಪ್ರತಿಬಿಂಬದಂತೆ ಅಂಗಾಂಗವಾಗಿ ಚೆಲುವು.
೩೩
ಇದ್ದುದೆಲ್ಲವೂ ತಿರುಳಿನೊಳವು, ಒರಿಬಲವು, ಚೆಲುವು ಒಲಿವು,
ನಿದ್ದೆ ತಿಳಿದು ಎದ್ದಾಗ ಬೀಜವೇ ಮರವು ಹಲವು ಫಲವು,
ಒಗ್ಗಿದಾಗ ಕಾಣುವದು ಕಾಣದಾನಂದಮಗ್ನನಲ್ಲಿ
ಭೂಮವೆಂಬಂತೆ ಭೂಮಿ ಮೆರೆಯೆ ವಿಜ್ಞಾನಲಗ್ನದಲ್ಲಿ.
೩೪
ಸದ್ಭಾವದೊಂದು ಎದೆಮಿಡಿತದಂತೆ ಓಂಕಾರ ಧ್ವನಿಸುತಿಹುದು
ಚಿತ್ತ ಚೇತನವು ಅರಿತುದನ್ನೆ ಮರೆತಂತೆ ನೆನಿಸುತಿಹುದು
ನಾಟ್ಯ ನಟಿಸಿತ್ತು ರಂಗಭೂಮಿಯಲಿ ಅನಿರ್ವಾಚ್ಯವಾಗಿ
ಸಾಕ್ಷಿಪ್ರೇಕ್ಷಕನ ಚಿತ್ತರಂಗದಲಿ ಹೃದಯ ಸೂಚ್ಯವಾಗಿ.
೩೫
ದಿವ್ಯನಾಕದಲಿ ದಿವ್ಯಲೋಕದಲಿ ದಿವ್ಯಪಾಕವಿದ್ಯೆ
ಶುದ್ಧರಸವೆ ಓ ಸಿದ್ಧರಸವೆ ಇರುವರಿವು ಒಗ್ಗಿ ಇದ್ದೆ
ದಿವ್ಯತೂರ್ಯ ಎಚ್ಚರಿಸುತಿರಲು ಸುತ್ತೆಲ್ಲ ದಿವ್ಯನಿದ್ದೆ
ದಿವ್ಯಸ್ವಪ್ನ ಕಣ್ತೆರವು ಮಾಡೆ ಆಹ ದಿವ್ಯ ಕಾಣಲಿದ್ದೆ.
೩೬
ಮಮತೆಯಲ್ಲಿಯೂ ಸಮತೆ ಬೇಕು, ವಿಶ್ರಾಂತಿಯಲ್ಲಿ ಶಾಂತಿ,
ದುಃಖ ಸುಲಿದು ಸುಖವುಣ್ಣ ಬೇಕು,ನಗೆಯಲ್ಲಿ ಬೇಡ ಭ್ರಾಂತಿ,
ವೈರವಿಲ್ಲದಾ ವೀರ್ಯ ಬೇಕು, ಸೊಕ್ಕಿರದ ಶಕ್ತಿ ಬೇಕು.
ಭಂಡಿತನವಿರದ ಹಠವು ಇರಲಿ, ಆ ಸತ್ಯಶ್ರದ್ಧೆ ಸಾಕು.
೩೭
ಭವವು ಬೇಕು, ಅನುಭವವು ಬೇಕು, ಅನುಭಾವ ಬೇಕು ಒಳಗೆ,
ಸ್ವಯಂಭುತ್ವದಾ ಜ್ಞಾನ ಬೇಕು, ಆ ಧೀಸಮಾಧಿ ಬೆಳಗೆ
ಮೂರು ಕಾಲಕೂ ಸೂರು ಕಾಲದಾ ಸೃಷ್ಟಿ ದೃಷ್ಟಿ ಇರಲಿ
ಅಷ್ಟದಿಗ್ಗಳು ಅಷ್ಟತನುವೊ ಎನೆ ಕಟ್ಟಿಕೊಂಡು ಬರಲಿ.

೩೮
ದೇಹದಲ್ಲಿ ಸೌಂದರ್ಯವಿರಲಿ, ಆರೋಗ್ಯ ಪ್ರಾಣದಲ್ಲಿ;
ಮನಸಿನಲ್ಲಿ ಉತ್ಥಾನವಿರಲಿ, ಆನಂದ ಜೀವನಲ್ಲಿ;
ಕರ್ಮದಲ್ಲಿ ಬೆಳಗಿರಲಿ ಜೀವನವು, ಧರ್ಮದಲ್ಲಿ ಕಾಮ;
ಕಾಲುಕೈಯು ಕೈದಾಗಿ ಕುಣಿಸುವಾ ಕೃಷ್ಣ ಯೋಗ ನೇಮ.
೩೯
ಸಹಜವೆಂದು ಇದ್ದಂತೆ ಇರಲು ಅದು ಶುದ್ಧವಲ್ಲ ಹಾದಿ.
ಸ್ವಸ್ವಭಾವದಲಿ ಆತ್ಮಮುಕ್ತ ಸಂಬಂಧವಿದೆ ಅನಾದಿ
ಬದ್ಧರಂತೆ ತಿಣುಕುವದದೇಕೆ ಆ ಸಿದ್ಧಮಾರ್ಗ ಬೇರೆ.
ಭುಕ್ತಿಮುಕ್ತಿ ಬಾಯ್ದೂಡಿಸಿಹವು; ಯೋಗಕ್ಕೆ ಇದುವೆ ಮೇರೆ.
೪೦
ಏಕವಿದ್ದರೂ ಸರ್ವವೇಕೆ ಒಳಗೊಳ್ಳಬಾರದಣ್ಣ?
ಸಾಂತವೆಲ್ಲ ಆನಂತ್ಯಮುಖವು ಅದಕೇಕೆ ತೋರ-ಸಣ್ಣ?
ಜ್ಞಾನದಲ್ಲಿ ಆನಂದವಿರಲಿ, ಆನಂದದಲ್ಲಿ ಜ್ಞಾನ
ಬ್ರಹ್ಮಮಾನದಲಿ ಬ್ರಹ್ಮಗಾನದಲಿ ಬ್ರಹ್ಮವೇಕತಾನ.
೪೧
ಒಲವಿನಲ್ಲಿ ಬೆಳಿ, ಒಲವಿನಲ್ಲಿ ಉಳಿ, ಒಲವೆ ಬಾಳ ಚೆಲವು,
ಒಲ್ಲದಿಲ್ಲ, ಒಲಿಯುವದು ಎಲ್ಲ, ಒಲಿಯುವದೆ ಬದುಕು-ಬಲವು.
ನಾಂದ ನಾಲಿಗೆಯು ನೀರಿನಲ್ಲಿ ನೆನೆಯುವದು ನಲುಮೆ-ನಲಿವು.
ನಲ್ಲರೆದೆಯ ನನ್ನಿಯಲಿ ಹೂತು ಜಗ ತುಂಬುತಿಹವು ಹಲವು. ।
೪೨
ಹುಂಜ ಹೇಂಟೆಗಳ ಕಾವಿನಲ್ಲಿ ರೂಪಾಯ್ತು ನೀರತತ್ತಿ
ಆಕಾಶ ತುಂಬಿ ಆನಂದವಿತ್ತು ಆನಂದವನ್ನೆ ಬಿತ್ತಿ
ಜಗವು ಜಂಗಮವು ಜೀವ- ಪ್ರಾಣಗಳ ಚಿತ್ರಕಾಯ್ತು ಭಿತ್ತಿ
ಇದು ಹಸ್ತ-ಮಳೆಯ ಬಿಸಿಯುಸಿರು ಹಸಿರು, ಅಲ್ಲಣ್ಣ ಕುರುಡು-ಚಿತ್ತಿ.
೪೩
*ಇದು ಪ್ರಕೃತಿ-ಪುರುಷ. ಓ ಬ್ರಹ್ಮಮಾಯೆ, ಅಲ್ಲಲ್ಲ! ಶೈವ-ಶಕ್ತಿ*
*ಮಾತೆ ಭಂಗಾರ, ಮಾತೆ ಸಿಂಗಾರ, ಮಾಟ ಕಾವ್ಯ ಯುಕ್ತಿ.*
*ಎಲ್ಲಿಹುದು ಭಕ್ತಿ, ಅಲ್ಲಿಹುದು ಶಕ್ತಿ, ಬೇಕೇಕೆ ಒಣ ವಿರಕ್ತಿ?*
*ಜ್ಞಾನಬೀಜದಲಿ ಚಿಗುರಿಬಂತು ಸಚ್ಚಿದಾನಂದ ಮುಕ್ತಿ.*

೪೪


ಭ್ರಾಂತಿಗೀಂತಿ ಹೊರಹೊಳಪು ತರದು, ಇದು ಅಲ್ಲ ರಜತಶುಕ್ತಿ.
ಇದು ನೀತಿಯಲ್ಲ, ಇತಿಪ್ರೀತಿಸ್ವಾತಿ ಮೌಕ್ತಿಕದ ದೈವ-ಭುಕ್ತಿ.

- ಚೈತ್ಯಾಲಯ-೪೭/ಪ್ರ : ೧೯೫೭
('ವಚನಗಳು' ಎಂಬ ಶೀರ್ಷಿಕೆ ಇತ್ತು)

---

ಭಾವ : ಶ್ರೀ ಮಾತಾ ಶ್ರೀ ಅರವಿಂದರ ಉಕ್ತಿಗಳ ಭಾವಾನುವಾದ.

ಶಬ್ದಾರ್ಥ : ಭೂಮಾ=ಪರಮಾತ್ಮ. ಸ್ಥಾಣು=ಸ್ಥಿರವಾದ. ಕರವಾಳ=ಖಡ್ಗ. ಸರ್ಗ=ಸೃಷ್ಟಿ, ಅಧ್ಯಾಯ. ವಿಸರ್ಗ=ವಿಶೇಷವಾದ ಸೃಷ್ಟಿ ರಜತಶುಕ್ತಿ=ಮುತ್ತಿನ ಬಿಳಿಯ ಚಿಪ್ಪು



## ೫೧ ಸುಪ್ರಭಾತೇ

೧

ಅವರ್ಣನೀಯಂ ಮೌನೇ ಗ್ರಾಹ್ಯಮ್
ಭಾವೇ ಗಮ್ಯಂ ಹೃದಯೇ ಧ್ವನಿತಮ್
ಹತಂ ಹತಂ ಯದಿ ವಾಚ್ಯಮವಾಚ್ಯಮ್
ಸುರತಟಿನೀವ ಚ ಶಿರಸಿ ವಿಧಾರ್ಯಮ್.

೨

ಅನಾಹತಂ ಓಂ ಸತ್ ಚಿತ್ ಸುಖದಮ್
ಶಾಂತಮತೀತಂ ಉತ್ತರೋತ್ತರಮ್
ಉನ್ಮೀಲಿತಮಿವ ಅಂತರ್ನೇತ್ರಮ್
ಅವತಾರಿತಮಿವ ವಿಶ್ವೋದ್ಧಾರ್ಯಮ್.

೩

ಹಿರಣ್ಯಗರ್ಭಂ ಮಧುಸಂದರ್ಭಮ್
ಅನಿಮಿತ್ತಂ ಬತ ಮಾತೃಕೃಪೇವ
ಸದೇವ ಸದೇವ ಕೇವಲಮೇವಮ್
ಪಿಂಡೇ ರೂಪಿತಮಿದಮನಿವಾರ್ಯಮ್.

೪

ನಾಟ್ಯಗೃಹಂ ತತ್ ಭಾರತರೂಪಮ್
ಪ್ರೇಕ್ಷಕಸಾಕ್ಷಿಕನಾಟಕದೀಪಮ್
ಉತ್ತರಣೀಯಂ ಆರ್ಯಂ, ಆರ್ಯಮ್
ಸ್ವಾಂಗೇ ಲಿಂಗೇ ಧರ್ಮಂ ಧಾರ್ಯಮ್.

೫

ನಟರಾಜೇ ಯತ್ ದೃಷ್ಟಮಪೂರ್ವಮ್
ಲೀಲಾಯಿತಮಿದಮದೃಷ್ಟಪೂರ್ವಮ್
ಪಂಚಮುಖೇ ಯತ್ ಪ್ರಪಂಚಾಯಿತಮ್
ನರನಾರೀ ಗುಣದಂಪತಿಕಾರ್ಯಮ್.

೬

*ಉಪರ್ಯುಪರಿ ಸಂಭೂತಂ ಪ್ರೀತಮ್*
*ಕಾರಣಕ್ಷೇತ್ರೇ ಭಗವದ್ಗೀತಮ್*
*ಕರಣೇ ಪರಿಣಮಿತಂ ವ್ಯತಿರಹಿತಮ್*
*ಶಿವಶಕ್ತ್ಯಾ ಕೃತಸಹಜಂ ಸಹಿತಮ್.*

- ನಮನ-೩೮/ಪ್ರ : ೧೯೫೮

---

ಭಾವ : ಸದ್ಯದ ಸಂಕ್ರಮಣಕಾಲವನ್ನು ಕುರಿತು ಬರೆದದ್ದು. ಸುಪ್ರಭಾತಕ್ಕೆ ತಾಯಿಯ ಕೃಪೆಯ ಅವಶ್ಯಕತೆ ಸೂಚಿಸಲಾಗಿದೆ.

ಶಬ್ದಾರ್ಥ : ಉನ್ಮೀಲಿತ=ಅರಳಿದ.

ವಿಶೇಷ . ನಾಟಕದೀಪ ಎಂಬ ವಿಷಯದ ವಿವರಣೆ ಶ್ರೀ ವಿದ್ಯಾರಣ್ಯರ ಪಂಚದಶಿಯಲ್ಲಿ ಇದೆ.



# ೫೨ ಸಂಕಷ್ಟ ಹರಣಾಷ್ಟಕ ಮುಕ್ತಾವಲಿ

೧

*ಕಡೆಗೋಲು, ಕಡೆ-ಧಾರ-ಹಿಡಿದ ಸಿದ್ಧನೆ! ಕೃಷ್ಣ!*
*ಕಡಲು ಮೂರಿಲ್ಲವೋ ಕಡೆಯ ಬಾ ಮತ್ತೆ.*
*ಮಂಥನ ಮುಹೂರ್ತವನೆ ಚಿಂತಿಸುತ 'ನಿಂತೆಯೋ?*
*ಕ್ಷೀರಸಾಗರದಲ್ಲಿ ಉಪ್ಪು ಇತ್ತೇ?*

೨

ಒಡೆದ ಸಾಗರದಲ್ಲಿ, ಸಿಡಿದ ಸಾಗರದಲ್ಲಿ
ನುಡಿವ ಸಾಗರದಲ್ಲಿ ಕೋಟಿ ಮೀನ
ಉಣಿಸುವವ ಉಪಕಾರಿ ಬಲೆಯ ಬಾಯಿಗೆ ತುತ್ತು
ಉಣಿಸುವವನು ಇಂದಿಗೂ ಕೊಂಗ ದೀನ.

೩

ಸ್ಮರಣೆಯಲಿ ಸ್ಮರನು ರುಚಿ, ಕರುಣೆಯಲಿ ಗಂಗೆ ಶುಚಿ
ಕಡಲು ವಡವಾನಲದ ಪಾಲುಗಾರ.
ಆಲದೆಲೆ ಬಾಲನೇ ಉಂಗುಟದ ಹಾಲನೇ
ಪ್ರಳಯ ಜಳಧಿಯ ಕಡೆದು, ಎತ್ತಿ ತೋರ.

೪

ತ್ರೀ ಚರಣಗಳಿಗೆ ನೆಲೆ, ಮೂಬಲಿಯ ಎತ್ತುತಲೆ
ಅವನ ಪಾದಕೆ ಕಲಿಯ ಚೆಂಡುಹೂವು
ಸಿರಿಯ ತೊಡೆ ಕಾಲಿನೆಡೆ, ಹಾಲ್ಗಡಲು ಜೋಗುಳವು
ಯೋಗನಿದ್ರೆಗನಂತಶಯನ ಹಾವು.

೫

*ಆನಂದ ತೀರ್ಥದಲಿ ಆಚೆ-ಈಚೆಗೆ ವೀಚಿ*
*ಸಂಬಂಧ ಐಕ್ಯವೇ ವೇದ್ಯ, ಸಾಧ್ಯ*
*ವೇದವಾಣಿಯ ಮನೆಗು ಆದಿವಾಣಿಯ ಧ್ವನಿಗು*
*ಊರ್ಧ್ವಕ್ಕೆ ಅಧ್ವಕ್ಕೆ ಮಧ್ವ-ಮಧ್ಯ!*

೬

ರಾಮ ಕೃಷ್ಣ ಹರೀ ವಿಟ್ಠಲ, ಪತಿತೋದ್ಧಾರಿ
ಅಹಮಿಂಬಹಂಕಾರ ಪಾತಕಕೆ ಮುಖ್ಯ
ನೀನೇ ಶರಣ್ಯನೈ, ನಾನು ಅಶರಣ ಭಕ್ತ
ಇಲ್ಲಿ ಕೂಡಿದೆ ನಿಮ್ಮ-ನಮ್ಮ ಸಖ್ಯ.

೭

ಕಾಲಿನಿಂದಲೆ ಮೆಟ್ಟು, ಕೈಯಿಂದಲೇ ಮುಟ್ಟು
ನಿನ್ನ ಸ್ಪರ್ಶದ ಬೆಲೆಯ ತೆತ್ತಲಾರೆ
ಕಾಲಿಂದಿ ಮಡುವಿನಲಿ ಕಾಳಿಂಗನಿರಲುಂಟು
ಆ ಕಾಲ ನೆಲೆಗೆ ತಲೆ ಎತ್ತಲಾರೆ

೮


ನೀನಾಗು ಅವತಾರಿ. ನಾನು ಗುಡ್ಡದ ಹರಿ
ಮಲೆಮಲೆಗೆ ಅಭಿಷೇಕ ನಿನ್ನ ದಘಾರಿ
ಮುತ್ತುದುರಿದಂತೆ ನಾ ಮುತ್ತರಳಿ, ಚಿತ್ತರಳಿ
ಶರಣು ಶರಣೆನ್ನುವೆನು ಲಕ್ಷ ಬಾರಿ.

- ಇದು ನಭೋವಾಣಿ-೮/ಪ್ರ : ೧೯೭೦.

---


ಭಾವ : ಬೇಂದ್ರೆಯವರ ಸರ್ವಾರ್ಪಣ ಸಿದ್ಧ ಕೃಷ್ಣ ಭಕ್ತಿಯ ಪ್ರತೀಕ ಈ ಕವನ

ಶಬ್ದಾರ್ಥ : ಕೊಂಗ-ಕೊಯಿಮತ್ತೂರ ಸುತ್ತಲಿನ ಕೊಂಗದೇಶದವ. ವಡವಾನಲ=ಬಾಡಬ=ಕಡಲ್ಗಿಚ್ಚು, ಪ್ರಲಯಾಗ್ನಿ ಪೀಚ=ತೆರ, ಅಲೆ ಕರಣ. ಅಧ್ವ=ದಾರಿ, ಮಾರ್ಗ. ಮಧ್ವ=ಮಧ್ವಾಚಾರ್ಯ. ಅಧ್ವ+ಮಧ್ವ+ಊರ್ಧ್ವ=ಅ+ಉ+ಮ=ಓಂ=ಮೂರು ಮಾರ್ಗ. ಒಂದೇ ಶಿಖರ.



# ಭಾಗ -೨

## ಸ್ವರ ಸಂಯೋಜನೆ
### ಹಿಂದೂಸ್ತಾನಿ/ಕರ್ನಾಟಕಿ ಶಾಸ್ತ್ರೀಯ ಸಂಗಿತಕ್ಕಾಗಿ



''ಅಂಬಿಕಾತನಯದತ್ತ ಬೇಂದ್ರೆ ಕಂಡ ಭಾವ ರಾಗ ಮಂಜರಿ'' ಎಂಬ ಈ ಕೃತಿಯಲ್ಲಿಯ ಗೀತಗಳಿಗೆ ಹಿಂದೂಸ್ತಾನಿ ಹಾಗೂ ಕರ್ನಾಟಕಿ ಹೀಗೆ ಎರಡೂ ರೀತಿಯ ಶಾಸ್ತ್ರೀಯ ಸಂಗೀತ ಪದ್ಧತಿಗಳನ್ನು ಅನುಸರಿಸಿ ಸ್ವರ ಸಂಯೋಜನೆ ಮಾಡಲಾಗಿದೆ. ಇಲ್ಲಿಯ ಎಲ್ಲ ಸೂಚನೆಗಳನ್ನು ಗ್ರಹಿಸಿ ಹಾಡುಗಾರರು ತಮ್ಮ ಗಾನ ಕೌಶಲ್ಯವನ್ನು ಅಭಿವ್ಯಕ್ತಪಡಿಸಬೇಕಾಗಿ ಬಿನ್ನಹ

– ಸಂ.

# ಅನುಕ್ರಮಣಿಕೆ

ಸ್ವರ ಸಂಯೋಜನೆ : ಶ್ರೀಮತಿ ವಸಂತಾದೇವಿ ರಾ. ಜಂತಲಿ
ಶ್ರೀಮತಿ ವೀಣಾ ಶಿರಾಲಿ

| ಅ.ನಂ. | ಹಾಡಿನ ಹೆಸರು | ರಾಗ | ತಾಳ | ಪದ್ಧತಿ |
|---|---|---|---|---|
| ೧. | ಕಮಲವನ ಸಂಚಾರಿಣಿ | ಮಧುವಂತಿ | ಏಕತಾಲ | ಹಿಂದುಸ್ತಾನಿ |
| ೨. | ಬೆಳ್ಳಿ ಹೂ | ಮಧುವಂತಿ | ತ್ರಿತಾಲ | ಹಿಂದುಸ್ತಾನಿ |
| ೩. | ಶಾರದೆಯೇ | ತೋಡಿ | ಏಕತಾಲ | ಹಿಂದುಸ್ತಾನಿ |
| ೪. | ಶಂಕರಾ-ಶುಭಂಕರಾ | ಶ್ರೀ | ರೂಪಕ್ | ಹಿಂದುಸ್ತಾನಿ |
| ೫. | ಪರಾಗ | ಯಮನ್ | ಏಕತಾಲ | ಹಿಂದುಸ್ತಾನಿ |
| ೬. | ನಮ್ಮ ಗೋವಿಂದ | ಯಮನ್ | ತ್ರಿತಾಲ್ | ಹಿಂದುಸ್ತಾನಿ |
| ೭. | ನಾಲ್ವರು ತಾಯಂದಿರು | ಮಧಮಾದ ಸಾರಂಗ | ರೂಪಕ | ಹಿಂದುಸ್ತಾನಿ |
| ೮. | ನೀ ನಾಕನೇ ತಂತಿ | ಮಧಮಾದ ಸಾರಂಗ | ತ್ರಿತಾಲ್ | ಹಿಂದುಸ್ತಾನಿ |

| | | | | |
|---|---|---|---|---|
| ೯. | ದೃಷ್ಟಿ ಸೃಷ್ಟಿ | ಬಾಗೇಶ್ರೀ ಕೌಂಸ | ಏಕತಾಲ | ಹಿಂದುಸ್ತಾನಿ |
| ೧೦. | ಕಣ್ಣ ಕಾಣಿಕೆ | ಬಾಗೇಶ್ರೀ ಕೌಂಸ | ಏಕತಾಲ | ಹಿಂದುಸ್ತಾನಿ |
| ೧೧. | ಗಂಗಾವತರಣ | ಚಂಪಾಕಲಿ | ಏಕತಾಲ | ಹಿಂದುಸ್ತಾನಿ |
| ೧೨. | ರಮ್ಯ ಅಗಮ್ಯ | ಚಂಪಾಕಲಿ | ಏಕತಾಲ | ಹಿಂದುಸ್ತಾನಿ |
| ೧೩. | ಮಳೆಗಾಲ | ಭಿನ್ನ ಷಡ್‌ಜ | ಏಕತಾಲ | ಹಿಂದುಸ್ತಾನಿ |
| ೧೪. | ಬಾರೋ ಬಾ | ಭಿನ್ನ ಷಡ್‌ಜ | ಏಕತಾಲ | ಹಿಂದುಸ್ತಾನಿ |
| ೧೫. | ಅಲಕ್ಷ್ಯ ಸುಂದರ ಪ್ರತಿಬಿಂಬಗಳು | ಸೋಹನಿ | ಏಕತಾಲ | ಹಿಂದುಸ್ತಾನಿ |
| ೧೬. | ಸ್ಮರಣ ತರಂಗಿಣಿ | ಸೋಹನಿ | ತ್ರಿತಾಲ | ಹಿಂದುಸ್ತಾನಿ |
| ೧೭. | ಹೂ | ಜಯಜಯವಂತಿ | ಏಕತಾಲ | ಹಿಂದುಸ್ತಾನಿ |
| ೧೮. | ಪಾರಿಜಾತ | ಜಯಜಯವಂತಿ | ಏಕತಾಲ | ಹಿಂದುಸ್ತಾನಿ |

| ಕ್ರ.ಸಂ. | ಹಾಡಿನ ಹೆಸರು | ರಾಗ | ತಾಳ | ಪದ್ಧತಿ |
|---|---|---|---|---|
| ೧೯. | ಇದು ಯುಗಾದಿ | ಬಹಾರ | ಏಕತಾಲ | ಹಿಂದುಸ್ತಾನಿ |
| ೨೦. | ಧ್ರುವಮಾರ್ಗ | ದೇವ ಗಾಂಧಾರ | ಏಕತಾಲ | ಹಿಂದುಸ್ತಾನಿ |
| ೨೧. | ಬಾ ಬೇಗ | ಮೇಘ | ಝಪತಾಲ | ಹಿಂದುಸ್ತಾನಿ |
| ೨೨. | ಮಿಂಚು | ಮೇಘ | ಏಕತಾಲ | ಹಿಂದುಸ್ತಾನಿ |
| ೨೩. | ಸರಸ್ವತಿ | ಮಾಲಕೌಂಸ | ಝಪ್‌ತಾಲ | ಹಿಂದುಸ್ತಾನಿ |
| ೨೪. | ನಿನಾದಿನೀ ದೇವತಾ ಸರಸ್ವತಿ | ಮಾಲಕೌಂಸ | ಏಕತಾಲ | ಹಿಂದುಸ್ತಾನಿ |
| ೨೫. | ಅರವಿಂದನಾಭನ ಪಾದಾರವಿಂದಕ್ಕೆ | ಸರಸ್ವತಿ | ತ್ರಿತಾಲ | ಹಿಂದುಸ್ತಾನಿ |
| ೨೬. | ಬರುವಳು ಬರುವಳು | ಸರಸ್ವತಿ | ತ್ರಿತಾಲ | ಹಿಂದುಸ್ತಾನಿ |
| ೨೭. | ಅಜ್ಞಾನಹಂಕಾರ ನಾಶಿನೀ | ನಟ ಭೈರವ್ | ರೂಪಕ್ | ಹಿಂದುಸ್ತಾನಿ |

| | | | | |
|---|---|---|---|---|
| ೨೯. | ಪಿನಾಕಿ ರುದ್ರ | ಲತಾಂತಪ್ರಿಯ | ತ್ರಿತಾಲ | ಹಿಂದುಸ್ತಾನಿ |
| ೩೦. | ಅಗಾಧ ಗಾಥಾ | ಮಲಯ ಮಾರುತ | ಏಕತಾಲ | ಹಿಂದುಸ್ತಾನಿ |
| ೩೧. | ನಾಕು ತಂತಿ | ಮಲಯ ಮಾರುತ | ತ್ರಿತಾಲ | ಹಿಂದುಸ್ತಾನಿ |
| ೩೨. | ಧ್ವನಿ ಸೂತ್ರ | ಬಸಂತ ಮುಖಾರಿ | ಏಕತಾಲ | ಹಿಂದುಸ್ತಾನಿ |
| ೩೩. | ಚೈತನ್ಯದ ಪೂಜೆ | ಬಸಂತ ಮುಖಾರಿ | ತ್ರಿತಾಲ | ಹಿಂದುಸ್ತಾನಿ |
| ೩೪. | ಆನಂದ ಭೈರವಿ | ಸಾಲಗವರಾಳಿ | ತ್ರಿತಾಲ | ಕರ್ನಾಟಕಿ |
| ೩೫. | ನುಡಿಯ ಕೇಳಿ | ಸಾಲಗವರಾಳಿ | ತ್ರಿತಾಲ | ಕರ್ನಾಟಕಿ |
| ೩೬. | ಧನ್ಯ ವೃಂದಾವನಾ | ಕೀರವಾಣಿ | ತ್ರಿತಾಲ | ಕರ್ನಾಟಕಿ |

| ಅ.ನಂ. | ಹಾಡಿನ ಹೆಸರು | ರಾಗ | ತಾಳ | ಪದ್ಧತಿ |
|---|---|---|---|---|
| ೩೭. | ಪ್ರತ್ಯಕ್ಷ | ಪರಮೇಶ್ವರಿ | ರೂಪಕ್ | ಕರ್ನಾಟಕಿ |
| ೩೮. | ಶಾಂಭವೀ | ಕೋಮಲ ರಿಷಭ ದುರ್ಗಾ | ಏಕತಾಲ | ಕರ್ನಾಟಕಿ |
| ೩೯. | ಸಪ್ತಕಲಾ | ಕೋಮಲ ರಿಷಭ ದುರ್ಗಾ | ತ್ರಿತಾಲ | ಕರ್ನಾಟಕಿ |
| ೪೦. | ಗೋವತ್ಸಲೀಲೆ | ಸಿದ್ಧರಂಜನಿ | ಏಕತಾಲ | ಕರ್ನಾಟಕಿ |
| ೪೧. | ಕಲ್ಪವೃಕ್ಷ ವೃಂದಾವನಂಗಳಲಿ | ಸಿದ್ಧರಂಜನಿ | ತ್ರಿತಾಲ | ಕರ್ನಾಟಕಿ |
| ೪೨. | ಹುಟ್ಟನ ಗುಟ್ಟು | ಚಾರುಕೇಶಿ | ತ್ರಿತಾಲ | ಕರ್ನಾಟಕಿ |
| ೪೩. | ದೇವ ವೀಣೆ | ಚಾರುಕೇಶಿ | ಏಕತಾಲ | ಕರ್ನಾಟಕಿ |
| ೪೪. | ಕೊಳಲನೂದಿದನಽ ಸ್ವಾಮಿ | ವಿಶಾರದ | ತ್ರಿತಾಲ | ಕರ್ನಾಟಕಿ |
